ಅಧ್ಯಾಯ – ೧

## ಪ್ರಾಸ್ತಾವಿಕ

**ದೇ**ವಾಲಯಗಳ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರತೀಕವೆಂದು ಪ್ರಸಿದ್ಧಿ ಇರುವ ಉಡುಪಿ ಜಿಲ್ಲೆಯು ಮೂರು ತಾಲೂಕುಗಳನ್ನೊಳಗೊಂಡ ಪುಟ್ಟ ಜಿಲ್ಲೆಯಾಗಿದೆ. ಪಶ್ಚಿಮದಲ್ಲಿ ಭೋರ್ಗರೆಯುವ ಅರಬೀ ಸಮುದ್ರ, ಪೂರ್ವದಲ್ಲಿ ದಟ್ಟ ಹಸಿರಿನ ಸಹ್ಯಾದ್ರಿ ಬೆಟ್ಟ ಶಿಖರಗಳ ಸಾಲುಗಳ ನಡುವೆ ಇರುವ ಜಿಲ್ಲೆಯು ಸುಮಾರು ೧೦೦ ಕಿ.ಮೀ ಉದ್ದದ ಸುಂದರವಾದ ಕಡಲ ಕಿನಾರೆಯನ್ನು ಹೊಂದಿದೆ. ಮಲ್ಪೆಯು ಜಿಲ್ಲೆಯ ಏಕೈಕ ಬೃಹತ್ ನಿಸರ್ಗದತ್ತ ಬಂದರಾಗಿದೆ. ಇದೀಗ ಬೃಹತ್ ಮೀನುಗಾರಿಕಾ ಬಂದರಾಗಿ ಅಭಿವೃದ್ಧಿಯನ್ನು ಹೊಂದುತ್ತಲಿದೆ. ಇಡೀ ರಾಜ್ಯಕ್ಕೆ ಹಾಗೂ ಹೊರರಾಜ್ಯಗಳಿಗೆ ಸಾಗರೋತ್ಪನ್ನಗಳನ್ನು ಪೂರೈಸುವ ಬೃಹತ್ ಬಂದರೆಂಬ ಹೆಗ್ಗಳಿಕೆಗೂ ಪಾತ್ರವಾಗಿದೆ. ಮಲ್ಪೆಯ ಕಡಲ ತೀರದಲ್ಲಿ ನಿಂತರೆ ಹತ್ತು ಕಿ.ಮೀ ದೂರದಲ್ಲಿ ಕಾಣಿಸುವ, ತೆಂಗಿನ ಮರಗಳಿಂದ ಕಂಗೊಳಿಸುವ ಸೈಂಟ್ ಮೇರೀಸ್ ದ್ವೀಪ (ತೋನ್ಸೆ ಪಾರು ಎನ್ನುವುದು ಸ್ಥಳೀಯ ಹೆಸರು) ಮತ್ತು ಅದರ ಪಕ್ಕದಲ್ಲೇ ಕಾಣುವ ಬಹದ್ದೂರ್‌ಗಢ ಎಂಬ ಮತ್ತೊಂದು ದ್ವೀಪ ಪ್ರವಾಸಿಗರನ್ನು ಕೈಬೀಸಿ ಕರೆಯುವ ನಯನಮನೋಹರ ಪ್ರವಾಸಿತಾಣಗಳಾಗಿವೆ. ಉಡುಪಿಯಿಂದ ಹನ್ನೊಂದು ಕಿ.ಮೀ ದೂರದಲ್ಲಿರುವ ಕಾಪು, ಅತ್ಯಂತ ಸುಂದರ ಕಡಲ ಕಿನಾರೆಯಿಂದ ಹಾಗೂ ಬ್ರಿಟೀಷ್ ಕಾಲದಲ್ಲಿ ನಿರ್ಮಾಣಗೊಂಡ ದೀಪಸ್ತಂಭದಿಂದ ಪ್ರಸಿದ್ಧವಾಗಿದೆ. ಮರವಂತೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಸಾಗುವಲ್ಲಿ ಬಲಗಡೆ ತುಂಬಿ ಹರಿಯುವ ಸೌಪರ್ಣಿಕಾ ನದಿ, ಎಡಗಡೆ ಭೋರ್ಗರೆದು ಅಬ್ಬರಿಸಿ ತೀರವನ್ನು ಚುಂಬಿಸುವ ಅರಬೀ ಸಮುದ್ರ, ನಡುವೆ ರಾಜಗಾಂಭೀರ್ಯದಲ್ಲಿ ಸಾಗುವ ರಾಷ್ಟ್ರೀಯ ಹೆದ್ದಾರಿ, ಮರವಂತೆ ತೀರದಲ್ಲಿನ ಕಡಲಾಮೆಗಳ ಸಾಕಣೆ ಕೇಂದ್ರ ಪ್ರವಾಸಿಗರ, ನಿಸರ್ಗ ಪ್ರೇಮಿಗಳ ಹಾಗೂ ಜೀವಸಂಕುಲ ಅಧ್ಯಯನಶೀಲರನ್ನು ಆಕರ್ಷಿಸುತ್ತದೆ. ಹೆಬ್ರಿ ಸೋಮೇಶ್ವರ ನಡುವಿನಲ್ಲಿ ಸೀತಾನದಿ ಪ್ರದೇಶದಲ್ಲಿ ಕಂಡುಬರುವ ಅತ್ಯಂತ ಮನಮೋಹಕ ಪಕ್ಷಿಧಾಮ ಪ್ರಕೃತಿ ಪ್ರಿಯರನ್ನು ಸೆಳೆಯುತ್ತದೆ. ಇದೇ ಪರಿಸರದಲ್ಲಿ ಕಂಡುಬರುವ ಜೋಮ್ಲು ತೀರ್ಥ ಚಾರಣ ಪ್ರಿಯರ ಅಚ್ಚುಮೆಚ್ಚಿನ ತಾಣವಾಗಿದೆ. ಹೆಬ್ರಿ ಸೋಮೇಶ್ವರ ದಾಟಿ ಮುಂದೆ ಎದುರಾಗುವ ಆಗುಂಬೆ ಘಾಟಿಯನ್ನು ಏರಿ ಹೋದರೆ ಅಲ್ಲಿಂದ ರುದ್ರರಮಣೀಯವಾದ ಸೂರ್ಯಾಸ್ತದ ದೃಶ್ಯವನ್ನು ಕಾಣುವುದೇ ಒಂದು ರೋಮಾಂಚಕ ಅನುಭವವಾಗುತ್ತದೆ. ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿರುವ ಯಕ್ಷಗಾನದ ತವರೂರು ಉಡುಪಿ ಜಿಲ್ಲೆಯೆಂದರೆ ಅತಿಶಯೋಕ್ತಿಯಾಗುವುದಿಲ್ಲ. ಉಡುಪಿಯಿಂದ ಮೊದಲ ಬಾರಿಗೆ ಕಾಕಂಡ ಶ್ರೀನಿವಾಸ ಉಡುಪ ಮತ್ತು

ಶ್ರೀಧರ ಹಂಡೆಯವರ ನೇತೃತ್ವದಲ್ಲಿ ಸಾಲಿಗ್ರಾಮ ಮಕ್ಕಳ ಮೇಳದ ಯಕ್ಷಗಾನ ತಂಡ ವಿದೇಶಗಳಿಗೆ ಹೋಯಿತೆಂಬುದು ಈ ಜಿಲ್ಲೆಯ ಹೆಮ್ಮೆಯ ವಿಷಯವಾಗಿದೆ.

ಹೀಗೆ ಹಚ್ಚಹಸಿರಿನ ಪ್ರಕೃತಿಯ ಮಡಿಲಲ್ಲಿರುವ ಉಡುಪಿ ಜಿಲ್ಲೆಯು ನಿಸರ್ಗಪ್ರೇಮಿಗಳ ಅಚ್ಚುಮೆಚ್ಚಿನ ತಾಣವಾಗಿದೆ. ದೈವಭಕ್ತರಿಗೆ, ಆಸ್ತಿಕ ಮಹಾಶಯರಿಗೆ ಉಡುಪಿ ಜಿಲ್ಲೆಯು ಒಂದು ಅತ್ಯಪೂರ್ವ ಅಧ್ಯಾತ್ಮಿಕ ಕೇಂದ್ರವಾಗಿದೆ. ದೇವಾಲಯಗಳ ಸುಂದರ ಜಿಲ್ಲೆ, ಪವಿತ್ರ ಪುಣ್ಯ ಕ್ಷೇತ್ರಗಳು, ಪ್ರವಾಸಿಗರಿಗೆ ಮತ್ತು ಪ್ರಕೃತಿಪ್ರಿಯರಿಗೆ ಅತ್ಯಂತ ರಮಣೀಯ ತಾಣಗಳು ಇರುವ ಜಿಲ್ಲೆಯೆಂಬ ಖ್ಯಾತಿಯನ್ನು ಹೊಂದಿದೆ. ಅನೇಕ ದೇವಾಲಯಗಳು, ಚರ್ಚುಗಳು, ಮಸೀದಿಗಳು, ಜೈನ ಸ್ಮಾರಕಗಳು, ಸುಂದರ ಕಡಲ ತೀರ, ಐತಿಹಾಸಿಕ ಸ್ಥಳಗಳು, ಸಾಂಸ್ಕೃತಿಕ ಕೇಂದ್ರಗಳು, ವಿದ್ಯಾರ್ಜನೆಯ ಕೇಂದ್ರ್ರಗಳು, ವೈವಿಧ್ಯಮಯ ಜನಜೀವನ, ಅಭಯಾರಣ್ಯಗಳು ಹಾಗೂ ಜಲಪಾತಗಳನ್ನೊಳಗೊಂಡ ಸಮೃದ್ಧ ಜಿಲ್ಲೆಯಾಗಿದೆ.

## ಹೆಸರಿನ ಮೂಲ

ಕರ್ನಾಟಕದ ಪಶ್ಚಿಮ ಕರಾವಳಿ ಪ್ರದೇಶದ ದಕ್ಷಿಣ ತುದಿಯಲ್ಲಿರುವ, ಉಡುಪಿ ಜಿಲ್ಲೆಯನ್ನೊಳಗೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ನಾಮನಿಷ್ಪತ್ತಿಯ ಬಗ್ಗೆ ವಿವಿಧ ಅಭಿಪ್ರಾಯಗಳಿವೆ. ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳು ೧೮೬೦ರಲ್ಲಿ ಪ್ರತ್ಯೇಕಗೊಳ್ಳುವುದಕ್ಕೆ ಮೊದಲು, ಇಡೀ ಕರಾವಳಿ ಪ್ರದೇಶವನ್ನು 'ಕೆನರಾ/ಕನರಾ ಎಂದೇ ಕರೆಯಲಾಗುತ್ತಿದ್ದು, ಆನಂತರ ಅವುಗಳಿಗೆ ದಕ್ಷಿಣ ಕೆನರಾ ಹಾಗೂ ಉತ್ತರ ಕೆನರಾ ಎಂಬ ಹೆಸರು ಬಂದಿತು. 'ಕೆನರಾ/ಕನರಾ' ಪದವು 'ಕನ್ನಡ' ಪದದ ಪೋರ್ಚುಗೀಸ್ ರೂಪವಾಗಿದ್ದು, ಅವರು ಮೊದಲ ಬಾರಿಗೆ ಈ ಭಾಗದ ಜನರೊಂದಿಗೆ ಸಂಪರ್ಕ ಪಡೆದಾಗ, ಜನಸಾಮಾನ್ಯರ ವ್ಯವಹಾರಿಕ ಭಾಷೆ ಕನ್ನಡವಾಗಿದ್ದ ಕಾರಣ, ಅವರನ್ನು ಕನ್ನರಿ ಜನರೆಂದೂ, ಅವರಿದ್ದ ಪ್ರದೇಶವನ್ನು 'ಕನರಾ' ಎಂದೂ ಕರೆದಿದ್ದು, ಪೋರ್ಚುಗೀಸ್ ಭಾಷೆಯಲ್ಲಿ 'ಡ' ಹೆಚ್ಚು ಬಳಕೆಯಲ್ಲಿಲ್ಲದ್ದರಿಂದ 'ಕನ್ನಡ' ಪದವು 'ಕನರಾ' ರೂಪ ಪಡೆದು ರೂಢಿಗೆ ಬಂದಂತೆ ತೋರುತ್ತದೆ. ಆದರೆ ೧೮೬೦ರಲ್ಲಿ ಕೆನರಾ ಜಿಲ್ಲೆಯನ್ನು ಭೌಗೋಳಿಕವಾಗಿ ವಿಭಜಿಸಿದಾಗ ದಕ್ಷಿಣ ಕೆನರಾ ಹಾಗೂ ಉತ್ತರ ಕೆನರಾ ಜಿಲ್ಲೆಗಳು ಬೇರ್ಪಟ್ಟವು. ೧೯೫೬ರಲ್ಲಿ ಏಕೀಕೃತ ಕರ್ನಾಟಕವು ರೂಪಗೊಂಡ ಸಮಯದಲ್ಲಿ ಕಾಸರಗೋಡು ರಹಿತ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಉತ್ತರ ಕನ್ನಡ ಜಿಲ್ಲೆಗಳು ಕರ್ನಾಟಕದಲ್ಲಿ ವಿಲೀನಗೊಂಡವು. ೧೯೯೭ ರಲ್ಲಿ ಉಡುಪಿ ಜಿಲ್ಲೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಬೇರ್ಪಡಿಸಲಾಯಿತು.

ಪ್ರಾಚೀನ ಕಾಲದಿಂದಲೂ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನೊಳಗೊಂಡ ಕರಾವಳಿ ಪ್ರದೇಶವನ್ನು ಪೌರಾಣಿಕವಾಗಿ 'ಪರಶುರಾಮ ಕ್ಷೇತ್ರ', 'ಶಾಂತಿಕ ಕ್ಷೇತ್ರ', 'ನಾಗಯಿಂಡ', 'ಶೂರ್ಪಾಂಕ ಕ್ಷೇತ್ರ', 'ಅಪರಾಂತಕದೇಶ' ಎಂತಲೂ, ಚಾರಿತ್ರಿಕವಾಗಿ ಆಲುಪರ ಆಡಳಿತಾವಧಿಯಲ್ಲಿ ಆಳ್ವಖೇಡ–೬೦೦೦, ಸಪ್ತಕೊಂಕಣ ಪ್ರದೇಶದ ಆಲುವನಾಡು, ತುಳುನಾಡು ಎಂದೂ ಕರೆಯುವ ವಾಡಿಕೆ ಇದ್ದು, ಪೋರ್ಚುಗೀಸರ ಆಗಮನದ ನಂತರ ಕನರಾ/ಕೆನರಾ ಎಂದು ಈ ಪ್ರದೇಶಕ್ಕೆ ಹೆಸರು ಬಂದಿತು. ಪರಶುರಾಮನು ತನ್ನ ಪರಶು(ಕೊಡಲಿ)ವನ್ನು ಬೀಸಿ ಒಗೆಯುವ ಮೂಲಕ, ಸಮುದ್ರವನ್ನು ಹಿಂದಕ್ಕೆ ಸರಿಸಿ, ದಕ್ಷಿಣೋತ್ತರವಾಗಿ ಸೃಷ್ಟಿಸಿದ ನೆಲವೇ 'ಪರಶುರಾಮ ಕ್ಷೇತ್ರ'ವೆಂದು ಹೇಳಲಾಗುತ್ತದೆ. ಕಾಡನ್ನು ಕೊಡಲಿಯಿಂದ ಕಡಿದು ಕಬ್ಬಿಣ (ಬೃಹತ್ ಶಿಲಾ)ಯುಗದ ಮಾನವನು ನೆಲೆಯೂರಲು ಮುಂದಾದದ್ದೆ ಪರಶುರಾಮ ಕ್ಷೇತ್ರ ಸೃಷ್ಟಿಯ ಐತಿಹ್ಯದ ಹಿನ್ನೆಲೆಯೆಂದು ಕೆ.ವಿ. ರಮೇಶ್ ವಿಶ್ಲೇಷಿಸಿದ್ದಾರೆ.

ಪ್ರಾದೇಶಿಕವಾಗಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು "ತುಳುನಾಡು" ಎಂದೂ ಪ್ರಸಿದ್ಧವಾಗಿದ್ದ ಅಂಶವನ್ನು ಸುಮಾರು ಕ್ರಿ.ಶ.೧೫೦ರಲ್ಲಿ ರಚಿಸಲ್ಪಟ್ಟಿರುವ, ತಮಿಳು ಸಂಗಮ ಸಾಹಿತ್ಯ ಗ್ರಂಥ "ಅಗನಾನೂರು" ದಾಖಲಿಸಿದೆ. ಅಳುಪ ರಾಜ ಒಂದನೆಯ ಬಂಕೀದೇವನ ಕಾಲಕ್ಕೆ ಸೇರಿದ ಸುಮಾರು ೧೦೫೦ರ ಬಾರಕೂರು ಶಿಲಾಶಾಸನದಲ್ಲಿ 'ತುಳು ವಿಷಯ'ದ ಉಲ್ಲೇಖವಿದೆ. ಸುಮಾರು ೧೧೧೫ರಲ್ಲಿದ್ದ ನಯಸೇನನ ಧರ್ಮಾಮೃತ

ಗ್ರಂಥದಲ್ಲಿ 'ತುಳುನಾಡಿ'ನ ಪ್ರಸ್ತಾಪವಿದೆ. ವಿಜಯನಗರ ಕಾಲದ ಶಾಸನಗಳಲ್ಲಿ ಈ ಪ್ರದೇಶವನ್ನು 'ತುಳು ರಾಜ್ಯ'–'ತುಳು ದೇಶ' ವೆಂದು ಕರೆಯಲಾಗಿದ್ದು, ಅದರ ಭಾಗವಾಗಿದ್ದ 'ಮಂಗಳೂರು ರಾಜ್ಯ' ಹಾಗೂ 'ಬಾರಕೂರು ರಾಜ್ಯ'ಗಳ ಉಲ್ಲೇಖವೂ ಕಂಡುಬರುತ್ತದೆ.

ಈ ಪ್ರದೇಶದಲ್ಲಿ ಕನ್ನಡವು ಅಧಿಕೃತ ಭಾಷೆಯಾಗಿ ಹಾಗೂ ಜನಸಾಮಾನ್ಯರ ದೈನಂದಿನ ಸಂಪರ್ಕ ಭಾಷೆಯಾಗಿ ಬಳಕೆಯಲ್ಲಿದ್ದರೂ ಅನಾದಿಕಾಲದಿಂದಲೂ ದ್ರಾವಿಡ ಮೂಲದ ತುಳು ಭಾಷೆಯು ಈ ಭಾಗದ ಹೆಚ್ಚಿನ ಜನರ ಮಾತೃ ಭಾಷೆಯಾಗಿದೆ. "ತುಳುವ" ಪದವು ತುಳು ಭಾಷೆಯನ್ನು ಆಡುವ ಜನ ಅಥವಾ ಪ್ರದೇಶವನ್ನು ಸೂಚಿಸುತ್ತಿದ್ದು, 'ತುಳು' ಪದದ ನಿಷ್ಪತ್ತಿಯ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. ಪೌರಾಣಿಕವಾಗಿ ತುಲಾದಾನ, ತುಲಾಪುರುಷ ಮುಂತಾದ ದಾನಗಳನ್ನು ಮಾಡಿದ ರಾಮಭೋಜನಿಂದಾಗಿ, ಅವನ ವಂಶಕ್ಕೆ 'ತೋಳರ್' ಎಂದೂ ಹಾಗೂ ಅವನ ಆಳ್ವಿಕೆಗೆ ಒಳಪಟ್ಟಿದ್ದ ಈ ಪ್ರದೇಶಕ್ಕೆ 'ತುಳು' ಎಂದೂ ಹೆಸರಾಯಿತೆಂದೂ ಹೇಳಲಾಗುತ್ತದೆ. ಆದರೆ ಈ ಅಭಿಪ್ರಾಯವನ್ನು ನಿರಾಕರಿಸುವ ಬಿ.ಎ. ಸಾಲೆತೋರೆ ಅವರು 'ತುಳುವೆ' ಎಂಬ ತುಳು ಮೂಲದ ಪದದಿಂದ ಅದು ಬಂದಿದ್ದು, ತುಳು ಭಾಷೆಯಲ್ಲಿ ಅದಕ್ಕೆ ಸೌಮ್ಯ ಹಾಗೂ ಮೆದು ಸ್ವಭಾವ ಎಂಬ ಅರ್ಥಗಳಿದ್ದು, ಈ ಸ್ಥಳನಾಮವು ತುಳು ನಾಡಿನ ಜನರ ಸೌಮ್ಯತೆಯನ್ನು ಬಿಂಬಿಸುತ್ತದೆಂದು ಅಭಿಪ್ರಾಯಪಡುತ್ತಾರೆ. ಅಲ್ಲದೆ 'ತುಳುವ' ಪದವು ಕನ್ನಡ ಮೂಲದ 'ತುಳು' ಶಬ್ದದಿಂದ ಬಂದಿದ್ದು, ಅದಕ್ಕೆ 'ಆಕ್ರಮಣ ಮಾಡು' ಎಂಬ ಅರ್ಥವಿದ್ದು, ಇದು ಪ್ರಾಚೀನ ತುಳುವರ ಶೌರ್ಯ ಸಾಹಸದಿಂದ ಕೂಡಿದ ಚಟುವಟಿಕೆಯನ್ನು ಬಿಂಬಿಸುತ್ತಿದ್ದು, ಇದರಿಂದಾಗಿ ಅವರಿಗೆ ಈ ಹೆಸರು ಬಂದಿರಬೇಕೆಂದೂ ಬಿ.ಎ. ಸಾಲೆತೋರೆ ಇನ್ನೊಂದೆಡೆ ಅಭಿಪ್ರಾಯ ಪಡುತ್ತಾರೆ. ಕೆ.ವಿ. ರಮೇಶ ಅವರ ಪ್ರಕಾರ 'ತುಳು' ಭಾಷೆಯಲ್ಲಿ 'ತುಳುವೆ' ಎಂಬ ಪದವನ್ನು ಹಣ್ಣೊಂದನ್ನು ಉದ್ದೇಶಿಸಿ ಬಳಸಿದಾಗ ಅದರ ಮೃದುತ್ವವನ್ನು ಸೂಚಿಸಲು ಬಳಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಬಹು ಹಿಂದಿನಿಂದಲೂ ವಿವಿಧ ಬಗೆಯ ಮೃದು ಹಣ್ಣುಗಳಿಗೆಹೆಸರಾಗಿದ್ದು, ಅದರಿಂದಾಗಿ ಇದಕ್ಕೆ 'ತುಳುನಾಡು' ಎಂಬ ಹೆಸರು ಬಂದಿರಬೇಕೆಂದು ಅಭಿಪ್ರಾಯಪಡುತ್ತಾರೆ.

ಗೋವಿಂದ ಪೈ ಅವರ ಪ್ರಕಾರ ಮೃದುತ್ವವನ್ನು, ಅಲ್ಲಿನ ಜನರಿಗೆ ಬದಲು ಮಣ್ಣಿಗೆ ಅನ್ವಯಿಸುವುದು ಹೆಚ್ಚು ಸೂಕ್ತವೆಂದು ಅಭಿಪ್ರಾಯಪಡುತ್ತಾರೆ. ಆದರೆ ಗುರುರಾಜಭಟ್ಟರು 'ತುಳು' ಪದಕ್ಕೆ ದ್ರಾವಿಡ ಮೂಲದ "ತುರು" ಪದದೊಂದಿಗೆ ಸಂಬಂಧ ಕಲ್ಪಿಸಿ ತುರುವರು ಪ್ರಾಚೀನ ಕಾಲದಲ್ಲಿ ಪಶು ಸಂಗೋಪನೆಯಲ್ಲಿ ತೊಡಗಿದ್ದರೆಂದು ಹೇಳುತ್ತಾ, ಆ ದನಗಾಯಿ ತುರುವ ಜನಾಂಗವೇ ಈ ತುಳುವ ಜನಾಂಗವೆಂದು ಅಭಿಪ್ರಾಯಪಡುತ್ತಾರೆ.

ಆದರೆ ಸೇಡಿಯಾಪು ಕೃಷ್ಣಭಟ್ಟರ ಪ್ರಕಾರ 'ತುಳು' ಪದವು 'ಜಲ'ವನ್ನು ನಿರ್ದೇಶಿಸುತ್ತಿದ್ದು, 'ತುಳುನಾಡು' ಎಂದರೆ 'ಜನಸಮೃದ್ಧಿಯಿಂದ ಕೂಡಿದ ಪ್ರದೇಶ' ಎಂದಾಗುತ್ತದೆ. ಆದ್ದರಿಂದ ತುಳುನಾಡು ಎಂದರೆ ಜಲಾದ್ರ್ರವಾದ ಪ್ರದೇಶ ಎಂದು ಅರ್ಥೈಸಬಹುದು ಎಂದಿದ್ದಾರೆ. ಈ ಅಭಿಪ್ರಾಯಕ್ಕೆ ಕೆ.ಎಂ. ರಾಘವ ನಂಬಿಯಾರರು ಸಹಮತ ವ್ಯಕ್ತಪಡಿಸುತ್ತಾ, "ನಿಜಾರ್ಥದಲ್ಲಿ ಅದು ನೀರು ತುಳುಕಿ ಹರಿಯುವ ನಾಡು ಅದರಿಂದಾಗಿ ಇದಕ್ಕೆ ತುಳುನಾಡು" ಎಂಬ ಹೆಸರು ಬಂದಿರಬಹುದೆನ್ನುತ್ತಾರೆ. ಮಿಗಿಲಾಗಿ ಈ ನಾಡನ್ನು ಆಳಿದ ಆಳುಪರಿಗೂ ಪ್ರಾಕೃತಿಕ ಹಿನ್ನೆಲೆಯಲ್ಲಿ 'ಆಲುವ' ಎಂಬ ಹೆಸರು ಬಂದಿದ್ದು, 'ಅನೂಪ' ಪದವೇ ಅಲೂಪ ಪದದ ಮೂಲವಾಗಿದ್ದು, ಅನೂಪ ಎಂದರೆ ಗಿಡಮರಗಳಿಂದ ಧುಮುಕುವ ತೊರೆಗಳಿಂದ ತುಂಬಿದ ಪ್ರದೇಶ ಎಂದರ್ಥ. ಈ ಹಿನ್ನೆಲೆಯಲ್ಲಿ 'ತುಳುನಾಡು' ಹಾಗೂ 'ಅನೂಪದೇಶ' ಎಂಬ ಹೆಸರುಗಳು ಒಂದು ಮತ್ತೊಂದರ ಭಾಷಾಂತರವೆಂಬಷ್ಟರ ಮಟ್ಟಿಗೆ ಏಕಾರ್ಥವನ್ನು ಕೊಡುತ್ತವೆ ಎಂದೂ ಅಭಿಪ್ರಾಯಪಡುತ್ತಾರೆ. ಈ ಪ್ರದೇಶವು ಪಶ್ಚಿಮ ಘಟ್ಟಗಳ ಬುಡದಲ್ಲಿದ್ದು, ಅಸಂಖ್ಯಾತ ನದಿ, ಹಳ್ಳ–ಕೊಳ್ಳಗಳಿಂದಾಗಿ ಜಲಸಮೃದ್ಧಿಯಿಂದ ಕೂಡಿದ್ದು, ಅದರಿಂದಾಗಿ ಇದಕ್ಕೆ ಇರುವ 'ತುಳುನಾಡು' ಎಂಬ ಹೆಸರು ಅನ್ವರ್ಥವಾಗಿದೆ ಎಂದರೆ ತಪ್ಪಾಗಲಾರದು.

'ಉಡುಪಿ' ನಾಮನಿಷ್ಪತ್ತಿ ಬಗೆಗೂ ಹಲವಾರು ಅಭಿಪ್ರಾಯಗಳಿವೆ. ದಕ್ಷಬ್ರಹ್ಮನಿಂದ ಶಾಪಕ್ಕೆ ಈಡಾದ ಚಂದ್ರನು ಶಾಪನಿವಾರಣೆಗಾಗಿ ಇಲ್ಲಿ ಬಂದು ತಪವನ್ನಾಚರಿಸಿ, ಶಿವನ ಕೃಪೆಯಿಂದ ಶಾಪಮುಕ್ತನಾದ ಸ್ಥಳ ಇದೆಂಬ ಐತಿಹ್ಯವಿದ್ದು, ಸಂಸ್ಕೃತ ಭಾಷೆಯಲ್ಲಿ 'ಉಡುಪ' ಎಂದರೆ ನಕ್ಷತ್ರಗಳ ಒಡೆಯ ಎಂಬರ್ಥವಿದೆ. ನಕ್ಷತ್ರಗಳ ಒಡೆಯನಾದ ಚಂದ್ರ (ಉಡುಪ)ನು ತಪಸ್ಸು ಮಾಡಿದ ತಾಣವಾದ್ದರಿಂದ 'ಉಡುಪಿ' ಆಯಿತೆಂದು ಸ್ಥಳಪುರಾಣ ಹೇಳುತ್ತದೆ. ಉಡುಪ ಎಂದರೆ ನಾಗಸರ್ಪಎಂಬ ಅರ್ಥವೂ ಇದ್ದು, ನಾಗಾರಾಧನೆಗೆ ಈ ಸ್ಥಳವು ಹೆಸರಾಗಿದ್ದು, ಅದರಿಂದಾಗಿ 'ಉಡುಪಿ' ಎಂಬ ಹೆಸರು ಬಂದಿರಬಹುದೆಂದು ಪಿ.ಗುರುರಾಜಭಟ್ ಅಭಿಪ್ರಾಯಪಡುತ್ತಾರೆ. ತುಳುನಾಡಿನ ಸಪ್ತಕ್ಷೇತ್ರಗಳಿಗೆ ಕಿರೀಟಪ್ರಾಯವಾಗಿ, ಉಡುಪಿಯನ್ನು ಸಪ್ತಕ್ಷೇತ್ರ ಸ್ಮರಣಾ ಶ್ಲೋಕದಲ್ಲಿ ರೂಪ್ಯ (ರಜತ) ಪೀಠ ಎಂದು ಕರೆಯಲಾಗಿದೆ. ಯಾಗಕ್ಕಾಗಿ ಭೂಮಿಯನ್ನು ಊಳುವಾಗ ನೇಗಿಲ ಮೊನೆಗೆ ಸರ್ಪ ಸಿಲುಕಿದ್ದರಿಂದ ಉಂಟಾದ ಸರ್ಪದೋಷದ ನಿವಾರಣೆಗಾಗಿ ರಾಮಭೋಜರಾಜನು ಮಾಡಿಸಿದ ಬೆಳ್ಳಿಯ ಪೀಠವನ್ನು ಪರಶುರಾಮನೇ ಸ್ವೀಕರಿಸಿ ಅದರಲ್ಲಿ ತಾನೇ ಪ್ರತಿಷ್ಠಾಪಿತಗೊಂಡನಂತೆ. ಅದೇ ಕಾರಣಕ್ಕಾಗಿ ಉಡುಪಿಗೆ ಈ ಹೆಸರು ಬಂದಿದೆ ಎಂದೂ ಹೇಳಲಾಗುತ್ತದೆ. ಪ್ರಾಚೀನ ಶಾಸನಗಳಲ್ಲೂ 'ಉಡುಪಿ' ಎಂಬ ಉಲ್ಲೇಖವೇ ಇದ್ದು, ನಾರಾಯಣಪಂಡಿತರು, ತಮ್ಮ ಮಧ್ವವಿಜಯ (ಸುಮಾರು ೧೪ನೆಯ ಶತಮಾನ) ದಲ್ಲಿ ರಜತಪೀಠವನ್ನು ಆಡು ಮಾತಿನಲ್ಲಿ "ಒಡಿಪು' ಎಂದೂ ಕರೆಯುತ್ತಾರೆ" ಎಂದು ದಾಖಲಿಸಿದ್ದಾರೆ. 'ಉಡುಪಿ'ಗೆ ಮೂಲಪದವಾದ 'ಒಡಿಪು' ಕನ್ನಡದ 'ಒಡಪು' ಪದದಂತೆ ಒಡೆಯುವಿಕೆಯನ್ನು ಸೂಚಿಸುತ್ತದೆ. ಆದ್ದರಿಂದ ಈ ಒಡಿಪು ಹಾಗೂ ಒ (ವ) ಡಬಾಂಡೇಶ್ವರ ಸ್ಥಳನಾಮಗಳ ನಡುವಣ ಸಂಬಂಧವನ್ನು ಪರಿಶೀಲಿಸುವ ಅಗತ್ಯವಿದೆ ಎಂದು ಬನ್ನಂಜೆ ಗೋವಿಂದಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಇದೇ ಅಭಿಪ್ರಾಯಕ್ಕೆ ಕೆಮ್ತೂರು ರಘುಪತಿಭಟ್ ಇನ್ನಷ್ಟು ಒತ್ತು ನೀಡಿ 'ಉಡುಪಿ' ಪದನಿಷ್ಪತ್ತಿಯನ್ನು ವಿವೇಚಿಸಿದ್ದಾರೆ. (ಹೆಚ್ಚಿನ ವಿವರಗಳಿಗೆ ಕೆ. ಅನಂತರಾಮು : ದಕ್ಷಿಣದ ಸಿರಿನಾಡು [೧೯೯೭] ಕೃತಿ ನೋಡಿ) ರಾಜ್ಯದ ಬಹುತೇಕ ಜಿಲ್ಲೆಗಳಂತೆ ಉಡುಪಿಯು ಜಿಲ್ಲಾ ಕೇಂದ್ರವಾದುದರಿಂದ ಉಡುಪಿ ಜಿಲ್ಲೆಯೆಂದು ಕರೆಯಲಾಗಿದೆ.

## ಸ್ಥಳ ನಿರ್ದೇಶನ ಮತ್ತು ಮೇರೆಗಳು

ಭೌಗೋಳಿಕವಾಗಿ ಭಾರತದ ದಕ್ಷಿಣ ಪ್ರಸ್ಥಭೂಮಿಯಿಂದ ಉಡುಪಿ ಜಿಲ್ಲೆಯನ್ನು ಪಶ್ಚಿಮ ಘಟ್ಟಗಳು ಬೇರ್ಪಡಿಸುತ್ತವೆ. ಜಿಲ್ಲೆಯು ಪಶ್ಚಿಮ ಘಟ್ಟಗಳಿಂದ ಪಶ್ಚಿಮದೆಡೆ ಸಮುದ್ರದ ಕಡೆಗೆ ವಿಸ್ತರಿಸಿದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ೭೬ ನಾಟಿಕಲ್ ಮೈಲಿಗಳಷ್ಟು (೧೪೧ ಕಿ.ಮಿ.) ಉದ್ದದ ಬಹುತೇಕ ನೇರವಾದ ಕರಾವಳಿ ತೀರವನ್ನು ಹೊಂದಿತ್ತು. ಹೊಸದಾಗಿ ಸೃಜಿಸಲ್ಪಟ್ಟಿರುವ ಉಡುಪಿ ಜಿಲ್ಲೆಯ ಕರಾವಳಿ ತೀರವು ಸುಮಾರು ೧೦೦ ಕಿ.ಮೀ ಉದ್ದವಾಗಿದೆ. ಕರಾವಳಿ ತೀರವು ಅನೇಕ ಕಡೆ ನದಿಗಳಿಂದ, ಹೊಳೆಗಳಿಂದ ಮತ್ತು ಕೊಲ್ಲಿಗಳಿಂದ ವಿಂಗಡಿಸಲ್ಪಟ್ಟಿದೆ. ಜಿಲ್ಲೆಯು ಉತ್ತರ ಅಕ್ಷಾಂಶ ೧೩° ೦೫' ರಿಂದ ೧೩°-೫೫' ರವರೆಗೆ ಮತ್ತು ಪೂರ್ವ ರೇಖಾಂಶ ೭೪°-೪೦' ರಿಂದ ೭೫°-೦೭' ರವರೆಗೆ ಇರುವ ಪ್ರದೇಶದಲ್ಲಿ ವಿಸ್ತರಿಸಿದೆ. ಜಿಲ್ಲೆಯು ಉತ್ತರದಲ್ಲಿ ಉತ್ತರ ಕನ್ನಡ ಜಿಲ್ಲೆ, ಪೂರ್ವದಲ್ಲಿ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳನ್ನು, ದಕ್ಷಿಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಪಶ್ಚಿಮದಲ್ಲಿ ಅರಬೀ ಸಮುದ್ರವನ್ನು ಹೊಂದಿದೆ.

## ವಿಸ್ತೀರ್ಣ ಮತ್ತು ಜನಸಂಖ್ಯೆ

ಉಡುಪಿ ಜಿಲ್ಲೆಯು ೨೦೦೧ರ ಜನಗಣತಿ ವರದಿಯಂತೆ ೩,೮೮೦ ಚದರ ಕಿ.ಮೀ. ಭೌಗೋಳಿಕ ವಿಸ್ತೀರ್ಣವನ್ನು ಹೊಂದಿದೆ. ಜಿಲ್ಲೆಯಲ್ಲಿ ಒಟ್ಟು ೧೧.೧೨ ಲಕ್ಷ ಜನರು ವಾಸಿಸುತ್ತಿದ್ದು, ಅವರಲ್ಲಿ ೫.೨೨ ಲಕ್ಷ ಪುರುಷರು ಮತ್ತು ೫.೯೦ ಲಕ್ಷ ಮಹಿಳೆಯರಾಗಿದ್ದಾರೆ. ಉಡುಪಿ ಜಿಲ್ಲೆಯಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆಯೇ ಹೆಚ್ಚು ಎನ್ನುವುದು ಗಮನಾರ್ಹವಾಗಿದೆ. ತಾಲೂಕುವಾರು ಹೋಲಿಸಿದಾಗ ಉಡುಪಿ ತಾಲೂಕು ಅತೀ ಹೆಚ್ಚು ಜನಸಂಖ್ಯೆಯನ್ನು (೫.೭೯ ಲಕ್ಷ) ಹೊಂದಿದ ತಾಲೂಕಾಗಿದೆ. ಹಾಗೂ ಕಾರ್ಕಳ ತಾಲೂಕು ಅತೀ ಕಡಿಮೆ (೨.೦೫ ಲಕ್ಷ) ಜನಸಂಖ್ಯೆ ಹೊಂದಿದ ತಾಲೂಕಾಗಿದೆ. ಕುಂದಾಪುರ

ತಾಲೂಕಿನಲ್ಲಿ ೩.೭೭ ಲಕ್ಷ ಜನಸಂಖ್ಯೆಯಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಉಡುಪಿ ಜಿಲ್ಲೆಯ ಜನಸಂಖ್ಯೆಯು ಶೇ ೨.೧೦ರಷ್ಟಾಗುತ್ತದೆ. ಜನಸಾಂದ್ರತೆ (ಪ್ರತಿ ಚ.ಕಿ.ಮೀ. ಪ್ರದೇಶದಲ್ಲಿರುವ ಒಟ್ಟು ಜನಸಂಖ್ಯೆ) ಯಲ್ಲಿ ರಾಜ್ಯದ ಜನಸಾಂದ್ರತೆ (೨೭೬) ಗಿಂತ ಹೆಚ್ಚಿನ ಜನಸಾಂದ್ರತೆ (೩೧೧) ಜಿಲ್ಲೆಯದಾಗಿದೆ. ತಾಲೂಕುವಾರು ಗಮನಿಸಿದಾಗ ಉಡುಪಿ ತಾಲೂಕು ಅತಿ ಹೆಚ್ಚಿನ ಸಾಂದ್ರತೆ (೫೭೨ ಪ್ರತಿ ಚ.ಕಿ.ಮೀ.ಗೆ) ಹಾಗೂ ಕಾರ್ಕಳ ತಾಲೂಕು ಅತಿ ಕಡಿಮೆ ಜನಸಾಂದ್ರತೆ (೧೮೮ ಪ್ರತಿ ಚ.ಕಿ.ಮೀ.ಗೆ) ಹೊಂದಿದ ತಾಲೂಕು ಆಗಿರುತ್ತದೆ. ಕುಂದಾಪುರ ತಾಲೂಕಿನ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ ೨೪೨ ಆಗಿರುತ್ತದೆ. ೨೦೦೧ ರ ಜನಗಣತಿಯ ಪ್ರಕಾರ ಸ್ತ್ರೀ ಪುರುಷ ಪ್ರಮಾಣವು ೧೧೩೦:೧೦೦೦ ಆಗಿರುತ್ತದೆ. ರಾಜ್ಯದಲ್ಲಿ ಇದರ ಪ್ರಮಾಣವು ೯೬೪:೧೦೦೦ ಆಗಿರುತ್ತದೆ. ಜಿಲ್ಲೆಯಲ್ಲಿ ೧೯೯೧–೨೦೦೧ ರ ಅವಧಿಯಲ್ಲಿ ಜನಸಂಖ್ಯಾ ಪ್ರಮಾಣವು ಶೇಕಡಾ ೬.೮೮ ರಷ್ಟು ಹೆಚ್ಚಳವಾಗಿರುತ್ತದೆ. (ವಿವರಕ್ಕೆ ಅಧ್ಯಾಯ–೩ ಜನತೆ ನೋಡಿ).

**ಕೋಷ್ಟಕ ೧.೧ : ಉಡುಪಿ ಜಿಲ್ಲೆಯ ಸಾಮಾನ್ಯ ವಿವರಗಳು**

| ಕ್ರಮ ಸಂಖ್ಯೆ / ವಿವರ | ಕುಂದಾಪುರ | ಕಾರ್ಕಳ | ಉಡುಪಿ | ಒಟ್ಟು ಜಿಲ್ಲೆ |
|---|---|---|---|---|
| ೧. ಹೋಬಳಿಗಳ ಸಂಖ್ಯೆ | ೩ | ೨ | ೪ | ೯ |
| ೨. ಗ್ರಾಮ ಪಂಚಾಯತಿಗಳ ಸಂಖ್ಯೆ | ೫೬ | ೨೯ | ೬೧ | ೧೪೬ |
| ೩. ೨೦೦೧ರ ಜನಗಣತಿ ಪ್ರಕಾರ | | | | |
| * ಜನವಸತಿ ಇರುವ ಗ್ರಾಮಗಳು | ೯೯ | ೫೦ | ೯೯ | ೨೪೮ |
| * ಪಟ್ಟಣ / ನಗರ ಸಮುದಾಯಗಳು | ೪ | ೧ | ೪ | ೯ |
| * ನಗರ / ಪಂಚಾಯತ್ / ಪುರಸಭೆ / ನಗರಸಭೆ | ೧ | ೧ | ೨ | ೪ |
| ೪. ವಿಸ್ತೀರ್ಣ ಚದುರ ಕಿ.ಮೀ.ಗಳಲ್ಲಿ | ೧,೫೬೦ | ೧,೦೭೨ | ೯೨೯ | ೩,೮೮೦* |
| ೫. ಒಟ್ಟು ಜನಸಂಖ್ಯೆ (೨೦೦೧) | | | | |
| * ಗಂಡಸರು | ೧,೭೪,೪೫೫ | ೯೬,೭೫೫ | ೨,೫೧,೦೨೧ | ೫,೨೨,೨೩೧ |
| * ಹೆಂಗಸರು | ೨,೦೨,೯೬೫ | ೧,೦೮,೮೪೩ | ೨,೭೮,೨೦೪ | ೫,೯೦,೦೧೨ |
| * ಒಟ್ಟು | ೩,೭೭,೪೨೦ | ೨,೦೫,೫೯೮ | ೫,೨೯,೨೨೫ | ೧೧,೧೨,೨೪೩ |
| ೬. ನಗರ ಜನಸಂಖ್ಯೆ | | | | |
| * ಗಂಡಸರು | ೧೩,೯೧೯ | ೧೨,೬೮೬ | ೭೪,೫೭೦ | ೧,೦೧,೧೭೫ |
| * ಹೆಂಗಸರು | ೧೪,೬೭೨ | ೧೨,೪೩೦ | ೭೭,೦೭೬ | ೧,೦೫,೧೭೮ |
| * ಒಟ್ಟು | ೨೮,೫೯೧ | ೨೫,೧೧೬ | ೧,೫೨,೬೪೬ | ೨,೦೬,೩೫೩ |
| ೭. ಜನಸಾಂದ್ರತೆ ಪ್ರತಿ ಚ.ಕಿ.ಮೀಗೆ | ೨೪೨ | ೧೮೮ | ೫೭೨ | ೩೧೧ |
| ೮. ಲಿಂಗಾನುಪಾತ ೧೦೦೦ ಗಂಡಸರಿಗೆ | | | | |
| * ಹೆಂಗಸರ ಸಂಖ್ಯೆ | ೧೧೬೩ | ೧೧೨೫ | ೧೧೦೮ | ೧೧೩೦ |
| ೯. ಬೆಳವಣಿಗೆ ಪ್ರಮಾಣ (ಶೇ) | | | | |
| * ೧೯೮೧–೧೯೯೧ | ೧೨.೫೭ | ೮.೨೫ | ೭.೬೬ | ೯.೪೨ |
| * ೧೯೯೧–೨೦೦೧ | ೭.೩೨ | ೭.೮೩ | ೬.೭೫ | ೭.೧೪ |

* ತಾಲೂಕುಗಳ ಒಟ್ಟು ವಿಸ್ತೀರ್ಣ ಜಿಲ್ಲೆಗಳ ಒಟ್ಟು ವಿಸ್ತೀರ್ಣಕ್ಕೆ ತಾಳೆಯಾಗುವುದಿಲ್ಲ. ತಾಲೂಕಿನ ಒಟ್ಟು ಪ್ರದೇಶದ ಅಂಕಿ ಅಂಶಗಳ ಭೂಬಳಕೆ ಪ್ರದೇಶವನ್ನು ಪ್ರತಿನಿಧಿಸುತ್ತದೆ. ಜಿಲ್ಲೆಯ ವಿಸ್ತೀರ್ಣವು ತಾತ್ಕಾಲಿಕ ಭೌಗೋಳಿಕ ಪ್ರದೇಶವನ್ನು ಪ್ರತಿನಿಧಿಸುತ್ತದೆ.

*ಮೂಲ : ಜನಗಣತಿ ನಿರ್ದೇಶನಾಲಯ, ಬೆಂಗಳೂರು; ಉಡುಪಿ ಜಿಲ್ಲೆಯ ಅಂಕಿ ಅಂಶಗಳ ನೋಟ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಉಡುಪಿ ಜಿಲ್ಲೆ, ಉಡುಪಿ.*

## ಪ್ರಾದೇಶಿಕ ಬದಲಾವಣೆಗಳು

ಉಡುಪಿ ಜಿಲ್ಲೆಯನ್ನೊಳಗೊಂಡ ದಕ್ಷಿಣ ಕನ್ನಡ ಜಿಲ್ಲೆಯನ್ನು ಕ್ರಿಸ್ತಶಕ ೨ನೇ ಶತಮಾನದ ಪ್ರಾರಂಭದಿಂದ ೧೨ನೇ ಶತಮಾನದವರೆಗೂ ಆಳುಪರು ರಾಜ್ಯಭಾರ ಮಾಡಿದರು. ಅವರ ಆಡಳಿತದ ಅವಧಿಯಲ್ಲಿ ಸಾಮ್ರಾಜ್ಯವನ್ನು ನಾಡುಗಳೆಂಬ ವಿಭಾಗಗಳನ್ನಾಗಿ ವಿಂಗಡಿಸಿದ್ದರು. ಬೈಂದೂರಿನ ಸುತ್ತುಮುತ್ತಲಿನ ಪ್ರದೇಶವನ್ನು ಬೈಂದೂರು ನಾಡು ಎಂದೂ ಮಂಗಳೂರು ಸುತ್ತಮುತ್ತಣ ಪ್ರಾಂತ್ಯವನ್ನು ಮುಗೂರು ನಾಡು ಎಂದೂ ಕರೆಯಲಾಗುತ್ತಿತ್ತು. ನಂತರ ಕೆಲವು ವರ್ಷಗಳ ಕಾಲ ಹೊಯ್ಸಳರ ಆಳ್ವಿಕೆಗೆ ಈ ಜಿಲ್ಲೆಯ ಪ್ರದೇಶ ಒಳಪಟ್ಟಿತ್ತು. ಸುಮಾರು ೧೪ನೆಯ ಶತಮಾನದ ಮಧ್ಯಭಾಗದಿಂದ ೧೬ನೆಯ ಶತಮಾನದ ಅಂತ್ಯದವರೆಗೂ ಜಿಲ್ಲಾ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಭಾಗವಾಗಿದ್ದಿತು. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿದ್ದ ಅವಧಿಯಲ್ಲಿ ಉಡುಪಿ ತಾಲೂಕಿನ ಬಾರಕೂರನ್ನು ಕೇಂದ್ರಸ್ಥಾನವುಳ್ಳ ಬಾರ್ಕೂರು ರಾಜ್ಯ ಮತ್ತು ಮಂಗಳೂರನ್ನು ಕೇಂದ್ರಸ್ಥಾನವುಳ್ಳ ಮಂಗಳೂರು ರಾಜ್ಯ ಎಂಬುದಾಗಿ ಎರಡು ಆಡಳಿತ ವಿಭಾಗಗಳಿದ್ದವು. ಎರಡು ರಾಜ್ಯಗಳಿಗೂ ರಾಜ್ಯಪಾಲರನ್ನು ನೇಮಿಸಲಾಗಿತ್ತು. ಕೆಲವೊಮ್ಮೆ ಎರಡೂ ರಾಜ್ಯಗಳಿಗೂ ಒಬ್ಬರೇ ರಾಜ್ಯಪಾಲರನ್ನು ನೇಮಿಸಲಾಗುತ್ತಿತ್ತು. ಜಿಲ್ಲಾ ಪ್ರದೇಶವನ್ನು ಮತ್ತೆ ನಾಡುಗಳೆಂಬ ಸಣ್ಣ ವಿಭಾಗಗಳನ್ನಾಗಿ ವಿಂಗಡಿಸಲಾಗಿತ್ತು. ವಿಜಯನಗರ ಅರಸರ ಕಾಲದ ಶಾಸನಗಳಲ್ಲಿ *ಪಡುವಕೋಣ ನಾಡು*, *ಬೈಂದೂರು ನಾಡು*, *ಉದಯಂಗಲ ನಾಡು*, *ತಿಳುಗದಿಯ ನಾಡು*, *ಕಡಬ ನಾಡು*, *ನಲವತ್ತ ನಾಡು*, *ಹಾರುನಾಡು*, *ಮುಂಗಿ ನಾಡು*, *ಮಂದಲಕೆಯ ನಾಡು*, *ಕಂಟಾರದ ನಾಡು*, *ಕಬು ನಾಡು*, *ಕಾಂಡೆ ನಾಡು*, *ಬಂದಂಪಲ್ಲಿ ನಾಡು* ಮುಂತಾದ ನಾಡುಗಳ ಪ್ರಸ್ತಾಪಗಳಿವೆ.

ವಿಜಯನಗರದ ಅರಸರ ಆಳ್ವಿಕೆಯಿಂದ ಕೆಳದಿಯ ಅರಸರ ಆಳ್ವಿಕೆಗೆ ಜಿಲ್ಲೆಯು ೧೫೫೪ ರಲ್ಲಿ ಒಳಪಟ್ಟಿತು. ಸುಮಾರು ಎರಡು ಶತಮಾನಗಳ ಕಾಲ ಜಿಲ್ಲಾ ಪ್ರದೇಶವು ಕೆಳದಿಯ ಅರಸರ ಅಧೀನದಲ್ಲಿದ್ದಿತು. ಹೈದರ್ ಅಲಿಯು ೧೭೬೩ರಲ್ಲಿ ಬಿದನೂರನ್ನು ವಶಪಡಿಸಿಕೊಂಡ ನಂತರ ಜಿಲ್ಲಾ ಪ್ರದೇಶವು ಹೈದರ್‌ಅಲಿ, ನಂತರ ಟಿಪ್ಪುಸುಲ್ತಾನನ ಆಳ್ವಿಕೆಗೆ ಒಳಪಟ್ಟಿತು. ೧೭೯೯ರಲ್ಲಿ ಟಿಪ್ಪುವಿನ ಮರಣದ ನಂತರ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿತು. ೧೭೯೯ರ ನಾಲ್ಕನೇ ಮೈಸೂರು ಯುದ್ಧವು ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಮಹತ್ವದ ತಿರುವನ್ನು ನೀಡಿತು. ಆ ಯುದ್ಧದಲ್ಲಿ ಟಿಪ್ಪುವಿನ ಮರಣದ ನಂತರ ಆತನ ಸಾಮ್ರಾಜ್ಯವನ್ನು ಬ್ರಿಟಿಷರು, ಮರಾಠರು, ಹೈದರಾಬಾದಿನ ನಿಜಾಮ ಹಾಗೂ ಮೈಸೂರು ಒಡೆಯರ್ ರಾಜವಂಶದವರ ನಡುವೆ ಹಂಚಲ್ಪಟ್ಟಿತು. ಜೂನ್ ೧೭೯೯ ರಲ್ಲಿ ಥಾಮಸ್ ಮುನ್ರೋ ಕೆನರಾ ಜಿಲ್ಲೆಯ ಕಲೆಕ್ಟರ್‍ನಾಗಿ ಅಧಿಕಾರ ವಹಿಸಿಕೊಂಡನು. ೧೮೦೦ ರಲ್ಲಿ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿಸಲ್ಪಟ್ಟ ಕೆನರಾ ಮತ್ತು ಸೋಂದಾ ವಿಭಾಗವು ಇಂದಿನ ದಕ್ಷಿಣ ಕನ್ನಡ, ಉಡುಪಿ, ಉತ್ತರಕನ್ನಡ ಜಿಲ್ಲೆಗಳು, ಕಾಸರಗೋಡು ( ೧೯೫೬ ರಲ್ಲಿ ಕೇರಳಕ್ಕೆ ಸೇರಿತು) ಮತ್ತು ಅಮೀನೌದೀವಿ ದ್ವೀಪಗಳನ್ನು (೧೯೫೬ ರಲ್ಲಿ ಕೇಂದ್ರಾಡಳಿತಕ್ಕೆ ಸೇರಿತು) ಒಳಗೊಂಡಿತ್ತು,

ಪ್ರಾರಂಭದ ವರ್ಷಗಳಲ್ಲಿ ಈಗಿನ ದಕ್ಷಿಣ ಕನ್ನಡ, ಕಾಸರಗೋಡು, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲಾ ಪ್ರದೇಶಗಳು ಒಂದೇ ಜಿಲ್ಲೆಯಾಗಿದ್ದು, ಕೆನರಾ ಜಿಲ್ಲೆಯೆಂದು ಕರೆಯಲ್ಪಟ್ಟಿತ್ತು. ಆದರೆ ೧೮೬೦ರಲ್ಲಿ ಕೆನರಾ ಜಿಲ್ಲೆಯನ್ನು ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳೆಂದು ವಿಭಜಿಸಲಾಯಿತು. ಆಗಿನ ದಕ್ಷಿಣ ಕನ್ನಡ ವಿಭಾಗವು ಬಾರ್ಕೂರು, ಬೇಕಲ, ಬಂಟ್ವಾಳ ಮತ್ತು ಮಂಗಳೂರು ತಾಲೂಕುಗಳನ್ನೊಳಗೊಂಡಿತ್ತು. ಪಶ್ಚಿಮದಲ್ಲಿ ಅರಬಿ ಸಮುದ್ರ, ಪೂರ್ವದಲ್ಲಿ ಪಶ್ಚಿಮ ಘಟ್ಟಗಳು, ದಕ್ಷಿಣದಲ್ಲಿ ಕವಾಯಿನದಿ ಮತ್ತು ಉತ್ತರದಲ್ಲಿ ಕೋಟೇಶ್ವರ ಇದರ ಮೇರೆಗಳಾಗಿದ್ದವು. ೧೮೫೯ ರಲ್ಲಿ ಉಡುಪಿ ತಾಲೂಕು ಅಸ್ತಿತ್ವಕ್ಕೆ ಬಂದಿತು. ೧೮೬೨ರಲ್ಲಿ ಕೆನರಾ ಪ್ರಾಂತ್ಯವನ್ನು ಪುನಃ ಎರಡು ಜಿಲ್ಲೆಗಳಾಗಿ ರೂಪಿಸಿದಾಗ, ಹೊಸ ದಕ್ಷಿಣ ಕನ್ನಡ ಜಿಲ್ಲೆಯು ಮಂಗಳೂರು, ಬೇಕಲ(ಕಾಸರಗೋಡು), ಬಂಟ್ವಾಳ, ಪುತ್ತೂರು, ಉಡುಪಿ ಮತ್ತು ಬಾರ್ಕೂರು ತಾಲೂಕುಗಳನ್ನೊಳಗೊಂಡಿತ್ತು. ಉತ್ತರ ಕನ್ನಡ ಜಿಲ್ಲೆಯನ್ನು (ದಕ್ಷಿಣ ಕನ್ನಡ ಜಿಲ್ಲೆಗೆ

ವರ್ಗಾಯಿಸಿದ ಕುಂದಾಪುರ ತಾಲೂಕನ್ನು ಹೊರತುಪಡಿಸಿ) ಬಾಂಬೆ ಪ್ರೆಸಿಡೆನ್ಸಿಗೆ ವರ್ಗಾಯಿಸಲಾಯಿತು, ದಕ್ಷಿಣ ಕನ್ನಡ ಜಿಲ್ಲೆಯನ್ನು ಮದ್ರಾಸ್ ಪ್ರೆಸಿಡೆನ್ಸಿಯಲ್ಲೇ ಉಳಿಸಿಕೊಳ್ಳಲಾಯಿತು. ೧೯೫೬ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾಯ್ದೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು (ಕೇರಳ ರಾಜ್ಯಕ್ಕೆ ವರ್ಗಾಯಿಸಿದ ಕಾಸರಗೋಡು ತಾಲೂಕನ್ನು ಹೊರತುಪಡಿಸಿ) ಕರ್ನಾಟಕ ರಾಜ್ಯದಲ್ಲಿ ವಿಲೀನಗೊಳಿಸಲಾಯಿತು. ೧೯೯೭ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಉಡುಪಿ ಜಿಲ್ಲೆಯನ್ನು ಬೇರ್ಪಡಿಸಲಾಯಿತು.

**ಆಡಳಿತ ವಿಭಾಗಗಳು**

೧೮೯೫ರಲ್ಲಿ ಉಡುಪಿ ಜಿಲ್ಲೆಯನ್ನೊಳಗೊಂಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ವಿಸ್ತೀರ್ಣವು ೩,೯೦೨ ಚ.ಮೈ.ಗಳಾಗಿದ್ದು, ಹಿಂದೂ ಮಹಾಸಾಗರದಲ್ಲಿದ್ದ ಲಕ್ಷದ್ವೀಪ ಸಮುದ್ರದ ಅಮೀನದೀವಿ ದ್ವೀಪ ಸಮೂಹವನ್ನು ಒಳಗೊಂಡಿತ್ತು. ೧೮೯೬ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರು, ಕುಂದಾಪುರ, ಉಡುಪಿ, ಕಾಸರಗೋಡು ಮತ್ತು ಉಪ್ಪಿನಂಗಡಿ ತಾಲೂಕುಗಳು ಸೇರಿದ್ದವು. ೧೯೧೦ರಲ್ಲಿ ಮೂಡಬಿದ್ರಿ ಕೇಂದ್ರ ಸ್ಥಾನವುಳ್ಳ ಮೂಡಬಿದ್ರಿ ತಾಲೂಕನ್ನು ರಚಿಸಲಾಯಿತು. ಆಡಳಿತಾತ್ಮಕ ಕಾರಣಗಳಿಂದ ಎರಡು ವರ್ಷಗಳ ತರುವಾಯ ಮೂಡಬಿದ್ರಿ ತಾಲೂಕನ್ನು ರದ್ದುಪಡಿಸಿ ೧-೭-೧೯೧೨ ರಿಂದ ಜಾರಿಗೆ ಬರುವಂತೆ ಹೊಸದಾಗಿ ಕಾರ್ಕಳ ತಾಲೂಕನ್ನು ರಚಿಸಲಾಯಿತು. ೧೯೨೭ರಲ್ಲಿ ಉಪ್ಪಿನಂಗಡಿ ತಾಲೂಕಿನ ಕೇಂದ್ರ ಸ್ಥಾನವನ್ನು ಪುತ್ತೂರಿಗೆ ಬದಲಾಯಿಸಿ, ತಾಲೂಕಿನ ಹೆಸರನ್ನು ಪುತ್ತೂರು ತಾಲೂಕು ಎಂದು ಬದಲಾಯಿಸಲಾಯಿತು. ಕಂದಾಯ ಆಡಳಿತದ ಅನುಕೂಲಕ್ಕಾಗಿ ಜಿಲ್ಲೆಯನ್ನು ಕುಂದಾಪುರ, ಮಂಗಳೂರು ಮತ್ತು ಪುತ್ತೂರು ವಿಭಾಗಗಳನ್ನಾಗಿ ವಿಭಾಗಿಸಲಾಯಿತು. ಕುಂದಾಪುರ ವಿಭಾಗದಲ್ಲಿ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳು, ಪುತ್ತೂರು ವಿಭಾಗದಲ್ಲಿ ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳು ಮತ್ತು ಮಂಗಳೂರು ವಿಭಾಗದಲ್ಲಿ ಮಂಗಳೂರು ತಾಲೂಕನ್ನು ಸೇರಿಸಲಾಗಿತ್ತು. ಕುಂದಾಪುರ ವಿಭಾಗಕ್ಕೆ ಮುಖ್ಯ ಸಹಾಯಕ ಕಲೆಕ್ಟರ್, ಪುತ್ತೂರು ವಿಭಾಗಕ್ಕೆ ಉಪ ಕಲೆಕ್ಟರ್ (ಡೆಪ್ಯೂಟಿ ಕಲೆಕ್ಟರ್) ಮತ್ತು ಮಂಗಳೂರು ವಿಭಾಗಕ್ಕೆ ಡೆಪ್ಯುಟಿ ಕಲೆಕ್ಟರ್‌ಗಳನ್ನು ವಿಭಾಗಗಳ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿತ್ತು.

ಆಡಳಿತದ ಅನುಕೂಲಕ್ಕಾಗಿ ೧೯೫೪ರಲ್ಲಿ ಹೊಸದಾಗಿ ಬೆಳ್ತಂಗಡಿ ತಾಲೂಕನ್ನು ರಚಿಸಲಾಯಿತು. ೧೯೫೬ರಲ್ಲಿ ಕಾಸರಗೋಡು ತಾಲೂಕನ್ನು ಕೇರಳ ರಾಜ್ಯಕ್ಕೆ ವರ್ಗಾಯಿಸಲಾಯಿತು. ೧೯೫೯ರಲ್ಲಿ ಕಂದಾಯ ವಿಭಾಗಗಳ ಪುನರ್ ರಚನೆಯ ನಂತರ ರದ್ದು ಮಾಡಲ್ಪಟ್ಟಿದ್ದ ಹಳೆಯ ಮಂಗಳೂರು ವಿಭಾಗವನ್ನು ಮತ್ತು ೧೯೫೮ರಲ್ಲಿ ಮಂಗಳೂರು ತಾಲೂಕಿನಲ್ಲಿ ಸೇರ್ಪಡೆಗೊಂಡಿದ್ದ ಬಂಟ್ವಾಳ ತಾಲೂಕುಗಳನ್ನು ಅಕ್ಟೋಬರ್ ೧, ೧೯೫೯ ರಿಂದ ಜಾರಿಗೆ ಬರುವಂತೆ ಮತ್ತೆ ಅಸ್ತಿತ್ವಕ್ಕೆ ತರಲಾಯಿತು. ನಂತರ ಕಂದಾಯ ಆಡಳಿತ ಅನುಕೂಲಕ್ಕಾಗಿ ಏಪ್ರಿಲ್ ೧೯೬೬ರಲ್ಲಿ ಪುತ್ತೂರು ತಾಲೂಕಿನಿಂದ ಹೊಸದಾಗಿ ಸುಳ್ಯ ತಾಲೂಕನ್ನು ಸೃಜಿಸಲಾಯಿತು. ೧೯೭೨ರಲ್ಲಿ ಎಂಟು ತಾಲೂಕುಗಳು ಮತ್ತು ಮೂರು ಕಂದಾಯ ಉಪವಿಭಾಗಗಳಿದ್ದವು. ಕುಂದಾಪುರ ಉಪವಿಭಾಗಕ್ಕೆ ಕುಂದಾಪುರ, ಉಡುಪಿ ಮತ್ತು ಕಾರ್ಕಳ ತಾಲೂಕುಗಳು, ಪುತ್ತೂರು ಉಪವಿಭಾಗಕ್ಕೆ ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲೂಕುಗಳು ಮತ್ತು ಮಂಗಳೂರು ಉಪವಿಭಾಗಕ್ಕೆ ಮಂಗಳೂರು ಮತ್ತು ಬಂಟ್ವಾಳ ತಾಲೂಕುಗಳು ಸೇರಿದ್ದವು. ಎಂಟು ತಾಲೂಕುಗಳನ್ನು ಕಂದಾಯ ವೃತ್ತ ಅಥವಾ ಹೋಬಳಿಗಳನ್ನಾಗಿ (ಜಿಲ್ಲೆಯಲ್ಲಿ ಫಿರ್ಕಗಳೆಂದು ಬಳಕೆಯಲ್ಲಿದೆ) ವಿಂಗಡಿಸಲಾಗಿತ್ತು. ೧೯೭೩ರಲ್ಲಿದ್ದ ತಾಲೂಕುವಾರು ಹೋಬಳಿಗಳು ಮತ್ತು (ಒಟ್ಟು) ಗ್ರಾಮಗಳ ವಿವರ (ಕೋಷ್ಟಕ ೧.೨) ಕೆಳಕಂಡಂತಿದೆ.

೧೯೫೬ರಲ್ಲಿ ಕಾಸರಗೋಡು ತಾಲೂಕನ್ನು ಕೇರಳ ರಾಜ್ಯಕ್ಕೆ ವರ್ಗಾಯಿಸುವುದರ ಜೊತೆಗೆ ಅಮೀನದೀವಿ ದ್ವೀಪ ಸಮೂಹವನ್ನು ಹೊಸದಾಗಿ ರಚನೆಗೊಂಡ ಕೇಂದ್ರಾಡಳಿತ ಪ್ರದೇಶ ಲಕ್ಷದ್ವೀಪ, ಮಿನಿಕಾಯ್ ಮತ್ತು ಅಮೀನದೀವಿ ದ್ವೀಪಗಳಿಗೆ ವರ್ಗಾಯಿಸಲಾಯಿತು. ೧೯೫೪ರಲ್ಲಿ ಬೆಳ್ತಂಗಡಿ ತಾಲೂಕು ಹೊಸದಾಗಿ ರಚನೆಗೊಂಡಾಗ ಬೆಳ್ತಂಗಡಿ ಮತ್ತು ಕೊಕ್ಕಡ ಹೋಬಳಿಗಳ ತಲಾ ೨೫ ಗ್ರಾಮಗಳನ್ನು, ಉಪ್ಪಿನಂಗಡಿ ಹೋಬಳಿಯಿಂದ ಎರಡು ಗ್ರಾಮಗಳನ್ನು ಮತ್ತು ಕಾರ್ಕಳ ತಾಲೂಕಿನ ವೇಣೂರು

**ಕೋಷ್ಟಕ ೧.೨ : ತಾಲೂಕುವಾರು ಹೋಬಳಿಗಳ ವಿವರ – ೧೯೭೩**

| ಕ್ರ.ಸಂ. | ತಾಲೂಕು | ಒಟ್ಟು ಗ್ರಾಮಗಳ ಸಂಖ್ಯೆ | ಹೋಬಳಿಗಳ ಹೆಸರು |
|---|---|---|---|
| ೧ | **ಕುಂದಾಪುರ** | ೧೦೧ | ೧) ಕುಂದಾಪುರ<br>೨) ಬೈಂದೂರು<br>೩) ವಂಡ್ಸೆ |
| ೨ | **ಉಡುಪಿ** | ೧೧೫ | ೧) ಉಡುಪಿ<br>೨) ಕಾಪು<br>೩) ಕೋಟ<br>೪) ಬ್ರಹ್ಮಾವರ |
| ೩ | **ಕಾರ್ಕಳ** | ೭೯ | ೧) ಕಾರ್ಕಳ<br>೨) ಮೂಡಬಿದ್ರಿ<br>೩) ಅಜೆಕಾರ್ |
| ೪ | **ಪುತ್ತೂರು** | ೬೮ | ೧) ಪುತ್ತೂರು<br>೨) ಉಪ್ಪಿನಂಗಡಿ<br>೩) ಕಡಬ |
| ೫ | **ಸುಳ್ಯ** | ೪೧ | ೧) ಸುಳ್ಯ<br>೨) ಪಾಂಜಾ |
| ೬ | **ಬೆಳ್ತಂಗಡಿ** | ೮೧ | ೧) ಬೆಳ್ತಂಗಡಿ<br>೨) ವೇಣೂರು<br>೩) ಕೊಕ್ಕಡ |
| ೭ | **ಮಂಗಳೂರು** | ೧೧೮ | ೧) ಮಂಗಳೂರು–ಎ<br>೨) ಮಂಗಳೂರು–ಬಿ<br>೩) ಗುರುಪುರ<br>೪) ಸುರತ್ಕಲ್<br>೫) ಮುಲ್ಕಿ |
| ೮ | **ಬಂಟ್ವಾಳ** | ೮೪ | ೧) ಬಂಟ್ವಾಳ<br>೨) ಪಾಣೆ ಮಂಗಳೂರು<br>೩) ವಿಟ್ಲ |
| | **ಒಟ್ಟು** | ೬೮೭ | ೨೬ |

*ಮೂಲ: ಜನಗಣತಿ ನಿರ್ದೇಶನಾಲಯ, ಬೆಂಗಳೂರು*

ಹೋಬಳಿಯಿಂದ ೨೯ ಗ್ರಾಮಗಳನ್ನು ಸೇರಿಸಲಾಯಿತು. ಅದೇ ರೀತಿ ೧೯೫೯ರಲ್ಲಿ ಬಂಟ್ವಾಳ ತಾಲೂಕನ್ನು ಹೊಸದಾಗಿ ರಚಿಸಿದಾಗ ಅದಕ್ಕೆ ಬಂಟ್ವಾಳ ಹೋಬಳಿಯ ೩೧ ಗ್ರಾಮಗಳನ್ನು, ಮಂಗಳೂರು ತಾಲೂಕಿನಲ್ಲಿದ್ದ ಪಾಣೆ ಮಂಗಳೂರು ಹೋಬಳಿಯ ೩೦ ಗ್ರಾಮಗಳನ್ನು ಮತ್ತು ಪುತ್ತೂರು ತಾಲೂಕಿನ ವಿಟ್ಲ ಹೋಬಳಿಯ ೨೪ ಗ್ರಾಮಗಳನ್ನು ಸೇರ್ಪಡೆಗೊಳಿಸಲಾಯಿತು. ಅದೇ ವರ್ಷ ಮಂಗಳೂರು ತಾಲೂಕಿನ ಹೆಜಮಾಡಿ ಗ್ರಾಮವನ್ನು ಉಡುಪಿ ತಾಲೂಕಿಗೂ, ಇನ್ನೆ, ಮುಲ್ಲಡ್ಕ ಮತ್ತು ಮುಂದಕ್ಕೂರು ಗ್ರಾಮಗಳನ್ನು ಕಾರ್ಕಳ ತಾಲೂಕಿಗೂ ವರ್ಗಾಯಿಸಲಾಯಿತು.

ನಂತರ ೧೯೬೭ರಲ್ಲಿ ಹೊಸದಾಗಿ ಸುಳ್ಯ ತಾಲೂಕು ರಚನೆಗೊಂಡಾಗ ಪುತ್ತೂರು ತಾಲೂಕಿನ ಪಂಜ ಹೋಬಳಿಯ ೧೯ ಗ್ರಾಮಗಳನ್ನು ಮತ್ತು ಸುಳ್ಯ ಹೋಬಳಿಯ ೨೨ ಗ್ರಾಮಗಳನ್ನು ಅದಕ್ಕೆ

ಸೇರಿಸಲಾಯಿತು. ೧೯೯೭ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳನ್ನು ಸೇರಿಸಿ ಹೊಸದಾಗಿ ಉಡುಪಿ ಜಿಲ್ಲೆಯನ್ನು ರಚಿಸಲಾಯಿತು. ೨೫–೩–೧೯೯೮ ರಲ್ಲಿ ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಮೂಡಬಿದ್ರಿ ಹೋಬಳಿಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿಗೆ ವರ್ಗಾಯಿಸಲಾಗಿದೆ. ಪ್ರಸ್ತುತ ಉಡುಪಿ ಜಿಲ್ಲೆಯು ಉಡುಪಿ, ಕುಂದಾಪುರ ಮತ್ತು ಕಾರ್ಕಳ ತಾಲೂಕುಗಳನ್ನೊಳಗೊಂಡ ಒಂದು ಕಂದಾಯ ಉಪವಿಭಾಗವನ್ನು ಹೊಂದಿದ್ದು ಅದರ ಕೇಂದ್ರ ಸ್ಥಾನ ಕುಂದಾಪುರ ಆಗಿದೆ. ಜಿಲ್ಲೆಯಲ್ಲಿ ಒಟ್ಟು ಒಂಭತ್ತು ಹೋಬಳಿಗಳಿವೆ. ಉಡುಪಿ ಜಿಲ್ಲೆಯ ತಾಲೂಕುವಾರು ವಿವರ ಕೆಳಕಂಡಂತಿವೆ.

**ಕೋಷ್ಟಕ ೧.೩ : ಉಡುಪಿ ಜಿಲ್ಲೆಯ ತಾಲೂಕುವಾರು ವಿವರ**

| ಕ್ರ.ಸಂ. | ತಾಲೂಕು | ರೇಖಾಂಶ (ಡಿಗ್ರಿ ಮತ್ತು ನಿಮಿಷಗಳಲ್ಲಿ) | | ಅಕ್ಷಾಂಶ (ಡಿಗ್ರಿ ಮತ್ತು ನಿಮಿಷಗಳಲ್ಲಿ) | |
|---|---|---|---|---|---|
| | | ಇಂದ | ವರೆಗೆ | ಇಂದ | ವರೆಗೆ |
| ೧ | ಉಡುಪಿ | ೭೪–೪೨ | ೭೪–೫೬ | ೧೩–೦೫ | ೧೩–೩೩ |
| ೨ | ಕುಂದಾಪುರ | ೭೪–೩೫ | ೭೫–೦೫ | ೧೩–೨೯ | ೧೩–೫೮ |
| ೩ | ಕಾರ್ಕಳ | ೭೪–೪೦ | ೭೫–೧೩ | ೧೨–೫೯ | ೧೩–೩೧ |
| | ಜಿಲ್ಲೆ | **೭೪–೩೫** | **೭೫–೧೩** | **೧೨–೫೯** | **೧೩–೫೮** |

| ಕ್ರ.ಸಂ. | ತಾಲೂಕು | ವಿಸ್ತೀರ್ಣ (ಚ.ಕಿ.ಮೀ) (ಪ್ರತಿ ಚ.ಕಿ.ಮೀ.ಗೆ (ಜನಸಂಖ್ಯೆ) | ಜನಸಾಂದ್ರತೆ | ಗ್ರಾಮಗಳ ಸಂಖ್ಯೆ | ನಗರ/ ಪಟ್ಟಣಗಳ ಸಂಖ್ಯೆ |
|---|---|---|---|---|---|
| ೧ | ಕುಂದಾಪುರ | ೧,೫೯೯.೭೨ | ೨೪೨ | ೯೯ | ೫ |
| ೨ | ಉಡುಪಿ | ೯೨೯.೨೪ | ೫೭೦ | ೯೯ | ೬ |
| ೩ | ಕಾರ್ಕಳ | ೧,೦೭೨.೩೭ | ೧೮೮ | ೫೦ | ೨ |
| | ಜಿಲ್ಲಾ ಮೊತ್ತ | **೩೮೮೦.೦೦** | **೩೧೦** | **೨೪೮** | **೧೩** |

*ಮೂಲ: ಜನಗಣತಿ ನಿರ್ದೇಶನಾಲಯ, ಬೆಂಗಳೂರು*

## ಭೂವಿಜ್ಞಾನ ಮತ್ತು ಖನಿಜ ಸಂಪತ್ತು

ಉಡುಪಿ ಜಿಲ್ಲೆಯ ಪೂರ್ವದಲ್ಲಿ ಎತ್ತರವಾದ ಪಶ್ಚಿಮ ಘಟ್ಟಗಳ ಶ್ರೇಣಿಗಳಿವೆ. ದಕ್ಷಿಣದಿಂದ ಉತ್ತರಕ್ಕೆ ಹೋದಂತೆಲ್ಲಾ ಜಿಲ್ಲೆಯ ಅಗಲ ಕಿರಿದಾಗುತ್ತದೆ. ಜಿಲ್ಲೆಯ ಭೂ ಶಿಲಾ ರಚನೆಯನ್ನು ಮುಖ್ಯವಾಗಿ ಧಾರವಾಡ ಶಿಲಾವರ್ಗ, ಮಧ್ಯಂತರ ಸೇರ್ಪಡೆಗಳು ಮತ್ತು ಈಚಿನ ರಚನೆಗಳು ಎಂದು ವಿಂಗಡಿಸಬಹುದು. ಧಾರವಾಡ ಶಿಲಾವರ್ಗದಲ್ಲಿ ರೂಪಾಂತರಗೊಂಡ ಅನೇಕ ಪ್ರಾಚೀನ ಶಿಲೆಗಳಿವೆ. ಇವುಗಳಲ್ಲಿ ಮುಖ್ಯವಾಗಿ ಪದರ ಪದರವಾದ ಕಬ್ಬಿಣ ಮಿಶ್ರಿತವಾದ ಕ್ವಾರ್ಟ್ಸೈಟ್, ಟಾಲ್ಕ್ ಹಾಗೂ ಹಾರ್ನಬ್ಲೆಂಡ್ ಪದರಗಳು ಅಲ್ಲಲ್ಲಿ ವಿರಳವಾಗಿ ಕಾಣಸಿಗುತ್ತವೆ. ಜಂಬಿಟ್ಟಿಗೆ ಕಲ್ಲು ಕರಾವಳಿ ಪ್ರದೇಶದಲ್ಲಿ ಬಹುಮಟ್ಟಿಗೂ ಒಳಭಾಗದಲ್ಲಿ ಸ್ವಲ್ಪಮಟ್ಟಿಗೂ ಇದೆ. ಕರಾವಳಿಯಲ್ಲಿ ಕಂಡುಬರುವ ಮೆಕ್ಕಲು, ಜೇಡಿ ಮತ್ತು ಸುಣ್ಣಕಲ್ಲಿನ ಪದರಗಳು ಈಚಿನ ರಚನೆಗಳಾಗಿವೆ.

ಈ ಜಿಲ್ಲೆಯ ಪೂರ್ವ ಗಡಿಯುದ್ದಕ್ಕೂ ಎತ್ತರವಾದ ಮತ್ತು ದಟ್ಟವಾದ ಕಾಡಿನಿಂದ ಕೂಡಿದ ಪಶ್ಚಿಮ ಘಟ್ಟ ಶ್ರೇಣಿಗಳಿವೆ. ಅಲ್ಲಲ್ಲಿ ಎತ್ತರವಾದ ಗಿರಿಶಿಖರಗಳು ಮತ್ತು ಮಧ್ಯೆ ಮಧ್ಯೆ ಕಂದರಗಳಿಂದ ಕೂಡಿರುವ ಭೂದೃಶ್ಯ ರುದ್ರರಮಣೀಯವಾಗಿವೆ. ಸಹ್ಯಾದ್ರಿ ಘಟ್ಟಗಳ ಶ್ರೇಣಿಗಳ ನಡುವೆ ಇರುವ ಆಗುಂಬೆ ಘಾಟಿ ರಸ್ತೆಯು ಕರ್ನಾಟಕದ ಮೈದಾನ ಪ್ರದೇಶದೊಂದಿಗೆ ಸಂಪರ್ಕ ಮಾರ್ಗವಾಗಿದೆ. ಕಾರ್ಕಳದ

ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಗಡಿಯನ್ನು ಸೇರಿ ಮುಂದೆ ಶೃಂಗೇರಿ ಮತ್ತು ಕುದುರೆಮುಖಗಳತ್ತ ಕವಲಾಗಿ ಸಾಗುವ ಹೆದ್ದಾರಿ ಈ ಪ್ರದೇಶದ ಇನ್ನೊಂದು ಪ್ರಮುಖ ಮಾರ್ಗವಾಗಿದೆ. ಆಗುಂಬೆಗೆ ಉತ್ತರದಲ್ಲಿರುವ ಕೊಡಚಾದ್ರಿ ಬೆಟ್ಟ ಈ ಜಿಲ್ಲೆಯ ಅತ್ಯಂತ ಎತ್ತರ (೧,೩೪೧ ಮೀ.) ಶಿಖರವಾಗಿದೆ. ಘಟ್ಟದ ಕೆಳಗೆ ಪಶ್ಚಿಮಾಭಿಮುಖವಾಗಿ ಬಂದಂತೆಲ್ಲಾ ಮೈದಾನ ಪ್ರದೇಶ ತೆರೆದುಕೊಳ್ಳುತ್ತದೆ. ಅಷ್ಟೇನೂ ಕಡಿದಾಗಿರದ ಇಳಿಜಾರಿನ ಪ್ರದೇಶದಲ್ಲಿ ಅಲ್ಲಲ್ಲಿ ಎತ್ತರದ ಗುಡ್ಡಬೆಟ್ಟಗಳುಂಟು. ಕೃಷಿ ಜಮೀನಿನಲ್ಲಿ ಭತ್ತದ ಗದ್ದೆಗಳು, ತೆಂಗು, ಅಡಿಕೆ, ಗೋಡಂಬಿ ತೋಟಗಳಿವೆ. ಕೆಲವೆಡೆ ಕೆಮ್ಮಣ್ಣಿನಿಂದ ಕೂಡಿದ ಬರಡು ದಿಣ್ಣೆಗಳಿವೆ. ಈ ಜಿಲ್ಲೆಯಲ್ಲಿ ಸಮತಟ್ಟಾದ ಭೂ ಪ್ರದೇಶ ಕಡಿಮೆಯಿದೆ. ಜಿಲ್ಲೆಯ ತೀರಪ್ರದೇಶ ಅತ್ಯಂತ ಮುಖ್ಯವಾದ ಭಾಗವಾಗಿದೆ. ಇಲ್ಲಿಯ ಜನಸಾಂದ್ರತೆ ಅಧಿಕವಾಗಿದೆ. ಈ ಪ್ರದೇಶ ಆರ್ಥಿಕ ಚಟುವಟಿಕೆಗಳಿಂದ ಕೂಡಿದೆ. ಇಲ್ಲಿಯ ತೀರ ಪ್ರದೇಶದ ಅಂಚು ಸಾಮಾನ್ಯವಾಗಿ ನೇರವಾಗಿದೆ. ಸಮುದ್ರದ ಹಿನ್ನೀರಿನ ಪ್ರದೇಶಗಳು ಮೀನುಗಾರಿಕೆಗೆ ಮತ್ತು ದೋಣಿಗಳ ಸಂಚಾರಕ್ಕೆ ಉಪಯುಕ್ತವಾಗಿವೆ. ಬೈಂದೂರು, ಗಂಗೊಳ್ಳಿ, ಕುಂದಾಪುರ, ಮಲ್ಪೆ, ಪಡುಬಿದರೆ ಮೊದಲಾದ ಪಟ್ಟಣಗಳು ಮೀನುಗಾರಿಕೆಗೆ ಮತ್ತು ವ್ಯಾಪಾರದಿಂದಾಗಿ ಅಭಿವೃದ್ಧಿಗೆ ಬಂದಿವೆ. ಮಲ್ಪೆ ಬಳಿ ಸಂತ ಮೇರಿ ದ್ವೀಪ ಸಮೂಹವಿದೆ.

**ಜಲಸಂಪತ್ತು**

ಇಲ್ಲಿಯ ಭೌಗೋಳಿಕ ಸನಿವೇಶ ಹಾಗೂ ವಾಯುಗುಣದಿಂದಾಗಿ ಇಲ್ಲಿ ಹೆಚ್ಚಿನ ಜಲಸಂಪನ್ಮೂಲವಿದೆ. ನೈಋತ್ಯ ಮಾರುತಗಳು ಇಲ್ಲಿನ ತೀರ ಮತ್ತು ಘಟ್ಟಪ್ರದೇಶಗಳಲ್ಲಿ ಹೇರಳವಾಗಿ ಮಳೆ ಸುರಿಸುತ್ತವೆ. ಜೂನ್‌ನಿಂದ ಸೆಪ್ಟೆಂಬರ್‌ವರೆಗಿನ ಮುಂಗಾರಿನ ಕಾಲದಲ್ಲಿ ಬರುವ ಮಳೆಯಿಂದಾಗಿ ಪಶ್ಚಿಮ ಘಟ್ಟಗಳ ಅನೇಕ ನದಿತೊರೆಗಳು ಪಶ್ಚಿಮಾಭಿಮುಖವಾಗಿ ಹರಿದು ಬರುತ್ತವೆ. ಇವುಗಳ ಉದ್ದ ಕಡಿಮೆಯಾದರೂ ನೀರು ಅಧಿಕವಾಗಿರುತ್ತದೆ. ಗಂಗೊಳ್ಳಿ ನದಿಯು (ಕುಂದಾಪುರದ ಬಳಿ) ಐದು ಉಪಹೊಳೆಗಳನ್ನು ಕೂಡಿಕೊಂಡು ಸಮುದ್ರ ಸೇರುವುದರಿಂದ ಈ ಸ್ಥಳವನ್ನು ಪಂಚಗಂಗಾವಳಿಯೆಂದು ಕರೆಯುತ್ತಾರೆ. ಇಲ್ಲಿ ವಿಸ್ತಾರವಾದ ಅಳಿವೆ ಹಾಗೂ ಬಂದರು ಇದೆ.

ಸ್ವರ್ಣ, ಸೀತಾ, ಹಾಲಾಡಿ, ಚಕ್ರಾ ಮತ್ತು ಕೊಲ್ಲೂರು ನದಿಗಳು ಮುಖ್ಯವಾದ ನದಿಗಳಾಗಿವೆ. ಸೀತಾ ನದಿ ಮತ್ತು ಸ್ವರ್ಣನದಿಗಳು ಬಾರ್ಕೂರು ಬಳಿ ಒಟ್ಟುಗೂಡಿ ಸಮುದ್ರ ಸೇರುತ್ತವೆ. ಈ ಎಲ್ಲ ನದಿಗಳು ಸೇರುವ ಹಿನ್ನೀರು ಪ್ರದೇಶ ದೋಣಿಗಳ ಸಂಚಾರಕ್ಕೆ ಅನುಕೂಲಕರವಾಗಿದೆ. ಜಿಲ್ಲೆಯಲ್ಲಿ ಜಲಸಂಪತ್ತು ಹೇರಳವಾಗಿದ್ದರೂ ಅದು ವ್ಯವಸಾಯಕ್ಕೆ ಉಪಯೋಗವಾಗುವುದಕ್ಕಿಂತ ಸಮುದ್ರಕ್ಕೆ ಹರಿದುಹೋಗುವುದೇ ಹೆಚ್ಚು. ಕಾರ್ಕಳ ತಾಲೂಕಿನ ಭಂಡಾಜಿ ಜಲಪಾತದಲ್ಲಿ ನೀರು ೨೦೦ ಮೀ. ಗಳಷ್ಟು ಎತ್ತರದಿಂದ ಧುಮುಕುತ್ತದೆ. ಭಾರತದ ಪಶ್ಚಿಮ ಘಟ್ಟಗಳ ಪಶ್ಚಿಮಕ್ಕೆ ಸಮುದ್ರ ತೀರದವರೆಗೆ ಹರಡಿರುವ ಕರಾವಳಿಯ ತಗ್ಗಾದ ಭೂ ಭಾಗವನ್ನು **'ಪರಶುರಾಮನ ನಾಡು'** ಅಥವಾ **'ಪರಶುರಾಮನ ಕ್ಷೇತ್ರ'** ಎಂದು ಪುರಾಣೇತಿಹಾಸಗಳಲ್ಲಿ ಸೂಚಿಸಿರುವರು. ಪರಶುರಾಮನು ಕ್ಷತ್ರಿಯ ರಾಜರನ್ನೆಲ್ಲಾ ಗೆದ್ದು, ದಿಗ್ವಿಜಯಿಯಾಗಿ ಪಶ್ಚಿಮ ಘಟ್ಟಗಳೆಡೆ ಬಂದು ಮುಂದುವರಿಯಬೇಕೆಂದು ಇಚ್ಛಿಸಿದ್ದನಂತೆ. ಆದರೆ ಘಟ್ಟದ ತುದಿಯಿಂದ ಸಮುದ್ರವನ್ನು ಕಂಡು ಕೋಪಗೊಂಡು, ತನ್ನ ಕೊಡಲಿಯನ್ನು ಸಮುದ್ರದ ಕಡೆಗೆ ಎಸೆದು, ಸಮುದ್ರ ರಾಜನು ಅಲ್ಲಿಯವರೆಗೆ ಹಿಂಜರಿಯಲಿ ಎಂದು ಆಜ್ಞೆ ನೀಡಿದನೆಂದೂ, ಸಮುದ್ರವು ಹಾಗೆ ಹಿಂಜರಿಯಿತೆಂದೂ ಹೇಳಿರುವರು. ಇದರಿಂದ ಪಶ್ಚಿಮ ಕರಾವಳಿಯ ಪ್ರದೇಶವು ಹಿಂದೊಮ್ಮೆ ಸಮುದ್ರದ ಅಡಿಯಲ್ಲಿತ್ತೆಂದೂ, ಸಮುದ್ರದ ಹಿಂಜರಿತದಿಂದ ಭೂಭಾಗವಾಗಿ ಮಾರ್ಪಟ್ಟಿತ್ತೆಂದೂ ಊಹಿಸಬಹುದಾಗಿದೆ.

**ಖನಿಜ ಸಂಪತ್ತು**

ಉಡುಪಿ ಜಿಲ್ಲಾ ಪ್ರದೇಶವನ್ನು ಭೂ ವೈಜ್ಞಾನಿಕರೀತಿ ಪರಿಶೋಧಿಸಿ ವಿವಿಧ ಶಿಲೆಗಳು ಮತ್ತು ಖನಿಜಗಳು ಹರಡಿರುವ ಪ್ರದೇಶವನ್ನು ಗುರುತಿಸಿದೆ.

**ಇಟ್ಟಿಗೆ ಕಲ್ಲು** (Laterite) : ಶಿಲೆಗಳಲ್ಲಿ ಕರಾವಳಿಯುದ್ದಕ್ಕೂ ಭೂಮಿಯ ಹೊರಮೈಯಲ್ಲಿ ದೊರೆಯುವ ಇಟ್ಟಿಗೆ ಕಲ್ಲು ಅಥವಾ ಮುರಕಲ್ಲು ಇಲ್ಲಿಯ ಒಂದು ಪ್ರಮುಖ ಶಿಲೆಯಾಗಿದೆ. ಹನ್ನೆರಡನೇ ಶತಮಾನದಲ್ಲಿ ಕಟ್ಟಿದ ಕಾಂಬೋಡಿಯಾದ ಅಂಗಕಾರ್‌ವಾಟ್ (ಆನಂದವಟಿ) ವಿಷ್ಣು ದೇವಾಲಯದಿಂದ ಮೊದಲುಗೊಂಡು ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳಾದ್ಯಂತ ಬಹು ಆದಿಯಿಂದಲೂ ಮುರಕಲ್ಲು ಕಟ್ಟಡ ನಿರ್ಮಾಣದಲ್ಲಿ ಬಳಕೆಯಲ್ಲಿದ್ದರೂ ಅದು ಅಂತಾರಾಷ್ಟ್ರೀಯವಾಗಿ ೧೮೦೭ರಲ್ಲಿ **'ಲ್ಯಾಟರೈಟ್'** ಎಂದು ಹೆಸರಿಸಲಾಯಿತು. ಬುಕನನ್ ಎಂಬ ಪ್ರವಾಸಿ ಮಲಬಾರಿನಲ್ಲಿ ಈ ಕಲ್ಲನ್ನು ಗುರುತಿಸಿದನು. ಮರವನ್ನು ಸುಲಭವಾಗಿ ಸೀಳುವಂತೆ ಇದನ್ನು ತುಂಡು ಮಾಡಬಹುದಾಗಿದ್ದರಿಂದ ಮಲೆಯಾಳದಲ್ಲಿ ಇದನ್ನು **'ವೆಟ್ಟುಕಲ್ಲು'** ಮತ್ತು **'ಇಟ್ಟಿಕಾಕಲ್ಲು'** ಎಂದು ಕರೆಯುತ್ತಿದ್ದರು. ಬುಕನನ್ ಇದಕ್ಕೆ **'ಲ್ಯಾಟರೈಟ್'** ಎಂದು ಹೆಸರಿಸಿದನು. ಲ್ಯಾಟಿನ್‌ನಲ್ಲಿ **'ಲ್ಯಾಟರ್'** ಎಂದರೆ ಇಟ್ಟಿಗೆ ಎಂದು ಅರ್ಥ. ಇದನ್ನು ರಾಜ್ಯದ ಇತರೆಡೆಗಳಲ್ಲಿ ಜಂಬಿಟ್ಟಿಗೆ ಎಂತಲೂ ಕರೆಯುತ್ತಾರೆ. ಮುರಕಲ್ಲಿನ ಬಳಕೆಯನ್ನು ಎಂಟನೆಯ ಶತಮಾನದಲ್ಲಿ ಕಟ್ಟಲ್ಪಟ್ಟ ಉದ್ಯಾವರ ಸಮೀಪದ ಶಂಭುಗುಡ್ಡೆ ಮೇಲಿರುವ ಮಹಾಲಿಂಗೇಶ್ವರ ದೇವಾಲಯದಲ್ಲಿ ಕಾಣಬಹುದು. ಜೈನ ಬಸದಿಗಳಲ್ಲಿ ಸಾಮಾನ್ಯವಾಗಿ ಗ್ರಾನೈಟ್ ಕಂಬಗಳ ನಡುವೆ ಮಣ್ಣಿನ ಇಲ್ಲವೆ ಮುರಕಲ್ಲಿನ ಗೋಡೆಗಳನ್ನು ಕಟ್ಟಿದ್ದಾರೆ. ಮುರಕಲ್ಲನ್ನು ಚಿಕ್ಕಪುಟ್ಟ ಸುಂಕ, ಕೊಳ, ಬಾವಿ, ತೋಡು, ಮುಂತಾದ ಕಟ್ಟಣೆಗಳಿಗೆ ಸಹಿತ ಬಹು ಆದಿಯಿಂದಲೂ ಬಳಸುತ್ತಿದ್ದರು. ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಸಾಮಾನು ಸಾಗಾಟವೆಲ್ಲ ತಲೆಹೊರೆಯ ಮೂಲಕ ನಡೆಯುತ್ತಿದ್ದುದರಿಂದ ಹೊರೆಯನ್ನು ಅಲ್ಲಲ್ಲಿ ಇಳಿಸಿ ದಣಿವಾರಿಸಿಕೊಳ್ಳಲು ಅನುಕೂಲವಾಗುವಂತೆ ಸುಮಾರು ಎರಡು ಮೀಟರ್ ಎತ್ತರಕ್ಕೆ ಮುರಕಲ್ಲಿನ ದೊಡ್ಡದಾದ ಏಕತುಂಡನ್ನು, ಮಾರ್ಗದ ಪಕ್ಕಕ್ಕೆ ಹುಗಿಯುತ್ತಿದ್ದರು. ಅವುಗಳಿಗೆ **'ಹೊರೆಕಲ್ಲು'** ಎಂದು ಕರೆಯುತ್ತಿದ್ದರು. ಹೊರೆಕಲ್ಲುಗಳನ್ನು ಈಗಲೂ ಜಿಲ್ಲೆಯ ಅನೇಕ ಕಡೆ ಕಾಣಬಹುದು.

ಶುಷ್ಕ ಮತ್ತು ತೇವಪೂರಿತ ಹವೆಗಳು ಪರ್ಯಾಯವಾಗಿ ಇರುವ ಉಷ್ಣವಲಯ ಪ್ರದೇಶಗಳಲ್ಲಿ ಭೂಮಿಯ ಹೊರಚಿಪ್ಪಿನ ಮೇಲ್ಭಾಗದಲ್ಲಿರುವ ಗ್ರಾನೈಟ್, ನೈಸ್ ಮತ್ತು ಬೆಸಾಲ್ಟ್ ಶಿಲೆಗಳ ಕಣಗಳು ಶಿಥಿಲೀಕರಣಕ್ಕೊಳಗಾಗುತ್ತವೆ. ಇದರಿಂದಾಗಿ ಈ ಶಿಲೆಕಣಗಳಲ್ಲಿನ ಸಿಲಿಕಾ, ಸುಣ್ಣ ಮತ್ತು ಆಲ್ಕಲೀಸ್ ಸಂಯೋಜಕಗಳು ದ್ರವರೂಪವಾಗಿ ಹೋಗಿ ಅಲ್ಯೂಮಿನ, ಕಬ್ಬಿಣ ಮತ್ತು ಅಲ್ಪ ಪ್ರಮಾಣದಲ್ಲಿ ಟೈಟಾನಿಯಂ ಮಾತೃಶಿಲೆಯಲ್ಲಿ ಉಳಿದು ಮುರಕಲ್ಲಾಗುತ್ತದೆ. ಇದರ ಕಾಲವನ್ನು ಭೂಶಾಸ್ತ್ರಜ್ಞರು ನವೀನ ಜೀವಯುಗಕ್ಕೆ (ಪ್ಲಿಸ್ಟೋಸೀನ್) ಸೇರಿಸಿದ್ದಾರೆ. ಇದು ಅನಿಲದ್ವಾರಗಳಿಂದ ಕೂಡಿದ ಕೋಶದಂತೆ (Vesicular texture) ಕಾಣುತ್ತದೆ. ಮುರಕಲ್ಲಿನ ಬಣ್ಣ ಅದರ ಸಂಯೋಜಿತ ಘಟಕಗನ್ನನುಸರಿಸಿ ಕಂದುಮಿಶ್ರಿತ ಕೆಂಪು, ಕಪ್ಪು ಕಂದು, ಹಳದಿ ಹೀಗೆ ವಿವಿಧವಾಗಿರುತ್ತದೆ. ಉಡುಪಿ ತಾಲೂಕಿನ ಪರ್ಕಳ ಮತ್ತು ಕಾರ್ಕಳ ತಾಲೂಕಿನ ಮುದರಂಗಡಿಗಳಲ್ಲಿ ಮುರಕಲ್ಲನ್ನು ತೆಗೆಯುವ ಗಣಿಗಳಿವೆ.

ಮುರಕಲ್ಲನ್ನು ಭೂಮಿಯಿಂದ ಹೊರತೆಗೆದಾಗ ಮೃದುವಾಗಿದ್ದು, ಕ್ರಮೇಣ ವಾತಾವರಣಕ್ಕೊಡ್ಡಿದಾಗ ಗಡುಸಾಗಿ ಅಡಕವಾದ ಶಿಲೆಯಾಗಿ ಮಾರ್ಪಡುತ್ತದೆ. ಇದರ ಅದುಮುವ ಬಲ ಚದರ ಮೀಟರಿಗೆ ೨೦ ರಿಂದ ೮೦ಟನ್, ಸಾಂದ್ರತೆ ೨.೫ ಈ ಕಲ್ಲು ಗ್ರಾನೈಟ್ ಮತ್ತು ನೈಸ್ ಶಿಲೆಗಳಂತೆ ಸದೃಢವಲ್ಲ. ಆದರೂ ದಿನಗಳೆದಂತೆ ಈ ಕಲ್ಲು ಗಡುಸಾಗುತ್ತದೆ. ಈ ಜಿಲ್ಲೆಯಲ್ಲಿ ಕಡಿಮೆ ಆದಾಯ ವರ್ಗದ ಮನೆಗಳ ನಿರ್ಮಾಣ, ಗ್ರಾಮೀಣ ರಸ್ತೆ, ಕೆರೆ, ಬಾವಿಗಳ ಕಟ್ಟಣೆ, ಚಿಕ್ಕಪುಟ್ಟ ಸೇತುವೆ, ತೋಡು ಆಸರೆಗೋಡೆಗಳಿಗೆ ಉಪಯೋಗಿಸುತ್ತಾರೆ. ಮುರಕಲ್ಲು ಕಟ್ಟಣೆಗೆ ಮಣ್ಣು, ಸುಣ್ಣ ಇಲ್ಲವೆ ಸಿಮೆಂಟ್ ಗಾರೆಯನ್ನು ಬಂಧವಾಗಿ ಉಪಯೋಗಿಸುತ್ತಾರೆ.

**ಗ್ರಾನೈಟ್ (Granite) ಮತ್ತು ಗ್ರಾನೈಟಿಕ್ ನೈಸ್ (Granitic Gneiss)**: ಗ್ರಾನೈಟ್ ಮತ್ತು ಗ್ರಾನೈಟಿಕ್ ನೈಸ್ ಶಿಲೆಗಳು ಒಂದೇ ಖನಿಜ ಸಂಯೋಜನೆಯ ದ್ವಿವಿಧ ರೂಪಗಳು. ಗ್ರಾನೈಟ್ ಒಂದು ಅಗ್ನಿಶಿಲೆ. ಅದು ಭೂಮಿಯ ಒತ್ತಡಗಳಿಗೆ ಮಣಿದು ರೂಪಾಂತರ ಹೊಂದಿ ಗ್ರಾನೈಟಿಕ್ ನೈಸ್ ಆಗುವುದು. ಭೌತಗುಣಗಳು ಎರಡೂ ಶಿಲೆಗಳಲ್ಲೂ ಸಮನಾಗಿರುವುವು. ಜಿಲ್ಲೆಯ ಕೆಲವೆಡೆ ಇಟ್ಟಿಗೆ ಕಲ್ಲಿನ ಅಡಿಯಲ್ಲಿ ಅತಿ ಗಡುಸಾದ

ಗ್ರಾನೈಟ್ ಶಿಲೆ ಮತ್ತು ನೈಸ್ ಶಿಲೆ (ಪಾದೆಕಲ್ಲುಗಳು) ದೊರೆಯುವುದು. ಕಾರ್ಕಳ ತಾಲೂಕಿನಲ್ಲಿ ಮತ್ತು ಉಡುಪಿ ಬಳಿಯ ಉದ್ಯಾವರದಲ್ಲಿ ಈ ಶಿಲೆಗಳು ಕಂಡುಬರುತ್ತವೆ. ಶಿಲೆಯ ಹೊರಮೈ ಮಳೆ ಬಿಸಿಲುಗಳಿಂದ ಕಪ್ಪಾಗಿರುತ್ತದೆ. ಕಾರ್ಕಳದ ಹೆಸರು ಕರಿಯಕಲ್‌ನಿಂದ ಬಂದದ್ದೆಂದು ಹೇಳುವರು. ಆದರೆ ಒಳಮೈ ಬಹಳ ಬಿಳಿಪು, ಶಿಲೆಯು ಅತಿ ಗಡುಸಾಗಿದ್ದು ಬಿರುಕು ರಹಿತವಾಗಿರುವುದರಿಂದ ದೊಡ್ಡ ದೊಡ್ಡ ಬಂಡೆಗಳನ್ನು ತೆಗೆಯಬಹುದು. ಅಂತರ ಬಂಡೆಗಳಿಂದ ಬಾಹುಬಲಿಯ ಎರಡು ಬೃಹತ್ ವಿಗ್ರಹಗಳನ್ನು ಕಡೆದು ನಿರ್ಮಿಸಿದ ಕೀರ್ತಿ ರಂಜಾಳಗೋಪಾಲ ಶೆಣೈಯವರಿಗೆ ಸಲ್ಲುತ್ತದೆ. ಇದೇ ಶಿಲೆಯಿಂದ ವೇಣೂರಿನ ಮತ್ತು ಕಾರ್ಕಳದ ಗೊಮ್ಮಟರನ್ನು ಕೆತ್ತಿರುವರು. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಸಾವಿರಸ್ಥಂಭದ ಜೈನದೇವಾಲಯ (ಬಸದಿ)ವನ್ನು ಈ ಶಿಲೆಯಿಂದ ನಿರ್ಮಿಸಿರುವರು. ಅನೇಕ ದೇವಾಲಯಗಳ ಆವಾರ, ಗರುಡಸ್ಥಂಭ ಹಾಗೂ ಪ್ರಾಂಗಣಗಳನ್ನೂ ನಿರ್ಮಿಸಿರುವರು. ಕಟ್ಟಡ, ಸೇತುವೆಗಳಿಗೆ ಅಡಿಪಾಯಕ್ಕೂ, ಮೇಲ್ಕಡಕ್ಕೂ ಉಪಯೋಗಿಸುವರು. ನೆಲಕ್ಕೆ ಹಾಸಲು, ರಸ್ತೆಗಳಿಗೆ, ಕಾಂಕ್ರೀಟಿಗೆ ಗ್ರಾನೈಟ್ ಕಲ್ಲನ್ನು ಉಪಯೋಗಿಸುವರು.

**ಬೆಸಾಲ್ಟ್ (Basalt)**: ಬೆಸಾಲ್ಟ್ ಒಂದು ಅತಿ ಗಡುಸಾದ ಕಪ್ಪು ಶಿಲೆಯಾಗಿದೆ. ಅಗ್ನಿ ಪರ್ವತಗಳಿಂದ ಹೊರಸುರಿದ ಲಾವಾರಸದಿಂದಾಗಿ ಶಿಲೆಯಾಗಿದ್ದು, ಇವು ಮಲ್ಪೆಗೆ ಪಶ್ಚಿಮಕ್ಕಿರುವ ಸೇಂಟ್ ಮೇರಿ ದ್ವೀಪಗಳಲ್ಲಿ ಕಂಡುಬರುತ್ತವೆ. ಲಾವಾರಸವು ಆರುವಾಗ ಸಂಕುಚಿತಗೊಂಡು ಷಡ್ಭುಜ ಸ್ಥಂಭಗಳು ನಿರ್ಮಾಣವಾಗುವವು. ಈ ಶಿಲೆಯು ಶಿಥಿಲಗೊಂಡು ಅತಿ ಫಲವತ್ತಾದ ಕಪ್ಪು ಜೇಡಿಯನ್ನು ನೀಡುತ್ತದೆ. ಆದುದರಿಂದ ಈ ದ್ವೀಪಗಳಲ್ಲಿ ಸಮೃದ್ಧಿಯಾದ ತೆಂಗಿನ ಬೆಳೆ ಕಂಡುಬರುತ್ತದೆ. ಈ ಶಿಲೆಯನ್ನು ಕಟ್ಟಡಗಳಿಗೂ, ರಸ್ತೆಗಳಿಗೂ ಉಪಯೋಗಿಸಬಹುದು. ಇಲ್ಲಿಯ ಬೆಸಾಲ್ಟ್ ಶಿಲಾಸ್ಥಂಭ ರಚನೆಯಲ್ಲಿನ ಷಟ್ಕೋಣ ವಿನ್ಯಾಸವು ಆಕರ್ಷಕವಾಗಿದ್ದು, ಭಾರತದ ಬೇರಾವ ಭಾಗದಲ್ಲಿನ ದ್ವೀಪದಲ್ಲೂ ಈ ಬಗೆಯ ನಿಸರ್ಗ ನಿರ್ಮಿತ ಸ್ಥಂಭಗಳು ಕಂಡುಬರುವುದಿಲ್ಲ.

**ಕಬ್ಬಿಣದ ಅದಿರು**: ಇಟ್ಟಿಗೆ ಕಲ್ಲು ಸುಮಾರು ಶೇಕಡಾ ೪೫ ಅಂಶ ಕಬ್ಬಿಣವನ್ನು ಪಡೆದಿರುತ್ತವೆ. ಕೆಲವು ಕಡೆ ಇದು ಶೇ. ೫೦– ಶೇ. ೫೫ರವರೆಗೂ ಇರುತ್ತದೆ. ಇದನ್ನು ಕಬ್ಬಿಣದ ಅದಿರೆಂದು ಕರೆಯಬಹುದು. ಇದರೊಡನೆ ಮಿಶ್ರವಾಗಿರುವ ಬೆಣಚು ಮತ್ತಿತರ ಕಲ್ಮಶಗಳು ಇದನ್ನು ಅದಿರಾಗಿ ಉಪಯೋಗಿಸಲು ಅಡ್ಡಬರುತ್ತವೆ. ತೀರಪ್ರದೇಶದಲ್ಲಿ ಇಟ್ಟಿಗೆ ಕಲ್ಲು ಹೆಚ್ಚಾಗಿ ಕಂಡುಬರುತ್ತದೆ.

**ಬಾಕ್ಸೈಟ್ (Bauxite)**: ಇಟ್ಟಿಗೆ ಕಲ್ಲಿನ ಕಬ್ಬಿಣಾಂಶಕ್ಕೆ ಬದಲಾಗಿ ಕೆಲವೆಡೆಗಳಲ್ಲಿ ಅಲ್ಯೂಮಿನಿಯಂ ಅಂಶವಿದೆ. ಇದನ್ನು ಬಾಕ್ಸೈಟ್ ಎಂದು ಕರೆಯುವರು. ಇದು ಅಲ್ಯೂಮಿನಿಯಂನ ಮುಖ್ಯ ಅದುರಾಗಿದೆ. ಕುಂದಾಪುರ ತಾಲೂಕಿನ ಮುದ್ದಾಲ್‌ಪಾರೆ, ಗುಪ್ಪಿಪಾರೆ ಮತ್ತು ಬೈಂದೂರಿನ ಪಡುವಾರೆಗಳಲ್ಲಿ ಇದು ಹೇರಳವಾಗಿ ದೊರೆಯುತ್ತದೆ. ಇದರಲ್ಲಿ ಲೋಹಾಂಶವು ೪೫ ರಿಂದ ೫೦ರ ವರೆಗೆ ಇದ್ದು ಬೆಣಚು ಮತ್ತಿತರ ಕಲ್ಮಷಗಳೊಡನೆ ಮಿಶ್ರವಾಗಿದೆ. ಕಲ್ಮಷಗಳನ್ನು ಪ್ರತ್ಯೇಕಿಸಿ ಅಲ್ಯೂಮಿನಿಯಂ ಲೋಹಾಂಶವನ್ನು ಹೆಚ್ಚಿಸಿದರೆ ಅದುರನ್ನಾಗಿ ಉಪಯೋಗಿಸುವಲ್ಲಿ ಯಶಸ್ವಿಯಾಗಬಹುದು.

**ಕಪ್ಪು ಜೇಡಿ (Black Clay or Fire Clay)**: ಕಪ್ಪು ಜೇಡಿಯು ನಸುಕಪ್ಪಾಗಿದ್ದು ನೀರಿನೊಡನೆ ಬೆರೆತರೆ ನಸುಗೆಂಪು ಬಣ್ಣವನ್ನು ಪಡೆಯುವುದು. ಇದು ಕಡಿಮೆ ಪ್ರಮಾಣದ ಬೆಣಚು ಕಲ್ಮಷವನ್ನು ಪಡೆದಿರುತ್ತದೆ. ಜಿಲ್ಲೆಯ ಅನೇಕ ಕಡೆ ಗದ್ದೆ ಬಯಲಿನಲ್ಲಿಯೂ, ನೀರು ನಿಂತಿರುವ ಪ್ರದೇಶಗಳಲ್ಲಿಯೂ ಕಪ್ಪುಜೇಡಿಯು ದೊರೆಯುತ್ತದೆ. ಇದನ್ನು ಶುದ್ಧಮಾಡಿ, ಹಂಚು, ಇಟ್ಟಿಗೆಗಳನ್ನು ಮಾಡಲು ಕಾರ್ಖಾನೆಗಳಲ್ಲಿಯೂ, ಮಡಿಕೆ, ಗುಡಾಣ ಮುಂತಾದ ಉಪಕರಣಗಳನ್ನು ಮಾಡಲು ಗೃಹ ಕೈಗಾರಿಕೆಗಳಲ್ಲಿಯೂ ಉಪಯೋಗಿಸುವರು. ನಸುಗೆಂಪಿನ ಜೇಡು ಸುಟ್ಟ ನಂತರ ಪ್ರಕಾಶಮಾನವಾದ ಆಕರ್ಷಕ ಕಂದುಬಣ್ಣವನ್ನು ಪಡೆಯುವುದು. ಉಡುಪಿ ಮತ್ತು ಕುಂದಾಪುರಗಳಲ್ಲಿ ಇದು ಹೇರಳವಾಗಿ ದೊರೆಯುತ್ತದೆ.

**ಬಿಳಿ ಹೊಯಿಗೆ (ಮರಳು [White Sand]) :** ಸಮುದ್ರ ತೀರದಲ್ಲಿರುವ ಉಡುಪಿ ಜಿಲ್ಲೆಯಲ್ಲಿ ಕಡಲ ಕರೆಯಲ್ಲಿ ಸಜ್ಜಿಗೆಯಂಥ ಹೊಯಿಗೆಯ ರಾಶಿ ಕಂಡುಬರುತ್ತದೆ. ಆದರೆ ಇದು ಲವಣಾಂಶವನ್ನು ಪಡೆದಿರುವುದರಿಂದ ಸಿಮೆಂಟಿನೊಂದಿಗೆ ಬೆರಸಿ ಕಟ್ಟಡಗಳಿಗೆ ಉಪಯೋಗಿಸಲು ಆಗುವುದಿಲ್ಲ. ಸಕ್ಕರೆಯಂತೆ ಬಿಳುಪಾದ ಅತಿ ನುಣ್ಣನೆಯ ಬೆಣಚಿನ ಹೊಯಿಗೆ ತೆಂಕಗ್ರಾಮ, ಬಡಗ್ರಾಮ, ಉದ್ಯಾವರ, ಬೈಕಂಪಾಡಿ, ಹೆಜ್ಮಾಡಿ, ಕಾಪು, ಉಳಿಯಾರಗೋಳಿ ಮತ್ತು ಮೂಳೂರುಗಳಲ್ಲಿ ದೊರೆಯುತ್ತದೆ. ಇದರಲ್ಲಿ ಶೇಕಡಾ ೯೬ ಅಂಶ ಸಿಲಿಕ ಅಥವಾ ಬೆಣಚು ಇರುವುದರಿಂದ ಪಾರದರ್ಶಕ ಗಾಜು, ಸೀಸೆಗಳನ್ನು ತಯಾರಿಸಲು ಉಪಯೋಗಿಸುವರು.

**ನದಿ ಮರಳು (River Sand):** ಪಶ್ಚಿಮ ತೀರಕ್ಕೆ ಹರಿದು ಬರುವ ನದಿಗಳು ದಪ್ಪ ದೊರಗು ಹೊಯಿಗೆಯನ್ನು ಹೊತ್ತು ತರುತ್ತದೆ. ಲವಣರಹಿತವಾಗಿ ಶುದ್ಧವಾಗಿರುವುದರಿಂದ ಸಿಮೆಂಟನೊಂದಿಗೆ ಬೆರಸಿ ಕಟ್ಟಡ ಕೆಲಸಗಳಿಗೆ ಬಳಸುವರು. ಮುಲ್ಕಿ, ಸೀತಾ, ಗಂಗೊಳ್ಳಿ ಮುಂತಾದ ನದಿಗಳ ಪಾತ್ರದಿಂದ ಹೊರತೆಗೆದು ಜಿಲ್ಲೆಯ ಬೇರೆ ಬೇರೆ ಭಾಗಗಳಿಗೆ ರವಾನಿಸುವರು.

**ಚಿಪ್ಪು (Shells):** ಸಮುದ್ರ ಪ್ರಾಣಿಗಳು ಸತ್ತ ನಂತರ ಅವುಗಳ ಚಿಪ್ಪುಗಳು ಅಲೆಗಳಿಂದ ಕೊಚ್ಚಿ ಬಂದು ತೀರ ಪ್ರದೇಶದಲ್ಲಿ ಶೇಖರಿಸಲ್ಪಡುವುವು. ಇವು ಪೂರ್ಣ ಕ್ಯಾಲ್ಸಿಯಂ ಕಾರ್ಬೋನೇಟನ್ನು ಹೊಂದಿರುವುದರಿಂದ, ಸುಟ್ಟುಗೋಡೆಗಳಿಗೆ ಬಳಿಯುವ ಸುಣ್ಣವನ್ನಾಗಿಯೂ, ತಾಂಬೂಲ ಚರ್ವಣಕ್ಕೂ ಉಪಯೋಗಿಸುವರು. ಕೋಳಿ ಸಾಕಣೆ, ಕ್ರಿಮಿನಾಶಕ ತಯಾರಿಕೆಯಲ್ಲೂ ಬಳಸುವರು. ಚಿಪ್ಪುಗಳೊಡನೆ ದೊರೆಯುವ 'ಸಮುದ್ರದ ನೊರೆ'ಯನ್ನು ಗಾಜು ಮತ್ತು ಕನ್ನಡಿಗಳನ್ನು ಶುದ್ಧಮಾಡಿ ಹೊಳಪು ಬರುವಂತೆ ಮಾಡಲು ಉಪಯೋಗಿಸುವರು.

**ಸಸ್ಯ ಸಂಪತ್ತು**

ಕರ್ನಾಟಕವೆಂದರೆ ಹಸಿರು ತುಂಬಿತುಳುಕುವ ನಾಡು ಎಂದೇ ಜನ ತಿಳಿದಿದ್ದ ಕಾಲ ನೆನಪಿನಿಂದ ಇನ್ನೂ ಮಾಸಿಲ್ಲ. ಇಲ್ಲಿಯ ವೈವಿಧ್ಯಮಯ ನೆಲದ ಫಲವತ್ತಾದ ಮಣ್ಣು, ಆಹ್ಲಾದಕರ ಹವಾಗುಣ, ಕಣ್ಸೆಳೆಯುವ ವೈವಿಧ್ಯಮಯ ಸಸ್ಯಾವರಣ ಹೀಗೆ ಒಂದೊಂದೂ ಇಲ್ಲಿಯ ಮನುಷ್ಯ, ಪ್ರಾಣಿ ಹಾಗೂ ಒಟ್ಟು ಪರಿಸರದ ಪುರೋಭಿವೃದ್ಧಿಗಾಗಿಯೇ ರೂಪುಗೊಂಡಿವೆ ಎಂಬುದನ್ನು ಯಾರೂ ಅಲ್ಲಗಳೆಯುತ್ತಿರಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಇಲ್ಲಿನ ಸಸ್ಯ ಸಮೂಹದ ರೂಪುರೇಷೆ ಬಹಳಷ್ಟು ಬದಲಾಗಿದೆ. ಅಲ್ಲಲ್ಲಿ ಹಸಿರಿನ ಪಟ್ಟಿ ಮಾತ್ರ ಉಳಿದಿದೆ. ಕೆಲವೆಡೆ ಖನಿಜ ಉತ್ಪಾದನೆಗಾಗಿ ತೋಡಿದ ಗಣಿಗಳಿಂದ ನೆಲ ಘಾಸಿಗೊಂಡು ವಿಕಾರವಾಗಿದೆ. ಇಂಥ ವಿಕಲ್ಪಗಳಿಂದಾಗಿ ನಮ್ಮ ಜೀವನಮಟ್ಟ ದುಸ್ಥಿತಿಗಿಳಿಯಬಹುದಾದ ಭಯ ತಲೆದೋರುತ್ತಿದೆ. ಹೀಗಾಗದಂತೆ ಎಚ್ಚರ ವಹಿಸಬೇಕಾದರೆ ನಮ್ಮ ಸಸ್ಯಾವರಣ ವಿನ್ಯಾಸ ಹೇಗಿತ್ತು, ಈಗ ಹೇಗಿದೆ ಎಂಬುದನ್ನು ಅರಿತುಕೊಳ್ಳಬೇಕಾದುದು ಆವಶ್ಯಕವಾಗಿದೆ. ಸಸ್ಯ ಸಂಪತ್ತಿನ ಮೇಲೆ ಎಂಥ ಒತ್ತಡ ಬೀಳುತ್ತಿದೆ, ಅದನ್ನು ನಿವಾರಿಸುವ ವಿಧಾನ ಹೇಗೆಂಬುದನ್ನು ನೋಡಬೇಕಾಗಿದೆ. ಒಂದು ಪ್ರದೇಶದ ಸಸ್ಯಾವರಣ ಹೇಗಿರುತ್ತದೆಂಬುದು ಅಲ್ಲಿನ ಮಳೆ ಬೀಳುವ ಪ್ರಮಾಣವನ್ನು ಅವಲಂಬಿಸಿರುತ್ತದೆ. ಮಳೆಯ ಪ್ರಮಾಣ, ಮಣ್ಣಿನ ಗುಣ ಮತ್ತು ಸಮುದ್ರ ಮಟ್ಟದಿಂದ ಭೂ ಪ್ರದೇಶದ ಎತ್ತರ ಈ ಮೂರರ ಪರಸ್ಪರ ಸಂಬಂಧವನ್ನು ತುಲನೆ ಮಾಡಿದರೆ ಅಲ್ಲಿನ ಸಸ್ಯಾಚ್ಛಾದನೆ ಹೇಗಿದೆ ಎಂಬುದನ್ನು ಕಲ್ಪಿಸಿಕೊಳ್ಳಬಹುದು. ಕರ್ನಾಟಕದ ಭೂಬಳಕೆಯ ವೈಖರಿ ಎಲ್ಲೆಲ್ಲಿ ಹೇಗಿದೆ ಎಂಬುದನ್ನು ಪರಿಶೀಲಿಸಿದಲ್ಲಿ ಅದರ ಅರಣ್ಯ ಪ್ರದೇಶ ಹೆಚ್ಚಾಗಿ ಪಶ್ಚಿಮ ಘಟ್ಟಗಳಲ್ಲಿ ಹಾಗೂ ದಕ್ಷಿಣ ಪ್ರಸ್ಥಭೂಮಿಯ ಕೆಲವು ಗುಡ್ಡಗಾಡು ಪ್ರದೇಶಗಳಲ್ಲೆ ಸೀಮಿತವಾಗಿರುವುದು ಗೊತ್ತಾಗುತ್ತದೆ. ಉಳಿದ ಭಾಗಗಳಲ್ಲಿ ಕಾಡು ವಿರಳವಾಗಿದ್ದು ಅದೂ ಹೆಚ್ಚಿನ ಭಾಗ ಮನುಷ್ಯ ನಿರ್ಮಿತವೇ ಆಗಿದೆ.

ನೈಋತ್ಯ ಮಾನ್ಸೂನಿನ ಆಘಾತವನ್ನೆಲ್ಲ ಘಟ್ಟದ ಪಶ್ಚಿಮ ಭಾಗದ ಕಡಿದಾದ ಮುಖವೇ ಎದುರಿಸುತ್ತದೆ. ತೇವಭರಿತ ಮೋಡಗಳು ಘಟ್ಟಕ್ಕೆ ಒತ್ತಿ ನಿಲ್ಲುವುದರ ಪರಿಣಾಮವಾಗಿ ಜೋರಾಗಿ ಮಳೆ ಸುರಿಯುತ್ತದೆ.

ಕರಾವಳಿಯ ಮಂಗಳೂರಿನಲ್ಲಿ ವಾರ್ಷಿಕ ಸರಾಸರಿ ೩,೦೦೦ ಮಿಲಿಮೀಟರ್ ಮಳೆಯಾಗುತ್ತದೆ. ಘಟ್ಟ ಸಮೀಪಿಸಿದಂತೆ ಮಳೆ ಹೆಚ್ಚುತ್ತಾ ಹೋಗಿ ಶೃಂಗಭಾಗದಲ್ಲಿ ಅತಿ ಹೆಚ್ಚು ಮಳೆಯಾಗುತ್ತದೆ. ಕುದುರೆಮುಖ ಬೆಟ್ಟದಲ್ಲಿ ೭,೦೦೦ ಮಿ.ಮೀ. ನಷ್ಟು ಮಳೆ ಬಿದ್ದರೆ, ಪರ್ವತ ಶಿಖರಗಳ ಒಂದು ವಿಶಿಷ್ಟ ವಿನ್ಯಾಸದಿಂದಾಗಿ ಆಗುಂಬೆಯಲ್ಲಿ ಇನ್ನೂ ಹೆಚ್ಚು ಅಂದರೆ ವಾರ್ಷಿಕ ಸರಾಸರಿ ೭,೪೬೦ ಮಿ.ಮೀ. ಮಳೆ ಸುರಿಯುತ್ತದೆ. ಘಟ್ಟಗಳ ನಂತರ ಪೂರ್ವಭಾಗದ ಪ್ರದೇಶಕ್ಕೆ ಚಲಿಸಿದಂತೆಲ್ಲ ಮಳೆ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ. ಘಟ್ಟದ ನೆತ್ತಿಯಿಂದ ಕೇವಲ ೧೦ ಕಿ.ಮೀ. ದೂರದ ಸಕಲೇಶಪುರದಲ್ಲಿ ಸರಾಸರಿ ೨,೨೧೦ ಮಿ.ಮೀ. ಮಳೆಯಾದರೆ, ಅದರ ಪೂರ್ವಕ್ಕೆ ೩೨ ಕಿ.ಮೀ. ದೂರದ ಹಾಸನದಲ್ಲಿ ಕೇವಲ ೮೭೫ ಮೀ.ಮೀ. ಮಳೆ ಸುರಿಯುತ್ತದೆ. ಕರ್ನಾಟಕದ ಈ ಭಾಗದ ಹವಾಗುಣ ಬದಲಾವಣೆ ಹಾಗೂ ಜೀವಾವರಣ ಬಗ್ಗೆ ಕೆಲ ವಿಶಿಷ್ಟ ಸಂಗತಿಗಳು ಈಗಾಗಲೇ ಬೆಳಕಿಗೆ ಬಂದಿವೆ. ಸಮುದ್ರ ಮಟ್ಟದಿಂದ ೧,೮೦೦ ಮೀಟರ್‌ವರೆಗಿನ ಭೂಮಿಯ ಏರುಪೇರಿನಿಂದಾಗಿಯೂ ಸಸ್ಯಾವರಣದಲ್ಲಿ ವೈವಿಧ್ಯ ಉಂಟಾಗಿದೆ. ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪಶ್ಚಿಮ ಘಟ್ಟಗಳ ಮತ್ತು ಕರಾವಳಿ ಪ್ರದೇಶಗಳಲ್ಲಿ ಕಂಡುಬರುವ ಅರಣ್ಯ ಪ್ರಕಾರಗಳ ವಿವರಗಳನ್ನು ಈ ಮುಂದೆ ನೀಡಲಾಗಿದೆ.

## ೧. ಉಷ್ಣವಲಯದ ಸದಾ ಹಸಿರಿನ ಸಸ್ಯಾವರಣ

ಘಟ್ಟದ ಕೆಳಭಾಗದಲ್ಲಿರುವ ಕಣಿವೆ ಹಾಗೂ ಇಳಿಜಾರು ಪ್ರದೇಶಗಳಲ್ಲಿ ಸದಾ ಹಸಿರಿನ ಸಸ್ಯಾವರಣದ ಉತ್ತಮ ಉದಾಹರಣೆಗಳನ್ನು ನೋಡಬಹುದು. ಇದಕ್ಕೆ ಪಶ್ಚಿಮ ಕರಾವಳಿಯ ಉಷ್ಣ ವಲಯದ ಅರಣ್ಯವೆನ್ನುತ್ತಾರೆ. ನೈಋತ್ಯ ಮಾನ್ಸೂನ್‌ನಿಂದಾಗಿ ಭಾರೀ ಮಳೆ ಬೀಳುವುದರಿಂದ ಈ ಪ್ರದೇಶಗಳಲ್ಲಿ ಛಾವಣಿ ಮರಗಳ ಸಾಂದ್ರತೆಯಿಂದಾಗಿ ಸಸ್ಯ ಶೃಂಗ (Climax vegetation) ವನ್ನು ನೋಡಬಹುದು. ನೆಲದಿಂದ ೩೦ ಮೀಟರ್ ಎತ್ತರದವರೆಗೂ ಕವಲೊಡೆಯದೇ, ಮೇಲ್ಭಾಗದಲ್ಲಿ ವಿಶಾಲವಾಗಿ ಹರಡಿಕೊಂಡ ಬೃಹತ್ ವೃಕ್ಷಗಳಿಗೆ ಇಲ್ಲಿ ಕೊರತೆಯಿಲ್ಲ. ಬೊಡ್ಡೆಗಳಿರುವ ಈ ಮರಗಳ ಶಿರಭಾಗ ಅಕ್ಕಪಕ್ಕದ ಮರಗಳ ಅಗಲವಾದ ಕೊಂಬೆಗಳೊಂದಿಗೆ ಹೆಣೆದುಕೊಂಡು ದಟ್ಟ ಛಾವಣಿಯಾಗಿದೆ. ಜೂನ್ ತಿಂಗಳಿನಿಂದ ಸೆಪ್ಟೆಂಬರ್‌ವರೆಗೆ ಬೀಸುವ ಬಿರುಗಾಳಿ ಹಾಗೂ ಸುರಿಯುವ ಜಡಿಮಳೆಯನ್ನು ಈ ಛಾವಣಿ ತಡೆಹಿಡಿಯುತ್ತದೆ. ವರ್ಷದ ಉಳಿದ ಋತುಗಳಲ್ಲಿ ಈ ಹಸಿರು ಛಾವಣಿ ಬಿಸಿಲಿಗೆ ಮೈಯೊಡ್ಡಿ ನಿಂತು ಸೂರ್ಯ ಕಿರಣಗಳ ಅಲ್ಪ ಭಾಗವನ್ನು ಮಾತ್ರ ನೆಲಸಸ್ಯಗಳಿಗೆ ಹರಿಬಿಡುತ್ತದೆ. ಸಾಪೇಕ್ಷ ಆರ್ದ್ರತೆ (ತೇವಾಂಶ) ಹಾಗೂ ಹಿತಮಿತ ಪ್ರಮಾಣದ ಸೂರ್ಯ ರಶ್ಮಿಯಿಂದಾಗಿ ಅರಣ್ಯದಲ್ಲಿ ಸಸ್ಯಗಳ ಅಂತಸ್ತು ನಿರ್ಮಾಣವಾಗಿರುವುದನ್ನು ನೋಡಬಹುದು. ನೆಲಕ್ಕೆ ಹೊಂದಿಕೊಂಡೇ ಜೀವಿಸುವ ಸಸ್ಯಗಳ ಮೊದಲ ಅಂತಸ್ತು, ತುಸು ಎತ್ತರದ ಗಿಡಮರಗಳ ಮಧ್ಯದ ಅಂತಸ್ತು ಹಾಗೂ ಗಗನಚುಂಬಿ ವೃಕ್ಷಗಳ ಅಂತಿಮ ಅಂತಸ್ತು– ಹೀಗೆ ಒಂದೊಂದು ಅಂತಸ್ತಿನ ಸಸ್ಯಗಳೂ ಬಹುಕಾಲದ ವಿಕಾಸ ನಿಯಮಗಳಿಗೆ ಬದ್ಧವಾಗಿ ದ್ಯುತಿ ಸಂಶ್ಲೇಷಣೆಯಂಥ ಜೈವಿಕ ಚಟುವಟಿಕೆಗಳನ್ನು ಈ ಪರಿಸರದಲ್ಲಿ ನಡೆಸುತ್ತಿರುತ್ತವೆ.

ಇಂಥ ಛಾವಣಿ ಮರಗಳಲ್ಲೂ ವೈವಿಧ್ಯವಿದೆ. ಉತ್ತರದಿಂದ ದಕ್ಷಿಣಕ್ಕೆ ಬಂದಂತೆ ವೃಕ್ಷ ಸಂಕುಲ ಬದಲಾಗುವುದು. ಆಯಾ ಭೂಮಿಯ ಮಣ್ಣಿನ ಗುಣ, ಎತ್ತರ ಹಾಗೂ ಇಳಿಜಾರಿನ ಪ್ರಮಾಣವು ವೃಕ್ಷ ಸಂಕುಲ ಬದಲಾಗುವುದಕ್ಕೆ ಕಾರಣಗಳಾಗಿವೆ. ಸಮುದ್ರಮಟ್ಟದಿಂದ ೬೦೦ ಮೀ ಎತ್ತರದವರೆಗೆ (Dipterocarpus-Kingiodendron-Vateria) ಧೂಮವೃಕ್ಷ–ಎಣ್ಣೆಮರ, ಧೂಪದಮರ (Dipterocarpus-Mesua-Palaquium) ಮತ್ತು ಧೂಪವೃಕ್ಷ–ನಾಗಸಂಪಿಗೆ, ಪಂಚೋಟಿಮರ ಸಸ್ಯ ಸಮೂಹಗಳನ್ನು ಗುರುತಿಸಬಹುದು. ೬೦೦ ಮೀಟರ್‌ಗಿಂತ ಮೇಲೆ ಹಾಗೂ ೧,೨೦೦ ಮೀಟರ್‌ವರೆಗೆ ಬೇರೆ ಸಸ್ಯ ಸಮೂಹವಿದೆ.

ಗುಡ್ಡಗಳ ಇಳಿಜಾರಿನಲ್ಲಿ ಸಸ್ಯಗಳ ಕೆಳಸ್ತರಗಳು ಸಮೃದ್ಧವಾಗಿದೆ. ಅಲ್ಲಿ Scleropyrum pentandrum (ಬೆಂಡುಗ), Syzygium laetum (ನೇರಳೆ), Harpullia arborea ಮುಂತಾದವುಗಳಿರುತ್ತವೆ. ಒಂಟಿ ಬೀಜದ Caryota urens ಮತ್ತು ಬಹುಬೀಜಗಳ Arenga wightii (ದಡ್ಯಾಲ) ಹಾಗೂ Pinanga dicksonii (ಕಾಡು ಅಡಿಕೆ ಅಥವಾ ಜಂಡರಿಗೆ) ಮುಂತಾದ ತಾಳೆವೃಕ್ಷಗಳು ಕಾಡಿನಲ್ಲಿ ಸಾಮಾನ್ಯವಾಗಿ ನೋಡಸಿಗುತ್ತವೆ. ಇನ್ನೊಂದು ಅಂತಸ್ತಿನಲ್ಲಿ Sciophytic ಕಂಟಿಗಳು ಬೆಳೆದಿರುತ್ತವೆ. ಇನ್ನು ಹಲವಾರು ಬಗೆಯ ಸಸ್ಯಗಳನ್ನು ಇಲ್ಲಿ ಕಾಣಬಹುದು. ಭಾರೀ ಮರಗಳನ್ನೇ ಆಧರಿಸಿಕೊಂಡ ದಪ್ಪಕಾಂಡದ ಮರಬಳ್ಳಿಗಳು ಸುತ್ತಿಸುತ್ತಿ ಸೂರ್ಯಕಿರಣ ಅರಸುತ್ತ ಮೇಲೇರಿ ಛಾವಣಿ ತಲುಪಿ ಹರಡಿಕೊಂಡಿರುತ್ತವೆ. ಅಂತರ್ಜಲದ ಸಹಾಯವಿಲ್ಲದೇ, ಮಣ್ಣಿನ ಸ್ಪರ್ಶವೂ ಇಲ್ಲದೇ ಮರಗಳ ಕಾಂಡದ ಮೇಲೇಯೇ ಜೀವ ಸಾಗಿಸುವ ಅಂತರ್‌ಸಸ್ಯಗಳು ಇಲ್ಲಿವೆ. ಈ ಗುಂಪಿಗೆ ಸೇರಿದ ಆರ್ಕಿಡ್‌ಗಳು ತಮ್ಮ ಅಂಗವ್ಯೂಹದ ವಿಶೇಷ ರಚನೆಯಿಂದಾಗಿ ವಾತಾವರಣದ ತೇವಾಂಶವನ್ನೇ ಹೀರಿಕೊಂಡು ದೀರ್ಘಕಾಲದವರೆಗೆ ಉಳಿಸಿಟ್ಟುಕೊಂಡು ಬಳಸುತ್ತವೆ. ವಿಶಿಷ್ಟ ವರ್ಣವಿನ್ಯಾಸಗಳ ಹೂಗಳಿಂದಾಗಿ ಬೀಜ ಪ್ರಸಾರಣ ಮಾಡಿಕೊಳ್ಳುತ್ತವೆ. ಇವುಗಳ ಸೂಕ್ಷ್ಮ ಬೀಜಕಣಗಳು ಗಾಳಿಯಲ್ಲಿ ತೇಲುತ್ತ ಹೋಗಿ ಇನ್ನಾವುದೋ ವೃಕ್ಷಕ್ಕೆ ಅಂಟಿಕೊಂಡು ಬೀಜಾಂಕುರದಲ್ಲಿ ಮನೆ ಮಾಡಿಕೊಂಡಿರುವ ಬೂಷ್ಟುಗಳ ಸಹಾಯದಿಂದ ಪೋಷಕಾಂಶ ಪಡೆದು ಬೇರೂರುತ್ತವೆ.

ಇಂತಹ ಕಾಡಿನಲ್ಲಿ ನೆಲಕ್ಕೆ ಹಾಸಿಬೀಳುವ ತರಗೆಲೆ ಹಾಗೂ ಒಣಕಡ್ಡಿಗಳನ್ನು ಅನೇಕ ಬಗೆಯ ಸೂಕ್ಷ್ಮ, ಅತಿಸೂಕ್ಷ್ಮ ಜೀವಿಗಳು ವಿಭಜಿಸಿ ಕೊಳೆಸುತ್ತವೆ. ಹೀಗೆ ಸರಳ ಸಂಯುಕ್ತಗಳಾಗಿ ಬೇರ್ಪಟ್ಟ ಸೇಂದ್ರಿಯ ಕಣಗಳೇ ವರ್ಷಾನುಗಟ್ಟಲೆ ಶೇಖರಣೆಗೊಂಡು ಕಾಡಿನ ನೆಲಕ್ಕೆ ಉತ್ತಮ ಗೊಬ್ಬರವಾಗುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಮಣ್ಣಿನ ಪದರ ಅಷ್ಟೇನೂ ದಪ್ಪವಾಗಿಲ್ಲ. ನೆಲದಾಳದ ಬಂಡೆಗಲ್ಲುಗಳ ಮೂಲಕ ಒಸರುವ ನೀರಿನಲ್ಲೂ ಪೋಷಕಾಂಶಗಳ ಕೊರತೆ ಇದೆಯೆಂಬುದಾಗಿ ತಿಳಿದುಬಂದಿದೆ. ಹಾಗಾಗಿ ಗಿಡಮರಗಳಿಂದ ಉದುರುವ ತರಗೆಲೆ ಕಸಕಡ್ಡಿಗಳೇ ಗೊಬ್ಬರವಾಗಿ ಪುನರ್ವಿತರಣೆಯಾಗುವ ನೈಸರ್ಗಿಕ ವಿಧಾನ ಇಲ್ಲಿಯ ಅರಣ್ಯದ ಮೂಲಾಧಾರವಾಗಿದೆ. ಎಲೆಗೊಬ್ಬರದ ಈ ಪದರ ಮಳೆ ನೀರನ್ನು ಹಿಡಿದಿಟ್ಟುಕೊಳ್ಳಲು ಸಹಾಯ ಮಾಡುತ್ತದೆ. ಮೇಲಿನಿಂದ ಬಿದ್ದ ನೀರು ರಭಸದಲ್ಲಿ ಹರಿದುಹೋಗದಂತೆ ತಡೆಹಿಡಿದು ತೇವಾಂಶವನ್ನೆಲ್ಲ ಹೀರಿಕೊಂಡು ನಿಧಾನವಾಗಿ ವರ್ಷವಿಡೀ ಹಳ್ಳ ತೊರೆಗಳಲ್ಲಿ ಹರಿಯಬಿಡುತ್ತದೆ. ಪಶ್ಚಿಮ ಘಟ್ಟಗಳ ಸಸ್ಯಾವರಣ ಜೀವಜಾಲದ ಮೇಲೆ ತುಂಬ ಗಾಢವಾದ ಪರಿಣಾಮ ಬೀರಿದೆ. ಸೂರ್ಯಕಿರಣವನ್ನು ಯಶಸ್ವಿಯಾಗಿ ಹೀರಿಕೊಳ್ಳುವ ಇಲ್ಲಿನ ವೈವಿಧ್ಯಮಯ ಸಸ್ಯ ಜೀವಕೋಟಿಯೆಲ್ಲ ನೀರನ್ನು ಮತ್ತು ಇಂಗಾಲಾಮ್ಲವನ್ನು ಪರಿವರ್ತಿಸಿ ಸಕಲ ಜೀವಿಗಳಿಗೆ ಮೂಲಾಧಾರವಾಗಿರುವ ಸೇಂದ್ರಿಯ ಸಂಯುಕ್ತವನ್ನಾಗಿ ಮಾರ್ಪಡಿಸುತ್ತವೆ. ಪ್ರಾಣಿಪ್ರಪಂಚಕ್ಕೆ ಮಾರಕವಾಗಿರುವ ಇಂಗಾಲಾಮ್ಲವನ್ನು ಈ ಸಸ್ಯಗಳು ಹೀರಿಕೊಂಡು ಜೀವಚೇತನ ಮೂಲವಾದ ಆಮ್ಲಜನಕವನ್ನು ವಾತಾವರಣಕ್ಕೆ ಹರಿಬಿಡುತ್ತವೆ. ಅಂತಸ್ತುಗಳುಳ್ಳ ಈ ಸಮೃದ್ಧ ಸಸ್ಯರಾಶಿ ಸುಲಭವಾಗಿ ಅಪಾಯಕ್ಕೆ ತುತ್ತಾಗಲೂಬಹುದು. ಸಸ್ಯ ಛಾವಣಿಯ ಒಂದು ಭಾಗ ಭಗ್ನವಾದರೆ ಆ ಸ್ಥಳವನ್ನು ಆಕ್ರಮಿಸಲೆಂದು ಹಲವಾರು ಚಿಕ್ಕಪುಟ್ಟ ಗಿಡಗಳು ಪೈಪೋಟಿಯಲ್ಲಿ ಬೆಳೆಯುತ್ತ ಹೋಗಿ ಕಾಲಕ್ರಮೇಣ ಛಾವಣಿ ಮತ್ತೆ ಮುಚ್ಚಿಕೊಳ್ಳಬಹುದು. ಆದರೆ ಭಗ್ನಗೊಂಡ ಭಾಗ ಸಾಕಷ್ಟು ವಿಶಾಲವಾಗಿದ್ದರೆ ಇಂಥ ಪುನರ್ ನಿರ್ಮಾಣ ಯಶಸ್ವಿಯಾಗುವ ಬದಲು ಅಂತಸ್ತುಗಳ ರಚನೆಯೂ ಏರುಪೇರಾಗಿ ಅನೇಕ ಸಸ್ಯಜಾತಿಗಳು ಕಣ್ಮರೆಯಾಗಬಹುದು. ಛಾವಣಿಮರಗಳ ನಿರ್ನಾಮವಾದರೆ ಜಡಿಮಳೆಯ ಹೊಡೆತ ನೇರವಾಗಿ ನೆಲಕ್ಕೆ ಬೀಳುವುದರಿಂದ ಮಣ್ಣಿನ ಸವಕಳಿ ಹೆಚ್ಚಿ ಭೂಮಿಯಲ್ಲಿ ಕೊರಕಲು ಬಿದ್ದು ಒಳಪದರದ ಮಣ್ಣೆಲ್ಲ ಬಿಚ್ಚಿಕೊಳ್ಳುತ್ತದೆ. ಮಣ್ಣು ಗಟ್ಟಿಯಾಗಿ ಜಂಬು ಶಿಲೆಗಳಂತಾಗುತ್ತದೆ. ಬಿದ್ದ ನೀರೆಲ್ಲ ನೆಲದೊಳಕ್ಕೆ ಇಂಗದೇ ಜಾರಿಹೋಗಿ ಕಾಡಿನ ಅಧಃಪತನವಾಗುತ್ತದೆ. ಶತಮಾನಗಳಿಂದ ನಿಧಾನವಾಗಿ ಶೇಖರವಾಗಿದ್ದ ತರಗೆಲೆ ಗೊಬ್ಬರವೆಲ್ಲ ತೊಳೆದುಹೋಗುತ್ತದೆ. ದಿಡೀರ್ ಹರಿದುಬರುವ ರಭಸದ ನೀರಿನಿಂದಾಗಿ ಹಳ್ಳಗಳೆಲ್ಲ ಉಕ್ಕಿ ಹರಿಯುವುದಲ್ಲದೆ ಕೊಚ್ಚಿ ಬಂದ ಮಣ್ಣಿನಿಂದಾಗಿ ಘಟ್ಟಗಳ ಎರಡೂ ಮಗ್ಗುಲಲ್ಲಿ ಹರಿಯುವ ನದಿಗಳಲ್ಲಿ ಹೂಳು ತುಂಬುತ್ತದೆ.

ಅರಣ್ಯವಿಲ್ಲದ ಭೂಮಿಯಲ್ಲಿ ನೀರು ಇಂಗಲಾರದೆ ಅಂತರ್ಜಲ ಸಂಗ್ರಹ ಕಡಿಮೆಯಾಗಿ ನೀರಿನ ಒರತೆಗಳು ಕಣ್ಮರೆಯಾಗುತ್ತವೆ. ಬೇಸಿಗೆಯಲ್ಲಿ ಹಳ್ಳಕೊಳ್ಳಗಳು ಬತ್ತಿ ಹೋಗುತ್ತವೆ. ಘಟ್ಟಗಳಿಂದ ನಿರಂತರವಾಗಿ ನೀರು ಹರಿದು ಬಾರದಿದ್ದರೆ ಕರಾವಳಿಯ ಅನೇಕ ನದಿಗಳಿಗೆ ಉಪ್ಪು ನೀರು ನುಗ್ಗಿ ಬಂದು ನೀರು ನಿರುಪಯುಕ್ತವಾಗುತ್ತದೆ.

## ೨. ಘಟ್ಟದ ಮೇಲಿನ ತೇವಾಂಶಭರಿತ ಎಲೆ ಉದುರುವ ಸಸ್ಯಾವರಣ

ಘಟ್ಟ ಪ್ರದೇಶದಿಂದ ಮೈದಾನ ಪ್ರದೇಶದೆಡೆ ಚಲಿಸಿದಂತೆ ಮಳೆ ಪ್ರಮಾಣ ಕಡಿಮೆಯಾಗುತ್ತಾ ಹೋಗಿ ಇನ್ನೊಂದು ಬಗೆಯ ಶೃಂಗಮಾದರಿಯ ಸಸ್ಯಾವರಣ ಉಂಟಾದುದನ್ನು ನೋಡಬಹುದು. ಇದೇ ಘಟ್ಟದ ಮೇಲಿನ ತೇವಾಂಶಭರಿತ ಎಲೆ ಉದುರುವ ಸಸ್ಯಾವರಣ. ಎಲೆ ತುಂಬಿಕೊಂಡಿದ್ದಾಗ ಈ ಅರಣ್ಯದಲ್ಲಿ ಛಾವಣಿ ನಿಬಿಡವಾಗಿರುತ್ತದೆ. ಆದರೆ ಒಣ ತಿಂಗಳಲ್ಲಿ ತೇವಾಂಶ ಸಂರಕ್ಷಿಸಿಕೊಳ್ಳಲೆಂದು ಗಿಡಮರಗಳು ಅಲ್ಪಾವಧಿಯಲ್ಲಿ ಎಲೆ ಉದುರುಸಿಕೊಳ್ಳುತ್ತವೆ. ಎಲೆಗಳಿಲ್ಲದ ಈ ಅವಧಿಯಲ್ಲಿ ಗಿಡಮರಗಳು ಹೂ ಬಿಡುತ್ತವೆ. ಮಾರ್ಚ್, ಏಪ್ರಿಲ್‌ನ ನಡುಗಾಲದ, ಮಳೆಬೀಳುವ ತುಸು ಮೊದಲು ಹೊಸಚಿಗುರು ಮೂಡುವಾಗ ಹೂ ಉದುರಿ ಆಗಲೇ ಹೀಚು–ಕಾಯಿಗಳು ಮೊಳೆತಿರುತ್ತವೆ. ಬೆಳಗಾವಿಯಿಂದ ಕೊಡಗಿನವರೆಗೆ ವಿಸ್ತರಿಸಿರುವ ಈ ತೇವಾಂಶಭರಿತ ಎಲೆ ಉದುರುವ ಸಸ್ಯಾವರಣದಲ್ಲಿ Tectona-Dillenia-Lagerstroemia-Terminala ಸಮೂಹದ ವೃಕ್ಷಗಳಿವೆ.

ತೇವಾಂಶಭರಿತ ಎಲೆ ಉದುರುವ ಸಸ್ಯಾವರಣದಲ್ಲಿ ತರಗೆಲೆಯ ಹಾಸು ಸಾಕಷ್ಟು ದಪ್ಪವಾಗಿದ್ದು, ಮಣ್ಣು ರಕ್ಷೆಯ ಕವಚವಾಗಿದೆ. ಅಸಂಖ್ಯ ಗಿಡಗಂಟಿಗಳೂ, ಅಂತರ್ ಸಸ್ಯಗಳೂ ಮಳೆಗಾಲದ ತಿಂಗಳಲ್ಲಿ ಸುರಕ್ಷಿತವಾಗಿದ್ದು ಬೇಸಿಗೆಯ ಸುಡುಕಿರಣಗಳಿಗೆ ಎರವಾಗುತ್ತವೆ. ಇವು ಏಪ್ರಿಲ್–ಮೇ ತಿಂಗಳ ನಡುಗಾಲದ ಮಳೆಯಾದ ತಕ್ಷಣವೇ ಹೂ ಬಿಡುತ್ತವೆ. ಮಾನ್ಸೂನಿನ ಮುಂಚಿನ ಈ ಮಳೆಯಿಂದಾಗಿ ನೆಲಕ್ಕೆ ಹೊಂದಿಕೊಂಡಿರುವ ಸಸ್ಯಾಚ್ಛಾದನೆಯಲ್ಲಿ ಅನೇಕ ಬಗೆಯ ಚಟುವಟಿಕೆಗಳು ಕಾಣಬರುತ್ತವೆ. ನೆಲದೊಳಕ್ಕೆ ಹುದುಗಿದ್ದ ಅನೇಕ ಬಗೆಯ ಸುಗಂಧ ಮೂಲಿಕೆಗಳು ಇದೇ ಸಮಯದಲ್ಲಿ ಚಿಗಿತೆದ್ದು ವಿವಿಧ ಬಣ್ಣಗಳಲ್ಲಿ, ಚಮತ್ಕಾರಿಕ ವಿನ್ಯಾಸಗಳಲ್ಲಿ ಹೂವರಳಿಸುತ್ತವೆ.

ಘಟ್ಟಗಳ ಪೂರ್ವದ ಅಂಚಿನುದ್ದಕ್ಕೂ ಒಂದು ಕಾಲದಲ್ಲಿ ಬಿದಿರು ಮೆಳೆಗಳು ಸಾಕಷ್ಟು ವಿಸ್ತೃತ ಪ್ರದೇಶವನ್ನು ಆಕ್ರಮಿಸಿದ್ದವು. ವಿಶೇಷವಾಗಿ *Bambusa arundinacea* ಹಾಗೂ *Dendrocalamus strictus* ಜಾತಿಯ ಬಿದಿರು ಹೇರಳವಾಗಿ ಬೆಳೆಯುತ್ತಿದ್ದವು. ಮಳೆಗಾಲ ಪ್ರಾರಂಭವಾಗುತ್ತಲೇ ಪ್ರತಿಯೊಂದು ಮಳೆಯ ಬುಡದಿಂದಲೂ ಹಲವಾರು ಕಳಲೆಗಳು ಮೊಳೆತು ಶೀಘ್ರ ಬೆಳೆಯುತ್ತವೆ. ಪ್ರತಿ ೪೦ರಿಂದ ೬೦ ವರ್ಷಗಳಿಗೊಮ್ಮೆ ಮಾತ್ರ ಇಡೀ ಬಿದಿರು ಸಂಕುಲ ಹೂ ಬಿಡುತ್ತವೆ; ಸಮೂಲಾಗ್ರ ಸಾಯುತ್ತವೆ. ಆ ನಂತರ ಮೆಳೆಗಳ ಬುಡಕ್ಕೆ ಹಾಸಿದ ಬಿದಿರು ಕಾಳುಗಳೇ ಮೊಳಕೆಯೊಡೆದು ಹೊಸ ಪೀಳಿಗೆಯ ಬಿದಿರು ಸೃಷ್ಟಿಯಾಗುತ್ತದೆ. ಬುಡಕಟ್ಟು ಜನಾಂಗದ ಕುಶಲ ಕೈಗಾರಿಕೆಗೆ ಅಲ್ಲಲ್ಲಿ ಈ ಬಿದಿರು ಸಂಪತ್ತು ಕಾಗದ ಕಾರ್ಖಾನೆಗೂ ಸಾಕಾಗುವಷ್ಟು ಸಮೃದ್ಧವಾಗಿತ್ತು. ಇತ್ತೀಚೆಗೆ ಬೊಂಬಿನ ಅಭಾವ ಎದುರಾಗಿದೆ.

## ೩. ದಕ್ಷಿಣ ಉಷ್ಣವಲಯದ ಗುಡ್ಡಗಾಡಿನ ಸಸ್ಯಾವರಣ

ಇಳಿಜಾರಿನ ಹುಲ್ಲು ಮೈದಾನಗಳೂ ಗಿಡ್ಡ ತಳಿ ಗಿಡಗಳ ಹಸಿರು ತೇಪೆಗಳೂ ಸೇರಿ ದಕ್ಷಿಣ ಉಷ್ಣವಲಯದ ಗುಡ್ಡಗಾಡಿನ ಸಸ್ಯಾವರಣ ನಿರ್ಮಿತವಾಗಿದೆ. ಉಷ್ಣವಲಯದ ಸದಾಹಸಿರಿನ ಕಾಡು ಎತ್ತರಕ್ಕನುಗುಣವಾಗಿ ಬದಲಾಗುತ್ತದೆ. ಹುಲ್ಲು ಮೈದಾನಗಳೆಂದರೆ ಅಗಣಿತ ಸಂಖ್ಯೆಯಲ್ಲಿ ಹುಟ್ಟಿ ಬದುಕಿ ಶೀಘ್ರ ಜೀವನಚಕ್ರ ಮುಗಿಸುವ ಚಿಕ್ಕಪುಟ್ಟ ಮೂಲಿಕೆ ಗಿಡಗಳೊಂದಿಗೆ ಬೆಳೆಯುವ ಹಸಿರು ಆಚ್ಛಾದನೆ. ಪ್ರತಿ ಬೇಸಿಗೆ ಬಂದಾಗಲೂ ಈ ಗಿಡಬಳ್ಳಿ ಮೂಲಿಕೆಗಳು ಸುಟ್ಟುಹೋಗಿ, ಏಪ್ರಿಲ್–ಮೇ ತಿಂಗಳ ಮಳೆಯಾದೊಡನೆ ಮತ್ತೆ ಚಿಗುರುತ್ತವೆ. ಸದಾಕಾಲ ಜೀವಿಸುವ ಹುಲ್ಲು ಗರಿಕೆಗಳು ಈಗ ಹೊಸದಾಗಿ ಮೊಳಕೆಯೊಡೆದು

ಕರಕಲು ಗುಡ್ಡ ಬೆಟ್ಟಗಳನ್ನು ಹಸಿರಾಗಿಸುತ್ತವೆ. ನೈಋತ್ಯ ಮಾನ್ಸೂನ್ ಮಳೆಗಾಲ ತೀವ್ರವಾದಂತೆ ಹುಲ್ಲುಗಳಿಂದಾವೃತವಾದ ಇಳಿಜಾರು ಪ್ರದೇಶವೆಲ್ಲಾ ಹೂಗಳಿಂದ ತುಂಬಿದ ವರ್ಣಮಯ ರತ್ನಗಂಬಳಿಯಾಗುತ್ತದೆ. ಆರ್ಕಿಡ್ ಜೆಂಟಿಯನ್ ಮತ್ತು ವಾಯೊಲೆಟ್ (ಊದು) ಪುಷ್ಪಗಳು, ಕೀಟಾಹಾರಿ ಬ್ಲಾಡರ್‌ವರ್ಟ್ ಸಸ್ಯಗಳ ಜೊತೆ ಸನ್‌ಡ್ಯೂನಂಥ ಪುಷ್ಪರಾಜಿ ಸೇರಿ ಸಮೃದ್ಧ ಹಾಗೂ ವೈವಿಧ್ಯಮಯ ಸಸ್ಯ ಸಮೂಹ ನಿರ್ಮಾಣವಾಗುತ್ತದೆ.

ಅಷ್ಟಿಷ್ಟು ದಟ್ಟವಾಗಿರುವ ಅರಣ್ಯಗಳು ಅಲ್ಲಲ್ಲಿ ತುಣುಕು ತುಣುಕಾಗಿ ಹಂಚಿಕೊಂಡಿದ್ದರೆ ಅದಕ್ಕೆ 'ಶೋಲಾ' ಅರಣ್ಯಗಳೆನ್ನುತ್ತಾರೆ. ಪರ್ವತಗಳ ತಗ್ಗಾದ ಭಾಗದಲ್ಲಿ ಬೆಳೆಯುವ ಇಂಥ ಪುಟ್ಟಕಾಡುಗಳು ಏರುತಗ್ಗುಗಳನ್ನು ಅನುಸರಿಸಿ ಬೆಳವಣಿಗೆ ಗತಿಯಲ್ಲಿ ಹೆಚ್ಚು ಕಡಿಮೆಯಾಗುತ್ತವೆ. ಗಿಡ್ಡ ತಳಿಯ ವೃಕ್ಷಗಳಿಗೆ ಪಾಚಿ, ಲೈಕೆನ್ ಮತ್ತಿತರ ಪರಾವಲಂಬಿ ಸಸ್ಯಗಳು ಅಂಟಿಕೊಂಡು ಬೆಳೆಯುತ್ತವೆ. ಬಹುತೇಕವಾಗಿ ಇಂಥ ಶೋಲಾಗಳಲ್ಲಿ *Gordonia-Schefflera-Meliosma* ಸಸ್ಯ ಸಮೂಹ ಕಂಡುಬರುತ್ತದೆ. ಇಲ್ಲಿನ ತರಗೆಲೆ ಹಾಸಿನ ಮೂಲಕ ನಿಧಾನವಾಗಿ ಸೋಸಿ ಇಂಗುವ ನೀರು ಗಿಡಮರಗಳಿಂದ ಆವೃತವಾದ ಹಳ್ಳ ತೊರೆಗಳಲ್ಲಿ ಒಸರಿ ಶುಭ್ರವಾಗಿ ಪ್ರವಹಿಸುತ್ತದೆ. *Vernonia arborea* ಎಂಬುದು Compositae ವರ್ಗಕ್ಕೆ ಸೇರಿದ್ದು ಇದು ದಕ್ಷಿಣ ಭಾರತದ ಶೋಲಾ ಅರಣ್ಯಗಳಲ್ಲಿ ಅಲ್ಲಲ್ಲಿ ಸಾಕಷ್ಟು ನಿಬಿಡವಾಗಿ ಕಾಣಸಿಗುತ್ತದೆ. ಇವಿಷ್ಟು ಪಶ್ಚಿಮ ಘಟ್ಟಗಳಲ್ಲಿ ನೋಡಬಹುದಾದ ಸಸ್ಯಾವರಣದ ವೈವಿಧ್ಯಗಳ ಸಂಕ್ಷಿಪ್ತ ವಿವರಣೆಯಾಗಿದೆ.

ಅರಣ್ಯವೆಂದರೆ ಹಣ ಸಂಪಾದನೆಯ ಸುಲಭ ಮೂಲವೆಂದೂ, ಗಿಡ ಮರಗಳೆಂದರೆ ನಾಟಾಗಳನ್ನು ಮಾತ್ರ ನೀಡುವ ಬೆಳೆಯೆಂದೂ ಪರಿಗಣಿಸಲಾಗುತ್ತಿದ್ದ ಕಾಲವೊಂದಿತ್ತು. ಜೀವಜಾಲ ಸಮತೋಲನ ಕಾರ್ಯದಲ್ಲಿ ಅರಣ್ಯಗಳ ಪಾತ್ರ ಮುಖ್ಯವೆಂದೂ, ಗಿಡಮರಗಳಿಂದಾಗಿಯೇ ಗಾಳಿ, ನೀರು, ಮಣ್ಣು ಶುದ್ಧ ಹಾಗೂ ಸಮೃದ್ಧವಾಗಿರುತ್ತದೆಂದೂ ಇತ್ತೀಚಿನ ವರ್ಷಗಳಲ್ಲಿ ವೇದ್ಯವಾಯಿತು. ಈ ತಿಳುವಳಿಕೆ ಬಂದ ಮೇಲೆ 'ಸಂಪಾದನೆಗಾಗಿ ಅರಣ್ಯ' ಎಂಬುದರ ಬದಲು 'ಸಂರಕ್ಷಣೆಗಾಗಿ ಅರಣ್ಯ' ಎಂಬ ಧೋರಣೆ ಬಲವಾಗತೊಡಗಿತು. ನಮ್ಮ ಪರಿಸರದ ಸಂರಕ್ಷಣೆಗಾಗಿ ಪಶ್ಚಿಮ ಘಟ್ಟಗಳ ಸದಾ ಹಸಿರಿನ ಅರಣ್ಯಗಳು ಹೇಗೆ ನಿರತವಾಗಿವೆ ಎಂಬುದು ಕ್ರಮೇಣ ಸ್ಪಷ್ಟವಾಗಿದೆ.

## ಕರಾವಳಿಯ ಸಸ್ಯಾವರಣ

ಒಳನಾಡಿನ ಭೂ ಪ್ರದೇಶಕ್ಕಿಂತ ಭಿನ್ನವಾದ ಪರಿಸರದಲ್ಲಿ ಬೆಳೆಯಲೆಂದೇ ಪ್ರತ್ಯೇಕವಾಗಿ ವಿಕಾಸಗೊಂಡ ಸಸ್ಯ ಸಮೂಹವು ಕರಾವಳಿಯಲ್ಲಿ ಕಂಡು ಬರುತ್ತದೆ. ಇವುಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು. **೧. ಮರಳು ದಿಬ್ಬದ ಸಸ್ಯಗಳು, ೨. ಗುಲ್ಮ ಸಸ್ಯಗಳು** ಮತ್ತು **೩. ಕಡಲ ಪಾಚಿ ಅಥವಾ ಕಡಲ ಕಳೆ**. ಇವುಗಳಲ್ಲಿ ಕಡಲ ಪಾಚಿ ಸದಾಕಾಲ ನೀರೊಳಗೇ ಮುಳುಗಿರುತ್ತದೆ. ಗುಲ್ಮ ಸಸ್ಯಗಳು ಅರೆಬರೆ ಮುಳುಗಿದ್ದು, ಉಬ್ಬರವಿಳಿತಗಳ ಪ್ರಭಾವವಿರುವ ಪ್ರದೇಶಗಳಲ್ಲೇ ಬೆಳೆಯಲು ಇಚ್ಛಿಸುತ್ತದೆ. ಮರಳು ದಿಬ್ಬದ ಸಸ್ಯಗಳು ಅತಿ ಹೆಚ್ಚು ಉಬ್ಬರ ಬಂದಾಗಲೂ ಮುಳುಗದಂಥ ಎತ್ತರದ ಮರಳು ದಿಬ್ಬಗಳ ಮೇಲೆ ಬೆಳೆಯುವ ಸಸ್ಯ ಸಮೂಹವಾಗಿವೆ.

### ೧. ಮರಳು ದಿಬ್ಬದ ಸಸ್ಯಾವರಣ

ಉದ್ದುದ್ದ ಮತ್ತು ಕಿರಿದಾದ, ಅರ್ಧ ಚಂದ್ರಾಕೃತಿ ಆಕಾರದ ಬಂದರುಗಳು (ಮುಖ್ಯವಾಗಿ ಉಬ್ಬರದ ನೀರಿನ ಅಂಚಿಗೂ, ಇಳಿತದ ನೀರಿನ ಅಂಚಿಗೂ ಇರುವ ಪ್ರದೇಶ), ಮರಳಿನ ಪಟ್ಟಿ ಮತ್ತು ದಿಬ್ಬಗಳು, ಸ್ಥಳಾಂತರಗೊಳ್ಳದ ಕಡಲಿನ ತೀರದಲ್ಲಿ ಗುಡ್ಡೆಯಾಗಿ ಅಥವಾ ಸಾಲುಗಳಲ್ಲಿ ಬಿದ್ದಿರುವ ಮರಳಿನ ರಾಶಿ, ಉಬ್ಬರ ಹರಿವಿಲ್ಲದ ನೀರಿನ ಕಡಲ ಪ್ರದೇಶವನ್ನೊಳಗೊಂಡಂತೆ ಕಡಲಿನೆಡೆ ಬಾಗಿರುವ ಬಂಡೆಯ ಕಡಿದಾದ ಮುಖವುಳ್ಳ ಪ್ರದೇಶ, ಕಲ್ಲಿನ ದಿಣ್ಣೆ, ಸಮುದ್ರದೊಳಕ್ಕೆ ಚಾಚಿ ಹೋಗಿರುವ ಕಿರಿದಾದ ಭೂಭಾಗ /ನೆಲಚಾಚು, ಮರಳು ದಿಬ್ಬದಿಂದ ಅಡಚಣೆಯಾದ ಪ್ರದೇಶ ಮತ್ತು ಜಂಬಿಟ್ಟಿಗೆ/ಮೂರ್ಕಲ್ಲಿನ ಕಡಲಂಚಿಗೆ

ತಾಗಿರುವ ಮುಖ್ಯ ಪ್ರದೇಶಗಳನ್ನು ಮರಳದಿಬ್ಬರ ಸಸ್ಯಾವರಣದ ಪ್ರದೇಶದಲ್ಲಿ ಕಾಣಬಹುದು. ಉಬ್ಬರವಿಳಿತಗಳ ಮಧ್ಯಂತರ ಪಟ್ಟಿ ಹಾಗೂ ಕಿರಿತೆರೆ ಕ್ಷೇತ್ರದಲ್ಲಿನ ಮರಳು, ಗಾಳಿ ಬೀಸಿದಾಗೆಲ್ಲ ಹಾರಿ ಬಂದು ಮರಳು ದಿಬ್ಬಗಳಾಗುತ್ತವೆ.

ಮರಳು ದಿಬ್ಬಗಳಲ್ಲಿ ಮೂರು ವಿಧಗಳಿವೆ. ಅವುಗಳೆಂದರೆ ೧. ಸಮುದ್ರದಂಚಿನ ದಿಬ್ಬಗಳು, ೨. ಮಧ್ಯದಂಡೆಯ ದಿಬ್ಬಗಳು ಹಾಗೂ ೩. ಹಿಂಭಾಗದ ದಿಬ್ಬಗಳು. ಸಮುದ್ರದಂಚಿನ ದಿಬ್ಬಗಳಿಗೆ ಗಾಳಿಯ ಹೊಡೆತ ಹೆಚ್ಚಾಗಿದ್ದು, ಅಲ್ಲಿ ಜೊಂಡೆಹುಲ್ಲು, ಬಳ್ಳಿ, ಮೂಲಿಕೆ ಹಾಗೂ ಜಂಬು ಸಸ್ಯಗಳು ಬೆಳೆಯುತ್ತವೆ. ಮಧ್ಯದಂಡೆಯ ದಿಬ್ಬಗಳ ಮೇಲೆ ಪ್ರಮುಖವಾಗಿ ಎತ್ತರ ಬೆಳೆಯುವ, ಆಳ ಬೇರುಳ್ಳ ಕುರುಚಲು ಗಿಡಗಳು ಕಂಡುಬರುತ್ತವೆ. ಅಂತಿಮವಾಗಿ ಹಿಂಭಾಗದ ದಿಬ್ಬಗಳಲ್ಲಿ ಗಿಡಮರಗಳು ಬೆಳೆದಿರುತ್ತವೆ. ಹೀಗೆ ವರ್ಗೀಕೃತ ಸಸ್ಯಾವರಣದಿಂದಾಗಿ ಒಂದು ಬಗೆಯ ನೈಸರ್ಗಿಕ ಇಳಿಜಾರು ನಿರ್ಮಿತವಾಗಿರುವುದರಿಂದ ಗಾಳಿಯ ಭಾರೀ ಹೊಡೆತಕ್ಕೆ ತಡೆಯುಂಟಾಗುವುದಲ್ಲದೇ ಮರಳು ದಿಬ್ಬಗಳ ಸವಕಳಿ ಆದಷ್ಟೂ ಕಡಿಮೆಯಾಗುತ್ತದೆ. ಸಮುದ್ರದಂಚಿನ ಪ್ರಧಾನ ವಿಭಾಗದಲ್ಲಿ *Ipomoea pes-caprae* (ಆಡುಬಳ್ಳಿ), *Asparagus dumosus, Spinifex littoreus,* (ರಾವಣನ ಮೀಸೆ ಹುಲ್ಲು), *Leucas aspera* (ತುಂಬೆ) ಮತ್ತು *Eclipta alba* (ಗರುಗದ ಗಿಡ) ಕಾಣಸಿಗುತ್ತವೆ. ಕೆಲವು ಕಡೆ *Ipomoea pes-caprae* ಅಥವಾ *Spinifex littoreus* ದಟ್ಟ ಬನಗಳಂತೆ ಬೆಳೆಯುತ್ತವೆ. ಈ ಪ್ರಭೇದಗಳುಳ್ಳ ಪಟ್ಟಿಯ ನಂತರ Vitex negundo (ಬಿಳಿ ಲಕ್ಕಿ), *Pandanus Sp* (ತಾಳೆ), *Duranta repens, Anacardium occidentale* (ಗೇರು), *Cocos nucifera* (ತೆಂಗು) ಮುಂತಾದವುಗಳನ್ನು ಹಿಂಭಾಗದ ದಿಬ್ಬಗಳಲ್ಲಿ ಕಾಣಬಹುದು. ಈ ದಿಬ್ಬಗಳ ಮೇಲೆ ದೊಡ್ಡ ಪ್ರಮಾಣದಲ್ಲಿ ಸರ್ವೆಗಿಡ *Casuarina equisehfolia* (ಹೊಳೆ ಚುಕ್ಕಿ) ಬೆಳೆಸಿರುವುದನ್ನು ಕೆಲವು ತೀರಗಳಲ್ಲಿ ನೋಡ ಬಹುದಾಗಿದೆ. ದಿಬ್ಬದ ಸಸ್ಯಗಳು ಮರಳು ಕಣಗಳನ್ನು ಬಿಗಿಯಾಗಿ ಹಿಡಿದುಕೊಳ್ಳಲು ಅನುಕೂಲವಾಗುವಂಥ ಜಡೆರೂಪದ ಬೇರುಗಳನ್ನು ಪಡೆದಿರುತ್ತವೆ. ಸಸ್ಯದ ಕಾಂಡ ಹಾಗೂ ಟಿಸಿಲುಗಳು ಮರಳಿನ ಸಂಚಾರವನ್ನು ತಡೆಹಿಡಿಯುತ್ತವೆ. ಬೇರುಗಳು ಸಸ್ಯದ ಜೈವಿಕ ಕ್ರಿಯೆ ಮಾಡುವುದರೊಂದಿಗೆ ಆಧಾರವನ್ನೊದಗಿಸುವ ಯಾಂತ್ರಿಕ ಕಾರ್ಯವನ್ನೂ ಮಾಡುತ್ತವೆ. ಹೀಗಾಗಿ ದಿಬ್ಬದ ಮೇಲೆ ಸಸ್ಯಗಳಿದ್ದಲ್ಲಿ ಮರಳಿನ ಚಲನೆ ಕಮ್ಮಿಯಾಗಿ ದಿಬ್ಬದ ಸವಕಳಿಯಾಗದಂತೆ ರಕ್ಷಣೆ ಸಿಗುತ್ತದೆ. ಇವೇ ಸಸ್ಯಗಳು ನೀರಿನ ಅಭಾವವಿರುವ ಅರೆಶುಷ್ಕ ಪ್ರದೇಶದಲ್ಲೂ ಬದುಕುವ ಸಾಮರ್ಥ್ಯ ಪಡೆದಿವೆ.

ಮಳೆ ಅತಿ ಹೆಚ್ಚಾದರೆ ಮಣ್ಣಿನ ಸವಕಳಿಯುಂಟಾಗಿ ಸಸ್ಯಾವರಣ ನಿರ್ನಾಮವಾಗುತ್ತದೆ. ಮರಳು ದಿಬ್ಬಗಳ ಸೃಷ್ಟಿ ಹಾಗೂ ಚಲನವಲನಗಳಲ್ಲಿ ಗಾಳಿಯ ಪಾತ್ರವೂ ತುಂಬ ಮಹತ್ವದ್ದು. ಗಾಳಿ ತುಂಬ ಜೋರಾಗಿ ಬೀಸಿದರೆ ಬೋಳು ದಿಬ್ಬಗಳು ಧ್ವಂಸವಾಗುತ್ತವೆ. ಕಡಲ ತೀರದ ಅನೇಕ ಕಡೆಗಳಲ್ಲಿ ದಂಡೆ ಸವಕಳಿಗೊಂಡಿರುವುದು ಕಂಡುಬರುತ್ತದೆ. ನಿರ್ಬಂಧಿತ ಪ್ರದೇಶದಲ್ಲೂ ಮರಳನ್ನು ಸಾಗಿಸುವುದು ಇಂಥ ಸವಕಳಿಯಾಗಲು ಒಂದು ಕಾರಣವಾಗಿದೆ. ಸಮುದ್ರ ತೀರದ ಮರಳನ್ನು ಮೀತಿ ಮೀರಿದ ಪ್ರಮಾಣದಲ್ಲಿ ಸಾಗಿಸುವುದು, ಅಲ್ಲಿ ಬೆಳೆದ ಸಸ್ಯಗಳನ್ನು ಬೇಕಾಬಿಟ್ಟಿ ಕಡಿಯುವುದು ಇವೇ ಮುಂತಾದ ಕಾರಣಗಳಿಂದಾಗಿ ಕರಾವಳಿ ತೀರಗಳ ಸಮತೋಲನ ಹದಗೆಡುತ್ತದೆ. ಆದ ಕಾರಣ ಮರಳು ದಿಬ್ಬಗಳ ಮೇಲಿನ ಸಸ್ಯಾವರಣ ಹಾಗೂ ಮರಳು ಕವಚವನ್ನು ರಕ್ಷಿಸುಕೊಳ್ಳುವತ್ತ ಕಟ್ಟುನಿಟ್ಟಿನ ಹಾಗೂ ಪರಿಣಾಮಕಾರಿಯಾದ ನಿರ್ವಹಣಾ ನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸಬೇಕಿದೆ.

**ಗುಲ್ಮ ಸಸ್ಯಾವರಣ** (Mangrove)

ಉಷ್ಣವಲಯದ ಕಡಲ ತೀರಗಳಲ್ಲಿ ಉಬ್ಬರವಿಳಿತಗಳ ಪಟ್ಟಿಯುದ್ದಕ್ಕೂ ಬೆಳೆಯುವ ಗಿಡಗಂಟಿ ಮರ ಬಳ್ಳಿಗಳ ಗುಂಪಿಗೆ **ಗುಲ್ಮ ಸಸ್ಯಾವರಣ** ಎನ್ನುತ್ತಾರೆ. ಅಷ್ಟೇನೂ ಆಳವಿಲ್ಲದ ನೀರಿನಲ್ಲಿ, ಅಳಿವೆಗಳ ಅಂಚಿನಲ್ಲಿ ಅಥವಾ ತಗ್ಗಾದ ಮರಳು ದಂಡೆಯ ಮೂಲಕ ಸಮುದ್ರದಿಂದ ಬೇರ್ಪಟ್ಟ ಉಪ್ಪುನೀರಿನ ಹರವು (ಲಗೂನ್) ಮತ್ತು ಸಮುದ್ರದ ಹವಳದ ದಿಬ್ಬ ಸುತ್ತುವರಿದಿರುವ ಜಲಭಾಗದಲ್ಲಿ ಗುಲ್ಮ ಸಸ್ಯಗಳು

ಬೆಳೆಯುತ್ತವೆ. ಗುಲ್ಮ ಜೌಗುಳಗಳೆಂದರೆ ಉಷ್ಣವಲಯದ ವಿಶಿಷ್ಟ ಕಡಲ ತಡಿಯ ಜೀವಾಶ್ರಯಗಳ ವಿಕಾಸ ತಾಣವಾಗಿದೆ. ಇಲ್ಲಿ ಜೀವದ್ರವ್ಯ ಉತ್ಪಾದನೆ ಅತಿ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇಲ್ಲಿನ ಆಹಾರ ಸರಪಳಿಗೆ ಮರಳು ಮಣ್ಣು ಮೂಲಾಧಾರವಾಗಿದೆ. ಗುಲ್ಮ ಸಸ್ಯಗಳು ಅನೇಕ ಬಗೆಯ ಹೂ ಬಿಡುವ ಸಸ್ಯ ಕುಟುಂಬಗಳು ತಮ್ಮ ರೂಪಾಕಾರವನ್ನೂ, ಭೌತಿಕ ಹಾಗೂ ಶಾರೀರಿಕ ಗುಣಲಕ್ಷಣಗಳನ್ನು ಇಲ್ಲಿನ ಉಬ್ಬರವಿಳಿತದ ಪರಿಸರಕ್ಕೆ ಅನುಗುಣವಾಗಿ ಮಾರ್ಪಡಿಸಿಕೊಂಡು ಬದುಕುತ್ತವೆ. ಇವುಗಳ ಪೈಕಿ ಅತ್ಯಂತ ಮಹತ್ವದ ಮಾರ್ಪಾಡು ಹೊಂದಾಣಿಕೆಗಳೆಂದರೆ ಗಾಳಿಯಲ್ಲಿ ಉಸಿರಾಡಿಸಬಲ್ಲ ಬೇರುಗಳು, ಆಧಾರದ ಬೇರುಗಳು, ಗೂಟ ಬೇರುಗಳು ಇವು ಪರಿಸರದಿಂದ ಪೋಷಕಾಂಶಗಳನ್ನು ಹೀರಿಕೊಳ್ಳಲಿಕ್ಕೆ, ಉಸಿರಾಟ ಕ್ರಿಯೆ ನಡೆಸಲಿಕ್ಕೆ ಹಾಗೂ ಕುಸಿದು ಬೀಳದಂತೆ ಗಟ್ಟಿನಿಲ್ಲಲಿಕ್ಕೆಂದೇ ಸೃಷ್ಟಿಯಾದ ಅಂಗಗಳಾಗಿವೆ. ಎರಡನೆ ಮುಖ್ಯ ಮಾರ್ಪಾಡೆಂದರೆ, ತಾಯಿ ಸಸಿಗೆ ಅಂಟಿಕೊಂಡಿರುವಾಗಲೇ ಮೊಳೆಯುವಂಥ ಗಡ್ಡೆಗಳು, ಬದುಕಲು ಬೇಕಾದ ಆವಶ್ಯಕ ಅಂಗಾಕಾರ ಬಲಿತ ಮೇಲೆ ಈ ಗಡ್ಡೆಗಳು ಕಳಚಿ ಮೃದುವಾದ ನೆಲಕ್ಕೆ ಬಿದ್ದು, ಅಲ್ಲಿಯೇ ಬೇರು ಬಿಟ್ಟು ಬೆಳೆಯುತ್ತವೆ. ಗುಲ್ಮ ಸಸ್ಯಗಳ ಬಹುಮುಖ್ಯ ಪಾತ್ರವೆಂದರೆ ಕಡಲ ತೀರವನ್ನು ಸ್ಥಿರಗೊಳಿಸುವುದು ಹಾಗೂ ತೀರದ ಸವಕಳಿಯನ್ನು ತಡೆಗಟ್ಟುವುದು. ಆಧಾರ ಬೇರುಗಳು, ಉಸಿರಾಟದ ಬೇರುಗಳು ಹಾಗೂ ಕಂಬಬೇರುಗಳ ದಟ್ಟ ಜಾಲದಿಂದಾಗಿ ಗಿಡಕ್ಕೆ ಬಲ ಬರುವುದಷ್ಟೇ ಅಲ್ಲ. ತಳದಲ್ಲಿ ರೇವೆ ಮಣ್ಣು ಸರಿದು ಹೋಗದಂತೆ ಬಿಗಿಯಾಗಿ ಶೇಖರವಾಗುತ್ತದೆ. ಅಳಿವೆಗಳ ಅಂಚಿನಲ್ಲಿರುವ ಗುಲ್ಮ ಸಸ್ಯಗಳು ನದಿಯಿಂದ ಕೊಚ್ಚಿ ಬಂದ ಮಣ್ಣನ್ನು ಶೇಖರಿಸಲು ಸಹಕಾರಿಯಾಗುತ್ತವೆ. ಜೀವ ಮಂಡಲದಲ್ಲಿ ಗುಲ್ಮ ಸಸ್ಯಗಳ ಎರಡನೆ ಮುಖ್ಯ ಪಾತ್ರವೆಂದರೆ ಆರ್ಥಿಕ ಆದಾಯ ಮೂಲವಾದ ವೈವಿಧ್ಯಮಯ ಮೀನು ತಳಿಗಳ ಬೆಳವಣಿಗೆಗೆ ಆಶ್ರಯ ನೀಡುವುದಾಗಿದೆ. ಸಸ್ಯದ ಬೇರು, ಬೊಗಟೆಗಳ ಸಂದುಗೊಂದುಗಳಲ್ಲಿ ಜಲಚರಗಳು ಮೊಟ್ಟೆ ಇಟ್ಟು ಮರಿ ಮಾಡುತ್ತವೆ. ಅಲ್ಲಿನ ಮಣ್ಣು, ಕಸ ಕಡ್ಡಿಗಳಲ್ಲಿ ಈ ಪ್ರಾಣಿಗಳ ಬೆಳವಣಿಗೆಗೆ ಆಹಾರ ಮತ್ತು ಆಶ್ರಯವೂ ಹೇರಳವಾಗಿ ಸಿಗುತ್ತದೆ. ಗುಲ್ಮ ಜೀವಾಶ್ರಯದಲ್ಲಿ ಗಿಡಗಂಟಿಗಳೇ ಪ್ರಮುಖ ಪ್ರಾಥಮಿಕ ಉತ್ಪಾದಕಗಳಾಗಿವೆ. ಆದರೆ ಇದರಲ್ಲಿ ಅಲ್ಪಪಾಲು ಮಾತ್ರ ಸಸ್ಯಾಹಾರಿ ಪ್ರಾಣಿಗಳಿಗೆ ಆಹಾರವಾಗಿ ಲಭ್ಯವಾಗುತ್ತದೆ. ಉಳಿದ ಬಹುಭಾಗವೆಲ್ಲ ಉದುರೆಲೆಯಾಗಿ ಜೌಗು ನೆಲವನ್ನು ಸೇರುತ್ತದೆ. ಇದೇ ಅಲ್ಲಿ ಕೊಳೆತು ಭಗ್ನವಾಗಿ, ಸೂಕ್ಷ್ಮಜೀವಿಗಳಿಗೆ ಹಾಗೂ ಕೀಟಗಳಿಗೆ ಖಾದ್ಯ ಭಂಡಾರವಾಗುತ್ತದೆ. ನೀರಿನಲ್ಲಿ ತೇಲಾಡುವ ಇಲ್ಲವೇ ತಳದಲ್ಲಿ ಓಡಾಡುವ **ಇಚ್ಚಪ್ಪು** ಜೀವಿಗಳಿಗೆ, ಶೀಗಡಿ ಮರಗಳಿಗೆ ಹಾಗೂ ಮೀನು ಮರಿಗಳಿಗೆ ಈ ಕೆಸರುಯುಕ್ತ ಕ್ರಿಮಿಕೀಟ ಖಜಾನೆಯೇ ಆಹಾರ ಮೂಲವಾಗುತ್ತದೆ. ಹೀಗೆ ಉತ್ತಮ ಆಹಾರ ಹಾಗೂ ಸುರಕ್ಷ ಪರಿಸರವಿದ್ದಲ್ಲಿ ಜಲಚರಗಳ ಹಿಂಡು ವಲಸೆ ಬರುತ್ತದೆ. ಎಲ್ಲೆಲ್ಲಿ ಗುಲ್ಮ ಸಸ್ಯಗಳಿವೆಯೋ ಅಲ್ಲೆಲ್ಲ ಮೀನುಗಾರಿಕೆ ಹಾಗೂ ಶೀಗಡಿ ಮೀನು ಸಂಗ್ರಹಣೆ ಕಾರ್ಯ ಚುರುಕಾಗಿರುತ್ತದೆ. ಇವೆರೆಡರ ಮಧ್ಯೆ ನೇರ ಸಂಬಂಧವಿದ್ದು, ಗುಲ್ಮಾರಣ್ಯಗಳು ಮೀನುಗಾರಿಕೆ ಎಷ್ಟು ಮಹತ್ವವೆಂಬುದು ಇದರಿಂದ ಗೊತ್ತಾಗುತ್ತದೆ. ಗುಲ್ಮಾರಣ್ಯಗಳಲ್ಲಿ ಅಧಿಕ ಉತ್ಪಾದನೆ ಸಾಮರ್ಥ್ಯ ಇರುವುದರಿಂದ ಹಾಗೂ ಅಲ್ಲಿಗೆ ಸಂಚಾರ ಸಾಗಾಟ ಸುಲಭವಿರುವುದರಿಂದ ಜಲಬೇಸಾಯ ನಡೆಸಲು ಇವು ಆದರ್ಶ ಪರಿಸರಗಳಾಗಿವೆ. ಉಡುಪಿ ಜಿಲ್ಲೆಯಲ್ಲಿ ಗುಲ್ಮ ಅರಣ್ಯಗಳು ಅಳಿವೆಗಳಲ್ಲಿ ಹಿನ್ನೀರಿನ ಹೊಂಡಗಳಲ್ಲಿ, ದ್ವೀಪಗಳಲ್ಲಿ ಹಾಗೂ ಇನ್ನಿತರ ರಕ್ಷಿತ ಪ್ರದೇಶಗಳಲ್ಲಿ ಬೆಳೆಯುತ್ತವೆ. ನೀರತಡಿಯ ಅಂಚಿನಲ್ಲಿ ಬೆಳೆಯುವ ಈ ಸಸ್ಯಗಳು ಉಬ್ಬರವಿಳಿತಗಳ ಮಧ್ಯಂತರ ಪ್ರದೇಶದಲ್ಲಿ ವಿಪುಲವಾಗಿರುತ್ತವೆ. ಈ ಮಧ್ಯಂತರ ಪ್ರದೇಶದ ವಿಸ್ತೀರ್ಣ ಕಡಲ ತೆರೆಗಳ ಗುಣಲಕ್ಷಣ ಮಣ್ಣು ಹಾಗೂ ನೀರಿನ ಲವಣಾಂಶಗಳನ್ನು ಅವಲಂಭಿಸಿ ಗುಲ್ಮ ಅರಣ್ಯಗಳು ದಟ್ಟವಾಗಿ ಇಲ್ಲವೆ ವಿರಳವಾಗಿ ವ್ಯಾಪಿಸುತ್ತವೆ. ನೀರಿನಲ್ಲಿ ಲವಣಾಂಶ ಹಾಗೂ ಜಲದಾಳದ ಉಪಸ್ತರಗಳ ಲಕ್ಷಣಗಳಿಗೆ ಅನುಸಾರವಾಗಿ ಗುಲ್ಮ ಸಸ್ಯಗಳ ದಟ್ಟಣೆ ಕಂಡುಬರುತ್ತದೆ. ಉಡುಪಿ ಜಿಲ್ಲೆಯಲ್ಲಿರುವ ಅಳಿವೆ ಮತ್ತು ಹೊಳೆಗಳ ಸಮುಚ್ಚಯಗಳು.

## ೧. ಮುಲ್ಕಿ ಮತ್ತು ಪಾವಂಜೆ ಅಳಿವೆಗಳ ಸಮುಚ್ಚಯ

ಮುಲ್ಕಿ ನದಿಯ ದಡಗಳಲ್ಲಿ ಅಂಚಿನಲ್ಲಿರುವ ಗುಲ್ಮ ಸಸ್ಯಾವರಣವು ಹಾನಿಗೊಳಗಾಗಿರುವುದು ಕಂಡುಬರುತ್ತದೆ. ಉರುವಲಿಗಾಗಿ ಗುಲ್ಮ ಸಸ್ಯಗಳನ್ನು ಕಡಿಯಲಾಗಿದೆ. ಆದರೆ ಕೊಲುನಾಯಲು ಬಳಿ ಪಾವಂಜೆ ನದಿಯ ದಡಗಳಲ್ಲಿ ದಟ್ಟವಾದ ಗುಲ್ಮ ಸಸ್ಯಾವರಣವಿದೆ. ಈ ಪ್ರದೇಶದಲ್ಲಿರುವ ಪ್ರಮುಖ ಗುಲ್ಮ ಸಸ್ಯಗಳು–*Rhizophora mucronata, Avicennia alba, Excoecaria agallocha, Avicennia officinalis, Bruguiera gymnorrhiza, Sonnerata caseoloris* ಮತ್ತು *Aegiceras corriculatum* ಕೆಳಮಟ್ಟದಲ್ಲಿರುವ ದಡದ ಭೂಭಾಗವು ಸಣ್ಣ ದ್ವೀಪಗಳ ಹಾಗೆ Acanthus ilicifolius ಸಸ್ಯದಿಂದ ಸುತ್ತುವರಿದಿದೆ. ಕಡಲ ಏರುಬ್ಬರದ ಸಮಯದಲ್ಲಿ ಇಂತಹ ದ್ವೀಪಗಳು ನೀರಿನಿಂದ ಮುಳುಗಡೆಯಾಗಿ, ಉಬ್ಬರ ವಿಳಿತದ ಸಮಯದಲ್ಲಿ ಗೋಚರಿಸುತ್ತದೆ. ಚಿತ್ರಾಪು ಬಳಿ *Avicennia alba* ಪ್ರಮುಖ ಗುಲ್ಮ ಸಸ್ಯವಾಗಿದ್ದು, ಆರು ಮೀಟರ್ ಎತ್ತರಕ್ಕೆ ಬೆಳೆಯುತ್ತದೆ. ದಡದ ಭಾಗವು *Acanthus ilicifolius* ಸಸ್ಯಗಳಿಂದ ಆವರಿಸಿಕೊಂಡಿದೆ. ಸಸಿಹಿತ್ಲು, ಹಳೆಯಂಗಡಿ ಮತ್ತು ಪಾವಂಜೆ ಪ್ರದೇಶದಲ್ಲೂ *Rhizophora* mucronata ಪ್ರಮುಖ ಗುಲ್ಮ ಸಸ್ಯವಾಗಿದೆ. ಯಾವುದೇ ನಿಯಂತ್ರಣವಿಲ್ಲದೆ ಗುಲ್ಮ ಸಸ್ಯಗಳನ್ನು ಉರುವಲಿಗಾಗಿ ಕತ್ತರಿಸಲಾಗುತ್ತಿದೆ. ಅಂತಹ ಪ್ರದೇಶಗಳಲ್ಲಿ ಉಪ್ಪು ನೀರಿನಲ್ಲಿ ಬೆಳೆಯುವ ಜರೀಸಸ್ಯ *Acrostichum aureum* ಎರಡನೇ ಪ್ರಮುಖ ಸಸ್ಯವಾಗಿ ಬೆಳೆಯುತ್ತದೆ.

## ೨. ಉದ್ಯಾವರ ಹೊಳೆ

ಉದ್ಯಾವರ ಹೊಳೆ ದಡದ ಕಟಪಾಡಿ, ಯೆನಗದ್ದೆ, ಉದ್ಯಾವರ, ಜರಕೊದರು, ಮಟ್ಟು, ಪಿತ್ರೋಡಿ, ಕಡೇಕಾರ್ ಮತ್ತು ಕಿದಿಯೂರು ಪ್ರದೇಶಗಳಲ್ಲಿ ಗುಲ್ಮ ಸಸ್ಯಗಳನ್ನು ನೋಡಬಹುದು. ಇಲ್ಲಿ ಬೆಳೆಯುವ ಪ್ರಮುಖ ಗುಲ್ಮ ಸಸ್ಯಗಳೆಂದರೆ *Rhizophora mucronata, Avicennia officinalis, Excoecaria agallocha, Avicennia alba, Bruguiera gymnorrhiza, Kandelia Candes, Aegiceras corniculatum, Sonneratia alba, Acanthus ilicifolius* ಮತ್ತು *Clerodendrum inerme* ಈ ಹೊಳೆಯ ಸಾಲಿನಲ್ಲಿ Acanthus ilicifolia ಸಸ್ಯಗಳಿಂದ ಸುತ್ತುವರಿದ ಸಣ್ಣ ಸಣ್ಣ ದ್ವೀಪಗಳನ್ನು ನೋಡಬಹುದು. ಉದ್ಯಾವರ ಹೊಳೆ ದಂಡೆಯ ಮಟ್ಟುವಿನ ಬಳಿ ಗುಲ್ಮ ಸಸ್ಯಗಳ ಮರು ಸ್ಥಾಪನೆಗೆ (Regeneration) ಸೂಕ್ತ ಸ್ಥಳವಾಗಿದೆ. ಇಲ್ಲಿ ೫.೫ಮೀ. ಎತ್ತರದ ಗುಲ್ಮ ಸಸ್ಯಗಳನ್ನು ಕಾಣಬಹುದು. ಇಲ್ಲಿರುವ ಪ್ರಮುಖ ಗುಲ್ಮ ಸಸ್ಯಗಳೆಂದರೆ *Rhizophora mucronata, Kandelia Candal, Aegieeras corniculatum, Bruguiera gymnorrhiza, Avicennia alba* ಮತ್ತು ವಿರಳವಾಗಿ ಕಾಣಸಿಗುವ *Excoecaria agallocha* ಪಿತ್ರೋಡಿಯ ಬಳಿ ಗುಲ್ಮ ಸಸ್ಯಗಳ ಬೆಳವಣಿಗೆ ಏಳು ಮೀಟರ್‌ಗಳಷ್ಟು ಎತ್ತರಕ್ಕೆ ಬೆಳೆಯುತ್ತಿದ್ದು, ಆ ಸ್ಥಳವು ಗುಲ್ಮ ಸಸ್ಯಗಳ ಪುನರ್‌ಸ್ಥಾಪನೆಗೆ ಸೂಕ್ತವಾಗಿದೆ.

## ೩. ಸ್ವರ್ಣ ಸೀತಾ ಮತ್ತು ಕೋಡಿ ಅಳಿವೆ ಸಮುಚ್ಚಯ

ಖಾಯಂ ಆಗಿ ನಿರ್ಮಿಸಿರುವ ರಕ್ಷಣಾ ಗೋಡೆಗಳು (embankments) ಅನೇಕ ನಾರಿನ ಉದ್ದಿಮೆಯ ಕೈಗಾರಿಕಾ ಘಟಕಗಳ ಸ್ಥಾಪನೆ ಮತ್ತು ಉರುವಲಿಗಾಗಿ ಅನಿಯಂತ್ರಿತ ಮರಗಳ ಕಟಾವು ಮುಂತಾದ ಕಾರಣಗಳಿಂದಾಗಿ ಸ್ವರ್ಣ ನದಿಯ ದಂಡೆಗಳಲ್ಲಿ ಅತಿ ವಿರಳ ಗುಲ್ಮ ಸಸ್ಯಾವರಣವನ್ನು ಕಾಣಬಹುದು. ಸೀತಾ ನದಿಯ ದಂಡೆಗಳನ್ನು ವಿರಳವಾದ ಗುಲ್ಮ ಸಸ್ಯಾವರಣವಿದ್ದು, ಬೊಕ್ಕಪಟ್ಟಣ ಮತ್ತು ಹರಡಿ ಬಳಿ ಪ್ರಮುಖವಾಗಿ *Rhizophora mucronata, Avicennia alba, Aegiceras corniculatum* ಮತ್ತು *Sonneratia alba* ಸಸ್ಯಗಳನ್ನು ಕಾಣುಬುದು. ಕೋಡಿಹೊಳೆಯ ದಡದಲ್ಲಿರುವ ಹಂಗಾರಕಟ್ಟೆ, ಐರೋಡಿ, ಪರಂಪಳ್ಳಿ ಮತ್ತು ಕೋಟತಟ್ಟು (Kotattaattu) ಪರಿಸರದಲ್ಲಿ ಪ್ರಮುಖವಾದ ಗುಲ್ಮ ಸಸ್ಯಗಳೆಂದರೆ *Rhizophora mucronata, Avicennia alba, Sonneratia caseolaris, Aegiceras corniculatum* ಮತ್ತು *Avicennia officinalis, Bruguiera cylindrica* ಗುಲ್ಮ ಸಸ್ಯಗಳು ವಿರಳವಾಗಿವೆ. ಅಳಿವೆಗಳ ದಡದಲ್ಲಿ ಮತ್ತು ಸಣ್ಣ ದ್ವೀಪಗಳನ್ನು *Acanthus ilicifolius* ತಳಿಯು ವ್ಯಾಪಕವಾಗಿ ಸೂಕ್ತವಾದ ರಕ್ಷಣೆ ಒದಗಿಸಿದಲ್ಲಿ

ಉಪ್ಪುನೀರಿನ ಹರವು (ಲಗೋನ್) ಮತ್ತು ಕಡಲ ಹವಳದ ದಿಬ್ಬ ಸುತ್ತುವರಿದಿರುವ ಜಲಭಾಗದಲ್ಲಿ ವೈವಿಧ್ಯಮಯ ಗುಲ್ಮ ಸಸ್ಯಾವರಣವನ್ನು ಕಾಣಬಹುದು. ಬಹುತೇಕ ಕಡೆ ಕೃಷಿ ಕೆಲಸಕ್ಕಾಗಿ ಅಳಿವೆಗಳ ಅಂಚಿನಲ್ಲಿರುವ ಗುಲ್ಮ ಸಸ್ಯಗಳನ್ನು ಕಡಿಯಲಾಗಿದೆ.

### ೪. ಚಕ್ರಾ, ಹಾಲಾಡಿ ಮತ್ತು ಕೊಲ್ಲೂರು ಅಳಿವೆಗಳ ಸಮುಚ್ಚಯ

ಕುಂದಾಪುರದ ಬಳಿ ಚಕ್ರಾ, ಕೊಲ್ಲೂರು ಮತ್ತು ಹಾಲಾಡಿ ನದಿಗಳು ಸಮುದ್ರ ಸೇರುವ ಮೊದಲು ಗುಲ್ಮ ಸಸ್ಯಗಳ ಉತ್ತಮ ಅರಣ್ಯವಿದೆ. ಈ ಸಂಕೀರ್ಣ ಅಳಿವೆಯ ಸುಮಾರು ೩೦,೦೦೦ ಚ. ಮೀ. ಕ್ಷೇತ್ರದಲ್ಲಿ ಗುಲ್ಮಾರಣ್ಯ ಕಂಡುಬರುತ್ತವೆ. ಅಲ್ಲಿ ಮುಖ್ಯವಾಗಿ *Rhizophora conjugata,* ಮತ್ತು *Acanthus ilicifolius* ಸಸ್ಯಗಳು ಬೇರೂರಿವೆ. ಇಲ್ಲಿ ಏರುಬ್ಬರವು ಅತ್ಯಂತ ಇತ್ತರ ತಲುಪುವಲ್ಲಿ ಕೆಸರು ಮಣ್ಣಿನ ದಪ್ಪ ೫೨ ಸೆಂಟಿಮೀಟರ್‌ನಷ್ಟಿದ್ದು, ಉಬ್ಬರವಿಳಿತದ ಮಧ್ಯಂತರ ಪ್ರದೇಶದಲ್ಲಿ ೨೫ ಸೆಂ.ಮೀ ಮತ್ತು ಇಳಿತದ ತೆರೆಯ ಅತ್ಯಂತ ಕೆಳಸ್ತರದಲ್ಲಿ ೧೨ ಸೆಂ.ಮೀ.ನಷ್ಟು ಕೆಸರು ಮಣ್ಣು ಸಂಚಯವಾಗಿದ್ದನ್ನು ಅಳೆಯಲಾಗಿದೆ. ಈ ಕ್ಷೇತ್ರದಲ್ಲಿ ಹೆಚ್ಚಾಗಿ ಕಾಣಸಿಗುವ *Rhizophora* ಮತ್ತು *Avicennia* ಗುಲ್ಮ ಸಸ್ಯಗಳಿಂದ ಉದುರಿದ ಎಲೆ ತೊಗಟೆಗಳೇ ಅಲ್ಲಿನ ಕೆಸರು ಮಣ್ಣಿನ ಪ್ರಧಾನ ಘಟಕವಾಗಿದೆ. ಕಡಲ ತೀರದ ರೈತರು ತಮ್ಮ ಗದ್ದೆಗಳಿಗೆ ಈ ಕೆಸರು ಮಣ್ಣನ್ನೇ ಗೊಬ್ಬರವಾಗಿ ಬಳಸುತ್ತಾರೆ. ಶಿರಾ ಮತ್ತು ಕೊಪ್ಪಳದ ಅಳಿವೆಗಳ ಅಂಚಿನಲ್ಲಿ ಮುಖ್ಯವಾಗಿ *Rhizophora mueronata* ಜಾತಿಯ ಗುಲ್ಮ ಸಸ್ಯಗಳ ಯಾವ ದೊಡ್ಡ ಬನಗಳು ಕಂಡುಬರುವುದಿಲ್ಲ. ಕೋಡಿಯ ಪರಿಸರದಲ್ಲಿ *Rhizophora mucronata,* ಗುಲ್ಮ ಸಸ್ಯವು ಪ್ರಧಾನವಾಗಿದ್ದು, ದಡದ ಅಂಚಿಗೆ ಸಮಾನಾಂತರವಾಗಿ ಬೆಳೆದಿದೆ. ಮರವು ೧೦ ಮೀ. ಎತ್ತರದವರೆಗೂ ಬೆಳೆಯುವುದು ಕಂಡುಬಂದಿದೆ. ನದಿಯ ದಡದಿಂದ ೨೦ ರಿಂದ ೨೫ ಮೀ. ವರೆಗೆ ಗುಲ್ಮ ಸಸ್ಯಗಳು ದಟ್ಟವಾಗಿ ಬೆಳೆಯುತ್ತವೆ. ಹಿನ್ನೀರಿನ ಪರಿಸರದ ವಡೆರ ಹೋಬಳಿ, ಕೊನಿ ಮತ್ತು ಅಂಗಲಿಗಳ ಬಳಿ *Acanthus ilidifolius, Rhizophora mucronata, Kandelia candel* ಮತ್ತು *Avicennia alba* ಗುಲ್ಮ ಸಸ್ಯಗಳು ಬೇರೂರಿವೆ. ಹೊಳೆಯ ಮಧ್ಯಭಾಗದಲ್ಲಿರುವ ಸಣ್ಣ ದ್ವೀಪಗಳಲ್ಲಿ ಮತ್ತು *Lumintzera racemosa* ಸಸ್ಯಗಳಿವೆ. 'ಕಮಸ್ತರ ಕುದುರು' ಎಂಬ ಸಣ್ಣ ದ್ವೀಪದಲ್ಲಿ ಮತ್ತು *Lumintzera racemosa* ಸಸ್ಯಗಳು ಹೇರಳವಾಗಿವೆ. ಉರುವಲಿಗಾಗಿ ಬಹುತೇಕ ಕಡೆ ಗುಲ್ಮ ಸಸ್ಯಗಳನ್ನು ಕಡಿದಿರುವುದು ಕಂಡುಬಂದಿದೆ. ಒಳನಾಡ ಪ್ರದೇಶದ ರಕ್ಷಣೆಗೋಸ್ಕರ *Rhizophora mucronata* ಸಸ್ಯಗಳನ್ನು ಬೆಳೆಸುತ್ತಾರೆ.

### ೫. ಬೈಂದೂರು ಹೊಳೆ

ಬೈಂದೂರು ಹೊಳೆಯ ಪರಿಸರದ ಪಡುವಾರಿ ಬಳಿ ದಟ್ಟವಾದ ಗುಲ್ಮಾರಣ್ಯ ಕಂಡುಬರುತ್ತದೆ. ಪ್ರಮುಖವಾಗಿ *Avicennia officinalis* ಮತ್ತು *Rhizophora mucronata* ಮತ್ತು ವಿರಳವಾಗಿ *Sonneratia caseolaris, Bruguiera gymnorrhiza, Rhizophora mucronata, Aegiceras corniculatum, Excoecaria agallocha* ಮತ್ತು *Avicennia alba* ಸಸ್ಯಗಳನ್ನು ಕಾಣಬಹುದು. ಹೊಳೆಯ ದಡದ ಅಂಚಿನಲ್ಲಿ *Acanthus ilicifolius* ಹೆಚ್ಚಾಗಿ ಕಂಡುಬರುತ್ತದೆ. ಉಪ್ಪುಂದ ಬಳಿ *Rhizophora mucronata* ಸಸ್ಯವು ದಟ್ಟವಾಗಿ ಬೆಳೆದಿರುವುದನ್ನು ಕಾಣಬಹುದು.

### ೬. ಶಿರೂರು ಹೊಳೆ

ಶಿರೂರು ಹೊಳೆಯ ಪರಿಸರದಲ್ಲಿ *Excoecaria agallocha, Rhizophora mucronata, Bruguiera gymnorrhiza, Sonneratia alba* ಮತ್ತು *Avicennia alba* ಸಸ್ಯಗಳು ಬೇರೂರಿವೆ. ವಿರಳವಾಗಿರುವ ಗುಲ್ಮ ಸಸ್ಯಗಳಲ್ಲಿ *Luminitzera racemosa, ceriops decandra, Bruguiera cylindrica* ಮತ್ತು *Avicennia marina* ಪ್ರಮುಖವಾಗಿವೆ. ಹೊಳೆ ದಂಡೆಯ ಒಳನಾಡಿನ ಅಂಚಿನಲ್ಲಿ *Acanthus*

*ilicifolius* ಹೆಚ್ಚಾಗಿ ಕಂಡುಬರುತ್ತದೆ. ಮೀನುಗಾರಿಕೆಗಾಗಿ ಅನೇಕ ಕಡೆ ಗುಲ್ಮ ಸಸ್ಯಾವರಣವನ್ನು ನಾಶಪಡಿಸಿರುವುದು ಕಂಡುಬಂದಿದೆ. ಗುಲ್ಮ ಸಸ್ಯಗಳನ್ನು ಆಹಾರವಾಗಿ, ಮೇವಾಗಿ, ಗೊಬ್ಬರವಾಗಿ, ನಾಟಾಕ್ಕಾಗಿ, ಇಂಧನಕ್ಕಾಗಿ, ಕಾಗದ ಮತ್ತು ತಿರುಳಿಗಾಗಿ ಟ್ಯಾನಿನ್ ಮತ್ತು ಮದ್ಯಸಾರ ಉತ್ಪಾದನೆಗಳಿಗಾಗಿ ಬಳಸುತ್ತಾರೆ. ದೋಣಿ ಮತ್ತು ನಾವೆಗಳ ನಿರ್ಮಾಣಕ್ಕೆಂದು *Rhizophora mucronata* ಮತ್ತು *Bruguiera gymnorrhiza* ಗಳನ್ನು ದೀರ್ಘಬಾಳಿಕೆಯ ನಾಟಾಗಳೆಂದು ಪರಿಗಣಿಸಲಾಗಿದೆ. *Bruguiera, Rhizophora* ಹಾಗೂ *Sonneratia* ಪ್ರಭೇದದ ಸಸ್ಯಗಳ ತೊಗಟೆಯಿಂದ ಚೊಗರನ್ನು ಸಂಗ್ರಹಿಸಲಾಗುತ್ತಿದೆ. ಸುಲಭವಾಗಿ ಬೇರೆ ಯಾವುದೇ ಬಗೆಯ ಉರುವಲ ಸೌದೆ ಸಿಗದಾಗ ಬಹುತೇಕ ಎಲ್ಲ ಜಾತಿಯ ಗುಲ್ಮ ಸಸ್ಯಗಳನ್ನು ಉರುವಲಿಗಾಗಿ ಉಪಯೋಗಿಸಲಾಗುತ್ತಿದೆ. ಇದ್ದಲು ತಯಾರಿಕೆಗೆ, ಕಾಗದ ಮತ್ತು ತಿರುಳು (ಪಲ್ಪ್) ಉದ್ದಿಮೆಗೆ ಎಲ್ಲ ಬಗೆಯ ಗುಲ್ಮ ಸಸ್ಯಗಳೂ ಬಳಕೆಯಾಗುತ್ತವೆ.

## ಸಮುದ್ರ ಪಾಚಿಗಳು

ಸಮುದ್ರ ಪಾಚಿಗಳು (ಇವಕ್ಕೆ ಸಮುದ್ರ ಶೈವಲಗಳು ಎಂತಲೂ ಕರೆಯುತ್ತಾರೆ) ಸಾಮಾನ್ಯವಾಗಿ ಕಡಲ ತೀರದ ಉಬ್ಬರವಿಳಿತದ ಕ್ಷೇತ್ರದಲ್ಲಿ ಅಥವಾ ನೀರಿನ ಮಟ್ಟಕ್ಕಿಂತ ತುಸು ಕೆಳಗೆ ಗಟ್ಟಿ ಶಿಲಾಸ್ತರಗಳಿಗೆ ಅಂಟಿಕೊಂಡು ಜೀವಿಸುತ್ತವೆ. ಈ ಶೈವಲಗಳು ಪ್ರಮುಖ ಪ್ರಾಥಮಿಕ ಉತ್ಪಾದಕಗಳಾಗಿದ್ದು, ಸಮುದ್ರದ ಅತಿ ಮುಖ್ಯ ಸಸ್ಯ ಸಂಪನ್ಮೂಲಗಳೆನಿಸಿವೆ. ಇವುಗಳನ್ನು ಆಹಾರಕ್ಕೆಂದು, ಮೇವಿಗೆಂದು, ಗೊಬ್ಬರಕ್ಕೆಂದು, ಔಷಧ ರಾಸಾಯನಿಕಗಳಿಗೆಂದು ಬಳಸಲಾಗುತ್ತಿದೆ. ಸಮುದ್ರ ಪಾಚಿಗಳನ್ನು ಮುಖ್ಯವಾಗಿ ಕ್ಲೋರೋಫೈಟಾ, ಫೇಯೋಫೈಟಾ, ರೋಡೋಫೈಟಾ ಮತ್ತು ಮೈಕ್ರೊ ಫೈಟಾ ಎಂಬುದಾಗಿ ವರ್ಗೀಕರಿಸಲಾಗಿದೆ.

ಉಡುಪಿ ಜಿಲ್ಲೆಯ ಮಲ್ಪೆ ಮತ್ತು ಸಮೀಪದ ದ್ವೀಪಗಳಲ್ಲಿ ೧೮ ಸಮುದ್ರ ಪಾಚಿಯ ಪ್ರಭೇದಗಳನ್ನು ಗುರುತಿಸಲಾಗಿದೆ. ಕರಾವಳಿಯುದ್ದಕ್ಕೂ ಕಾಣಸಿಗುವ ಸಮುದ್ರ ಪಾಚಿಯ ಪ್ರಭೇದಗಳೆಂದರೆ *Enteromorpha, Ulva, Padina, Dictyota, Sorgassum, Gracilaria* ಮತ್ತು *Gratiloupia*. ಮಲ್ಪೆ ಮತ್ತು ಸಮೀಪದ ದ್ವೀಪಗಳಲ್ಲಿ ಕಂಡುಬರುವ ಸಮುದ್ರ ಶೈವಲಗಳ ಪ್ರಭೇದಗಳು: *1) Enteromorpha flexuosa, 2) Ulva fasciata, 3) Chaetamorpha media, 4) Bryopsis plumosa 5) Caulerpa pettata, 6) Caulerpa sertulariodes, 9) Dictyota bartayrasiana, 10) Padina tetrastromatica, 11) Stoechospermus marginatum, 12) Colpomimia sinuosa* ಮತ್ತು *13) Sargassum tenerrimum.* ದ್ಯುತಿ ಸಂಶ್ಲೇಷಣ ಕ್ರಿಯೆಯನ್ನು ಚುರುಕಾಗಿ ನಡೆಸುತ್ತಾ ಆಹಾರೋತ್ಪಾದನೆ ಮಾಡುವ ಸಮುದ್ರ ಶೈವಲಗಳು ಕಡಲ ತೀರದ ಬಳಿ ಭಾರಿ ಮೊತ್ತದಲ್ಲಿ ಕೊಳೆತ ಸಸ್ಯ ಚೂರ್ಣಗಳನ್ನು ಹೊರಹಾಕುತ್ತವೆ.

ಹಿನ್ನೀರ ಕ್ಷೇತ್ರದಲ್ಲಿ ಈ ಶೈವಲಗಳ ಸೇಂದ್ರಿಯ ರಾಶಿಯೇ ಅನೇಕ ಬಗೆಯ ಕ್ರಿಮಿಕೀಟಗಳಿಗೆ ಆಹಾರ ಮತ್ತು ಆಶ್ರಯವನ್ನೊದಗಿಸುತ್ತವೆ. ಜೀವಜಂತುಗಳ ಮೊಟ್ಟೆ ಮತ್ತು ಮರಿಹುಳುಗಳು ನೀರಿನಾಳದ ಶಿಲೀಂದ್ರ ಛಾಪೆಯಲ್ಲಿ ರಕ್ಷಣೆ ಪಡೆಯುತ್ತವೆ. ಅಗಾರ್ ಅಗಾರ್, ಅಲ್ಗಿನೇಟ್ಸ್, ಕರ್‍ರಾಜೀನಾನ್ ಮತ್ತು ಮಾನ್ನಿಟಾಲ್‌ನಂಥ ವಿಶಿಷ್ಟ ದ್ರವ್ಯಗಳ ಏಕೈಕ ಮೂಲವೆಂದರೆ ಈ ಶೈವಲಗಳು. ಕಡಲ ತೀರದಲ್ಲಿ ಇವು ಹೇರಳವಾಗಿ ಲಭ್ಯವಿದ್ದರೂ ದೊಡ್ಡ ಮೊತ್ತದಲ್ಲಿ ಬಳಕೆಯಾಗುತ್ತಿಲ್ಲ.

## ಜಿಲ್ಲೆಯ ಪ್ರಮುಖ ಚೌಬೀನೆ (ಟಿಂಬರ್) ಮರಗಳು

ಹಿಂದೆ ಚೌಬೀನೆಗಾಗಿ ಸಾಗುವಾನಿ, ಬೀಟೆ, ಹೊನ್ನೆ, ಮತ್ತಿ ಮುಂತಾದ ಕೆಲವು ಜಾತಿಗಳ ಹೊರತಾಗಿ ಉಳಿದೆಲ್ಲಾ ಮರಜಾತಿಗಳು ಉರುವಲಿಗೆ ಉಪಯೋಗವಾಗುತ್ತಿದ್ದವು. ಕಾಗದ ತಯಾರಿಕೆಗೆ ಬೊಂಬಿನ ಬಳಕೆಯಾಗುತ್ತಿತ್ತು. ನೆಡುತೋಪಿನ ಸಾಗುವಾನಿ ಬಿಟ್ಟರೆ ಬೇರೆ ಮರಜಾತಿ ಬೇಡವಾಗಿತ್ತು. ಇಂದು ಸಾಗುವಾನಿಯೊಂದಿಗೆ ಇತರ ಅನೇಕ ಉಪಯುಕ್ತ ಮರಜಾತಿಗಳ ನೆಡುತೋಪಿನ ಕಾರ್ಯ ಭರದಿಂದ ಸಾಗಿದೆ. ಬಯಲು ಬಂಜರುಗಳಲ್ಲಿ ವನನಿರ್ಮಾಣ, ಸಾಮಾಜಿಕ ಅರಣ್ಯಗಳ ನಿರ್ಮಾಣ

ಇವುಗಳಿಂದ ಹಿಂದಿನ ಗ್ರಾಮಾರಣ್ಯ, ಜಿಲ್ಲಾರಣ್ಯಗಳ ಪುನರುದ್ಧಾರ ಜರುಗಿದೆ. ನೆಡುತೋಪುಗಳ ನಿರ್ಮಾಣಕ್ಕೆ ಅರಣ್ಯ ಪ್ರದೇಶಗಳ ಪೂರ್ಣ ಕಟಾವಿನ ಬದಲು ಅನೇಕ ಉಪಯುಕ್ತ ಮರ ಜಾತಿಗಳ ಸಸಿಗಳನ್ನು ಸಂದುನಾಟಿ (Gap Planting) ಮಾಡಿ ಅರಣ್ಯಾಭಿವೃದ್ಧಿ ಮಾಡಲಾಗುತ್ತಿದೆ.

ಜಿಲ್ಲೆಯ ನಿತ್ಯಹರಿದ್ವರ್ಣದ ಮತ್ತು ಎಲೆಯುದುರುವ ಅರಣ್ಯಗಳಲ್ಲಿ ಅನೇಕ ಚೌಬೀನೆ ಮರಗಳನ್ನು ಕಾಣಬಹುದು. ಪ್ರಮುಖವಾಗಿ ಧೂಮ, ಬಲಿಗೆ, ಕಿರಲುಬೋಗಿ, ಶ್ರೀಹೊನ್ನೆ, ಹೆಬ್ಬಲಸು ಮುಂತಾದ ಮರಗಳು ಪಶ್ಚಿಮ ಘಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ಬೃಹದಾಕಾರವಾಗಿ ಬೆಳೆದಿರುವುದನ್ನು ನೋಡಬಹುದಾಗಿದೆ. ಜಿಲ್ಲೆಯಲ್ಲಿರುವ ಪ್ರಮುಖ ಚೌಬೀನೆ ಮರಗಳ ಪಟ್ಟಿಯನ್ನು ಮುಂದೆ ನೀಡಿದೆ.

**ಕೋಷ್ಟಕ ೧.೪ : ಚೌಬೀನೆ ಮರಗಳ ವಿವರ - ಉಡುಪಿ ಜಿಲ್ಲೆ**

| ಕ್ರ. ಸಂ. | ವೈಜ್ಞಾನಿಕ ಹೆಸರು | ರೂಢಿ ನಾಮ | | ಕುಟುಂಬ ನಾಮ |
|---|---|---|---|---|
| 1 | *Acacia chundra* (Roxb ex Rottler) Willd. | Baddejali. Kempujali | ಬಡ್ಡೆಜಾಲಿ, ಕೆಂಪುಜಾಲಿ | Fabaceae |
| 2 | *Acacia sinuata* (Lour.) Merr. | Seege | ಸೀಗೆ | Fabaceae |
| *3* | *Adina cordifolia* (Roxb.)Ridsd | Heddi, Yathyaga, Haladhu, Arishinathega | ಹೆಡ್ಡಿ ಅರಿಶಿನ ತೇಗ | Rubiaceae |
| 4 | Acacia Ferruginea | Bannimara | ಬನ್ನಿಮರ | Leguminaceae |
| 5 | *Aegle marmelos* (L.) Correa | Bilwapathre, | ಬಿಲ್ವಪತ್ರೆ | Rutaceae |
| 6 | *Ailanthus tryphysa* (Dennst.) Alston | Gagguladhupa | ಗಗ್ಗುಲ ಧೂಪ | simaroubaceae |
| 7 | *Alangium salvifolium* (L.f) Wangerin. | Anasorali, Ankole, Nikochaka | ಅಂಕೋಲೆ | Alangiaceae |
| 8 | *Albizzia lebbeck* (L.) Benth. | Bage, Hombage, Shirish | ಬಾಗೆ | Fabaceae |
| 9 | *Albizzia odoratissima* (L.f) Benth. | Bilwara, | ಬಿಲ್ವಾರ | Fabaceae |
| 10 | *Anacardiun occidentale L.* | Geru soppu, Godanbi, Kaju, Jidi | ಗೇರು ಸೊಪ್ಪು | Anacardiaceae |
| 11 | *Arenga wightii* Griffith. | Dadasal | ದಡಸಾಲ | Arecaceae |
| 12 | *Artocarpus hirsutus* Lam. | Hebbalasu, Kabbalasu, Kanduhalasu, Hessva, | ಹೆಬ್ಬಲಸು, ಕಬ್ಬಲಸು | Moraceae |
| 13 | *Artocarpus heterophyllus Lam* | Halasu, Fanasa | ಹಲಸು | Moraceae |
| 14 | *Artocarpus gomezianus* | | | |

| ಕ್ರ. ಸಂ. | ವೈಜ್ಞಾನಿಕ ಹೆಸರು | ರೂಢಿ ನಾಮ | | ಕುಟುಂಬ ನಾಮ |
|---|---|---|---|---|
| | Wall ex Trecul spp *zeylanicus* Jarreth | Vantimara, Vatemara | ವಾಟೆಮರ | Moraceae |
| 15 | *Azadirachta indica* A Juss. | Bevu, Ollebevu | ಬೇವು, ಒಳ್ಳೇಬೇವು | Meliaceae |
| 16 | *Bambusa arundinacea* (Retz.)Roxb | Hebbidiru, Dowga, Mallubidiru, Andebidiru. | ಹೆಬ್ಬಿದಿರು | Poaceae |
| 17 | *Madhuca longifolia* (L.)Maebride var latifolia (Roxb.) chev | Mahuva, Madhuka, Kaduhippie, Hippe | ಮಧುಕ, ಹಿಪ್ಪೆ | Sapotaceae |
| 18 | *Bauhinia malabarica* Roxb | Basavanapada, Mandara, Huliachalu | ಬಸವನಪಾದ | Fabaceae |
| 19 | *Bischofia javanica* Bl. | Neeli, Neerulli, Gobbaranerale | ನೀಲಿ | Euphorbiace |
| 20 | *Bombax ceiba L.* | Booruga | ಬೂರುಗ | Bombacaceae |
| 21 | *Bridelia retusa* (L.) Spreng. | Gurige, Gowrige, Asana,Gowje, Bilkumbe | ಗೌರಿಗೆ | Euphorbiaceae |
| 22 | *Buchanania lanzan* Spreng. | Murkali, Maradi, Morave, Charoli, Bhanushchata | ಮರಡಿ | Anacardiaceae |
| 23 | *Butea monosperma* (Lam.) Taub. | Muthaga or Palasha | ಮುತ್ತುಗ | Fabaceae |
| 24 | *Calophyllum polyanthum Wall. ex Choisy* | *Shrihonne, Holehonne Koove, Bobbi, Puna* | ಶ್ರೀಹೊನ್ನೆ ಹೊಳೆಹೊನ್ನೆ | Clusiaceae |
| 25 | *Calophyllum apetalum Willd* | Holehonne | ಹೊಳೆಹೊನ್ನೆ | Clusiaceae |
| 26 | *Caloptropis gigantea (L.) R.Br.* | Yekkemara | ಯೆಕ್ಕೆಮರ | Asclepiadaceae |
| 27 | *Canarium strictum Roxb* | Kaayidhoopa, Karidoopa, Raladoopa, | | Burseraceae |
| 28 | *Canthium parviflorum* Lam | Kare, Gandukakorla | ಕಾರೆ | Rubiaceae |
| 29 | *Carallia, brachiata* (Lour.) Merr. | Andinar or Andipunar | ಅಂಡಿನಾರು | Rhizophoraceae |
| 30 | *Careya arborea* Roxb | Daddal, Kaval, Kavalu, Gowjalumara | ಗೌಜಲು | Lecythidaceae |

| ಕ್ರ. ಸಂ. | ವೈಜ್ಞಾನಿಕ ಹೆಸರು | ರೂಢಿ ನಾಮ | | ಕುಟುಂಬ ನಾಮ |
|---|---|---|---|---|
| 31 | *Caryota urens L.* | Bainemara, Paine, Bagani | ಬೈನೆ | Arecaceae |
| 32 | *Cassia fistula L.* | Kakke, Bava, Swarnapushpa | ಕಕ್ಕೆ | Fabaceae |
| 33 | *Casuarina equisetifolia L.* | Saruvemara, Casuarina Galimara, Saruve, | ಸರ್ವೆಮರ ಗಾಳಿಮರ | Casuarinaceae |
| 34 | *Toona ciliata* Roemer | Gandhagarige, Noge, Nandhuri, Nandivruksha, Toonmara | ಗಂಧಗರಿಗೆ | Meliaceae |
| 35 | *Celtis tetrandra* Roxb. | Karki | ಕರ್ಕಿ | Ulmaceae |
| 36 | *Chloroxylon swietenia* DC. | Kalgarige, Dalmara, Gavuda, Madhagiribevu | ಕಲ್ಗರಿಗೆ | Rutaceae |
| 37 | *Chukrasia tabularis* A Juss | Kallugarike | ಕಲ್ಲುಗರಿಕೆ | Meliaceae |
| 38 | *Cinnamomum verum* J. S. Presl. | Delchinni, Lavangapathre | ದಾಲ್ಚಿನ್ನಿ | Lauraceae |
| 39 | *Cordia myxa* Wight | Challe, Solle, Bhotte, Chadlu, Mannadake, Kendal | ಚಳ್ಳೆ | Boraginaceae |
| 40 | *Dalbergia latifolia* Roxb. | Beete, Karevyadi, Ibadi, Thodeghatta | ಬೀಟೆ | Fabaceae |
| 41 | *Delonix regia* (Boj. ex Hook.) | Kathikayimara, Raj Goldmohar, Gulmohar | ಕತ್ತಿಕಾಯಿಮರ ಗುಲ್‌ಮೊಹರ್, | Fabaceae |
| 42 | *Dendrocalamus strictus* (Roxb.) Nees Seebu | Gandubidru, Kirubidiru, | ಗಂಡುಬಿದಿರು | Poaceae Medhari, |
| 43 | *Dillenia pentagyna* Roxb | Machuka | ಮಚ್ಚುಕ | Apocyanaceae |
| 43a | *Dillenia pentagyna* | Kadu Kannagalu, Kolthega, Madathega, Karambala | ಕಾಡುಕಣಿಗಲು | Dillenaiaceae |
| 44 | *Diospyros malabarica* (Jusr) Kastel | Holethumra, Horetutta, Thinduka, | ಹೊಳೆತುಂಬ್ರ | Ebenaceae |
| 45 | *Diospyros montana* Roxb | Jagalaganti, Bilkunika, Kalnandi, | ಜಗಳಗಂಟಿ | Ebenaceae |

| ಕ್ರ ಸಂ. | ವೈಜ್ಞಾನಿಕ ಹೆಸರು | ರೂಢಿ ನಾಮ | | ಕುಟುಂಬ ನಾಮ |
|---|---|---|---|---|
| 46 | *Dipterocrpus indicus* Bedd | Kalpain, Challane, Dhooma. | ಧೂಮ | Depterocarpaceae |
| 47 | *Elaeocarpus oblongus* Wight & Arn. | Analthari | ಅನಲ್ತರಿ | Elaeocarpaceae |
| 48 | *Elaeocarpus tuberculatus Roxb* | Sattagadhamara, Kungemara,Rudrakshimara, Dhandlamara | ಸತ್ತಗದಮರ ರುದ್ರಾಕ್ಷಿ | Tiliaceae |
| 49 | *Phyllanthus emblica L.* | Nelli, Bettanelli, Amla, Analaka | ನೆಲ್ಲಿ | Euphorbiaceae |
| 50 | *Erinocarpus nimmonii* Graham | Chera, Chowra, Bharangi, Adavibendi | ಚೌರ | Tiliaceae |
| 51 | *Erythrina variegata L* | Haluvana | ಹಾಲುವಾಣ | Fabaceae |
| 52 | *Syzygium cumini* L. Speels | Nerale, Jambunerale | ನೇರಳೆ | Myrtaceae |
| 53 | *Zanthophyllum retusa* (Roxb.) DC | | | *Rutaceae* |
| 54 | *Ficus benghalensis L.* | Ala, Vada, Vatavruksha | ಆಲ | Moraceae |
| 55 | *Ficus racemosa* L. | Atti, Gulara, Rumadi, Oudhumbara | ಅತ್ತಿ | Moraceae |
| 56 | *Ficus virens* Aiton | Basari | ಬಸರಿ | Moraceae |
| 57 | *Ficus religiosa* L. | Arali, Ashwatha, | ಅರಳಿ | Moraceae |
| 58 | *Garcinia indica* (Thouars) Choisy | Mugal, Murugal, Kokammara, Bheerunda | ಮುಗಳ | Clusiaceae |
| 59 | *Garuga pinnata* Roxb. | Goddanamara, Holabalige, Bolamate | ಗೊದ್ದನಮರ | Burseraceae |
| 60 | *Grewia tiliifolia* vahl. | Thadsal, Dhaman, Kendalasu, Thadasalu | ತಡ್ಸಾಲ್ | Tiliaceae |
| 61 | *Hardwickia binata* Roxb. | Yennemara, Penai, Chowpaini | ಎಣ್ಣೆಮರ | Fabaceae |
| 62 | *Helicteres isora* L. | Kowri, Yadamuri, Kavargi, Murugikayi | ಕೌರಿ | Sterculiaceae |
| 63 | *Hemidesmus indicus* (L.) R.Br. | Halberu, Sogadeberu, Sugandaberu, Namadaberu, Mannariberu | ಹಾಲ್ಬೇರು | Asclepiadaceae |
| 64 | *Hibiscus cannabinus* L. | Pudike | ಪುದಿಕೆ | Malvaceae |

| ಕ್ರ. ಸಂ. | ವೈಜ್ಞಾನಿಕ ಹೆಸರು | ರೂಢಿ ನಾಮ | | ಕುಟುಂಬ ನಾಮ |
|---|---|---|---|---|
| 65 | *Halarrhena, pubescens* (Buch.Ham.) Wall ex G Don | Hirekodsa, Maddarasa | ಹಿರೇಕೊಡ್ಸ | Apocynaceae |
| 66 | *Holigarna arnottiana* Hook. f | Chara | ಚಾರ | Anacardiceae |
| 67 | *Holigarna beddomei* Hook. f | Bettaholegara, Doddeleholegara | ಬೆಟ್ಟಹೊಳೆಗಾರ | Anacardiceae |
| 68 | *Hopea parviflora* Bedd. | Kiralbhogi, Karmara, Kallane, Kodachaga, Kodamuruka | ಕಲ್ಲಾನೆ | Dipterocarpaceae |
| 69 | *Hopea ponga* (Dennst.)Mabberly | Haiga, Doddekebogi | ಹೈಗಾ | Dipterocarpaceae |
| 70 | *Hydnocarpus alpina* Wight | Soorati | ಸೂರಟಿ | Flacourtiaceae |
| 71 | *Ixora pavetta* Andr. | Goruvi, Kansara, Heddarani,Kansuragi, Gorije | ಗೊರುವಿ | Rubiaceae |
| 72 | *Jasminum arborescens* Roxb. | Mallige | ಮಲ್ಲಿಗೆ | Oleaceae |
| 73 | *Garcinia xanthochymus* Hook. f ex T And | Jarigemara | ಜರಿಗೆಮರ | |
| 74 | *Kydia calycina* Roxb. | Bende, Bellaka, Belagu | ಬೆಂಡೆ | Malvaceae |
| 75 | *Lagerstroemia speciosa* (L.) Pers | Holenandi | ಹೊಳೆನಂದಿ | Lythraceae |
| 76 | *Litsea wightiana* (Nus) Hook. J | Massi or Mashe | ಮಸ್ಸಿ | Lauraceae |
| 77 | *Lagerstroemia microcarpa* Wight | Nandi, Belmatti, Bolandaru, Nana | ನಂದಿ | Lythraceae |
| 78 | *Lophopetalum wightianum* Arn | Balipale | ಬಲಿಪಲೆ | Celastraceae |
| 79 | *Macaranga peltata* (Roxb.) Muell.-Arg | Uppalige, Kanchupranthi, Chandrakala,Batlachandrike | ಉಪ್ಪಲಿಗೆ | Euphorbiaceae |
| 80 | *Persea macrantha* (Nees) Kasterm | Gulumavu, Chittundi, Chandrahittu | ಗುಲ್ಮಾವು | *Lauraceae* |

| ಕ್ರ. ಸಂ. | ವೈಜ್ಞಾನಿಕ ಹೆಸರು | ರೂಢಿ ನಾಮ | | ಕುಟುಂಬ ನಾಮ |
|---|---|---|---|---|
| 81 | *Mallotus philippinensis* (Lam.) Muell-Arg | Kumkumadamara Kapilarangu Hulibendu, Urabatti | ಕುಂಕುಮ | Euphorbiaceae |
| 82 | *Mangifera indica* L | Mavu | ಮಾವು | Anacardiaceae |
| 83 | *Melia dubia* Cav | Kadubevu, Bettadabevu, Hebbevu | ಕಾಡುಬೇವು | Meliaceae |
| 84 | *Memecylon edule* Roxb. | Nemar | ನೆಮ್ಮರ | Meliaceae |
| 85 | *Mesua ferrea* L. | Nagasampige, Nagakesari | ನಾಗಸಂಪಿಗೆ | Clusiaceae |
| *86* | *Mimusops elengi* L | Ranja, Pagademara, Kesara, Malasuri, Yalangi | ರಂಜಾ | Sapotaceae |
| 87 | *Knema attenuata* Hook. J & Thoms) Warb | Ramapathri | ರಾಂಪತ್ರಿ | Myristicaceae |
| 88 | *Myristica fatua* Houtt | Rampathre | ರಾಂಪತ್ರೆ | Myristicaceae |
| 89 | *Myristica malabarica* | Ramapathre | ರಾಂಪತ್ರೆ | Myristicaceae |
| 90 | *Dimocarpus longana* Lour | Chakote | ಚಕ್ಕೋತ | |
| 91 | *Ochlandra travancorica* Benth.ex Gamble | Vate | ವಾಟೆ | Gramineae |
| 92 | *Lannea coromandelica* (Houth) | Godda, Udimara, Oodimara, Simtimara, Gogal, Hemmugodda | ಊಡಿಮರ | Anacardiaceae |
| 93 | *Olea dioica* | Madle, Hekkarakalu | ಮಡ್ಲೆ | Oleaceae |
| 94 | *Palaquium ellipticum* (Dalz) Baill | Pali, Hadasale, Panchotimara, Hadasaale, Halusalle | ಪಂಚೋಟಿ | Sapotaceae |
| 95 | *Pongamia pinnata* (L.) Pierre | Honge, Karanja, Huligili | ಹೊಂಗೆ | *Fabaceae* |
| 96 | *Pterocarpus marsupium Roxb.* | Honne, Hane, Bijasala | ಹೊನ್ನೆ | Fabaceae |
| 97 | *Rauwolfia serpentina* (L.) Benth. ex Kurz | Chandrike, Nanjaregida, Sarpakshi, Sarpagandha | ಚಂದ್ರಿಕೆ | Apocynaceae |

| ಕ್ರ. ಸಂ. | ವೈಜ್ಞಾನಿಕ ಹೆಸರು | ರೂಢಿ ನಾಮ | | ಕುಟುಂಬ ನಾಮ |
|---|---|---|---|---|
| 98 | *Rhizophora mucronata* Poir | Kandla, Kandala, | ಕಾಂಡ್ಲ | Rhizophoraceae |
| 99 | *Bombax ceiba* L.Kempuburuga | Bhuruga, | ಬೂರುಗ | Bombacaceae |
| 100 | *Santalum album* L. | Shrigandha | ಶ್ರೀಗಂಧ | Santalaceae |
| 101 | *Sapindus emarginatus* vahl | Antuvala, Norekayi, Kugatemara | ಅಂಟುವಾಳ | Sapindaceae |
| 102 | *Schleichera oleosa* (Lour) Opem | Kendala, Kusum, Sagade, Kusambi | ಕೆಂದಾಲ | Sapindaceae |
| 103 | *Soymida febrifuga* (Roxb) A. Juss | Somemara, Swamimara, Kemmara, Navilumettu, Rohini | ಸೋಮೆಮರ | Meliaceae |
| 104 | *Spondias pinnata* (L.f) Kurr | Amate, Pundi | ಅಮಟೆ | Anacardiaceae |
| 105 | *Mitragyna paraviflora* (Roxb.) Korth | Kadivala, Kadagadha, Kapari, Kongu | ಕಡಿವಾಳ | Rubiaceae |
| 106 | *Sterculia guttata* Roxb | Hulitharadu | ಹುಲಿತರಡು | Sterculiaceae |
| 107 | *Stereospermum suaveolens* (Roxb.) DC | Billmara, Belipadri, Uppalave, Billa | ಬಿಲ್ಮರ | Bignoniaceae |
| 108 | *Strychnos nux-vomica* L | Kasaraka, Nanjinakoradu, Katharike | ಕಸರಕ | Loganniaceae |
| 109 | *Swietenia mahagoni* (L.) Jack | Mahagani | ಮಹಾಗನಿ | Meliaceae |
| 110 | *Symplocos laurina* (Retz) Wall | Changa, Chunga, Lodhra | ಚಂಗ | Symplocaceae |
| 111 | *Syzygium caryophyllatum* (L.) Alston | Nerale, Jambunerale | ನೇರಳೆ | Myrtaceae |
| 112 | *Syzygium cumini* (L.) Speels | Kadunerale | ಕಾಡುನೇರಳೆ | Myrtaceae |

| ಕ್ರ. ಸಂ. | ವೈಜ್ಞಾನಿಕ ಹೆಸರು | ರೂಢಿ ನಾಮ | | ಕುಟುಂಬ ನಾಮ |
|---|---|---|---|---|
| 113 | *Syzygium gardneri* Thw | Bilichiravu | ಬಿಳಿಚಿರವು | Myrtaceae |
| 114 | *Tectona grandis* L.f | Saguvani, Thega | ಸಾಗುವಾನಿ | Verbenaceae |
| 115 | *Terminalia arjuna* (Roxb.ex DC) Wight & Aru | Holemathi, Belimatti, Thorematti | ಹೊಳೆಮತ್ತಿ | Combertaceae |
| 116 | *Terminalia bellirica (Gaertn) Roxb* | Shanthimara, Gotingadamara Thare | ಶಾಂತಿಮರ | Combertaceae |
| 116a | *Terminalia alata* Heyne ex Roth | Matti | ಮತ್ತಿ | Combertaceae |
| 117 | *Tetrameles nudiflora* R Br | Cheeni | ಚೀಣಿ | Datiscaceae |
| 118 | *Thespesia populnea* (L.) Sol. ex Corr | Bugarimara, Hoovarasi, Jogiherale, Kandarola | ಬುಗರಿ | Malvaceae |
| 119 | *Vepris bilocularis* (Wight & Aru) Engl. | Doddatoppe | ದೊಡ್ಡತೊಪ್ಪೆ | Rutaceae |
| 120 | *Trewia nudiflora* L. | Kadugumbala Katakamba, Hilaga | ಕಾಡುಗುಂಬಳ | Euphorbiaceae |
| 121 | *Vitex altissima* L.f | Myrole or Thornukki | ಮೈರೋಲೆ | Verbenaceae |
| 122 | *Vitex negundo* L. | Nekki, Lakkigida, Lakkili | ನೆಕ್ಕಿ | Verbenaceae |
| 123 | *Xylia xylocarpa* (Roxb.) Taub | Jambe | ಜಂಬೆ | Fabaceae |
| 124 | *Ziziphus oenoplia* (L.) Mill | Soorimullu | ಸೂರಿಮುಳ್ಳು | Rhamnaceae |

## ದೇವರ ಕಾಡು

'ದೇವರ ಕಾಡು' ನಮ್ಮ ಪೂರ್ವಿಕರು ಭಯ ಭಕ್ತಿಯಿಂದ ಪೂಜಿಸುತ್ತಿದ್ದ, ದೇವ–ದೇವತೆಗಳ ಹೆಸರಿನಲ್ಲಿ ಆರಾಧಿಸುತ್ತಿದ್ದ, ಪವಿತ್ರ ವನಗಳು (Sacred groves). ಸ್ಥಳೀಯರಿಂದ ಸಾಂಪ್ರದಾಯಿಕವಾಗಿ ಸಂರಕ್ಷಿಸಲ್ಪಟ್ಟಿರುವ ಈ ಅರಣ್ಯ ತುಕಡಿಗಳನ್ನು ' *ಜೀವವೈವಿಧ್ಯ ಅಗ್ರತಾಣ*' ಗಳೆಂದು (Bio-diversity hotspots) ಪರಿಗಣಿಸಲಾಗಿದೆ. ನಮ್ಮ ಸಾಂಸ್ಕೃತಿಕ ಸಂಪ್ರದಾಯಗಳಲ್ಲಿ ಪರಿಸರ, ಅರಣ್ಯ ಹಾಗೂ ಅಲ್ಲಿ ಜೀವಿಸುವ ಸಸ್ಯ, ಪ್ರಾಣಿ ಸಂಕುಲಗಳನ್ನು ದೇವರ ಪ್ರತೀಕವೆಂದು ಪರಿಗಣಿಸುವ ಪರಿಕಲ್ಪನೆಯೇ ದೇವರ ಕಾಡುಗಳು. ನಮ್ಮ ಪೂರ್ವಜರು ಅನೇಕ ವೃಕ್ಷಗಳನ್ನು, ಪ್ರಾಣಿ–ಪಕ್ಷಿಗಳನ್ನು, ದೇವರ ಸಮಾನವಾಗಿ ಪರಿಗಣಿಸಿರುವುದರಿಂದಲೇ ಅವುಗಳು ನಮಗೆ ಪವಿತ್ರ ವೃಕ್ಷಗಳು, ಪವಿತ್ರ ಪ್ರಾಣಿಗಳು. ಅಶ್ವತ್ಥ, ಆಲ, ಅತ್ತಿ ಮುಂತಾದ ಜೀವ ಜಾತಿಗಳಿಗೆ ಸೇರಿದ ಬೃಹತ್ ವೃಕ್ಷಗಳನ್ನು ಜೀವವೈವಿಧ್ಯದ ಪರಿಭಾಷೆಯಲ್ಲಿ 'ಕೀಸ್ಟೋನ್' ಪ್ರಭೇದಗಳೆಂದು (Keystone species) ಕರೆಯಲಾಗಿದೆ. ಏಕೆಂದರೆ, ವರ್ಷದ ಎಲ್ಲಾ ಋತುಗಳಲ್ಲಿಯೂ ಈ ಪ್ರಭೇದದ ವೃಕ್ಷಗಳು ಹಕ್ಕಿಗಳಿಗೆ, ಪ್ರಾಣಿಗಳಿಗೆ ಆಹಾರ, ಆಶ್ರಯವನ್ನು ಒದಗಿಸುತ್ತವೆ. ಅರಣ್ಯ ಜೀವಿಯಾದ

ಹುಲಿಯನ್ನು 'ಧ್ವಜರೂಪಿ' ಪ್ರಭೇದವೆಂದು (Flagship species) ಪರಿಗಣಿಸಲಾಗಿದೆ. ಹುಲಿ, ಚಿರತೆಗಳು, ಹರಿಣ ಸಂಕುಲಕ್ಕೆ ಸೇರಿದ ಜಿಂಕೆ, ಕಡವೆ, ಕಾಡುಕುರಿ ಮುಂತಾದುವುಗಳನ್ನು ಅವಲಂಬಿಸಿ ಜೀವಿಸುವುದರಿಂದ, ಪರಿಸರ ಸಮತೋಲನ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. '*ಹುಲಿ ಸಂರಕ್ಷಣಾ ಯೋಜನೆ*' ಯಡಿಯಲ್ಲಿ, ಅವುಗಳ ಆಹಾರವಾದ ಜಿಂಕೆ, ಕಡವೆ, ಕಾಟಿ ಮುಂತಾದ ಸಸ್ಯಾಹಾರಿಗಳನ್ನೂ, ಅವುಗಳ ಜೀವಾವಾಸಗಳನ್ನೂ, ಹುಲಿಗಳ ಜೊತೆಗೆ ಸಂರಕ್ಷಿಸಲಾಗುತ್ತಿದೆ. ಹೀಗೆ, ನಮ್ಮ ಸಾಂಸ್ಕೃತಿಕ ಸಂಪ್ರದಾಯಗಳಲ್ಲಿ, ಈ ಎಲ್ಲಾ ಸಸ್ತನಗಳೊಂದಿಗೆ ಮಂಗ, ಮುಜ್ಜು (ಹನುಮಾನ್ ಲಂಗೂರ್), ಸಿಂಗಳೀಕ ಮುಂತಾದ ಕಪಿಗಳನ್ನೂ ಪವಿತ್ರ ಪ್ರಾಣಿಗಳೆಂದು ಪರಿಗಣಿಸಲಾಗಿದೆ ಹಾಗೂ ಪ್ರತಿ ದೇವ–ದೇವತೆಗಳಿಗೂ ವಾಹನವಾಗಿ ಪ್ರಾಣಿಯನ್ನೋ ಪಕ್ಷಿಯನ್ನೋ ನಿಯೋಜಿಸಲಾಗಿದೆ. ತುಳುನಾಡಿನಲ್ಲಿ ನಾಗಾರಾಧನೆ, ಭೂತಾರಾಧನೆಯ ಸಂಪ್ರದಾಯಗಳು ಪರಿಸರ ಸಂರಕ್ಷಣೆಯ ಜೊತೆಗೆ ಬೆಳೆದುಕೊಂಡು ಬಂದಿರುವುದು ಗಮನಾರ್ಹವಾಗಿದೆ. ದೇವರ ಕಾಡುಗಳ ಬಗ್ಗೆ ನಮ್ಮ ಪೂರ್ವಿಕರಿಗಿದ್ದ ಭಾವನಾತ್ಮಕ ಸಂಬಂಧಗಳು ಕುಸಿಯುತ್ತಿದ್ದು, ಕಾಲಘಟ್ಟದಲ್ಲಿ ಬದಲಾದ ಮನುಷ್ಯನ ಆಸೆಗಳು ಭಕ್ತಿಗಿಂತ ಆದಾಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿರುವುದು ವಿಷಾದನೀಯವಾಗಿದೆ. ಸಾಂಸ್ಕೃತಿಕ, ಆಧ್ಯಾತ್ಮಿಕ, ಧಾರ್ಮಿಕ, ಸಾಮಾಜಿಕ, ನಂಬಿಕೆ, ಶ್ರದ್ಧೆ, ಭಯ ಭಕ್ತಿಗಳು ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವ ಈ ವೈಜ್ಞಾನಿಕ ಯುಗದಲ್ಲಿ 'ನಾಗಕಲ್ಲಿನ ನಂಬಿಕೆಯನ್ನು ಒಂದು ಶೋಷಣೆಯ ಅಸ್ತ್ರವಾಗಿ ಬಳಸಬೇಕಾಗಿಲ್ಲ; ಜನರಿಗೆ ಜ್ಯೋತಿಷದಲ್ಲಿ ನಿಮಿತ್ತ ಕೇಳುವ ಪ್ರವೃತ್ತಿ ಹೆಚ್ಚಾದಂತೆ ನಾಗನ ಉಪಟಳವೂ ಒಂದೇ ಸಮನೆ ಅಧಿಕವಾಗಿ ತೋರುತ್ತದೆ! ಜೀವಂತ ನಾಗನಿಗಿಂತ ಅದೃಶ್ಯ, ಭೂಗತ ನಾಗನದ್ದೇ ದೊಡ್ಡ ಭಾದೆ! ಇದು ತಲತಲಾಂತರಕ್ಕೆ ಬರುತ್ತದಂತೆ! ನಾಗಬೀದಿ, ನಾಗಸನ್ನಿಧಿಗಳ ನಂಬಿಕೆಯಿಂದಾಗಿ, ಅನೇಕರ ಕೈಯ ಹಣ, ಮೈಯ ಆರೋಗ್ಯ, ಮನಸ್ಸಿನ ನೆಮ್ಮದಿ ಸೊರಗುತ್ತಾ ಇದೆ'– ಹೀಗೆ ನಾಗನ ಸಂಬಂಧವಾದ ಕಲಾಪಗಳು, ಪರಿಹಾರ ಕಾರ್ಯಗಳು, ದೊಡ್ಡ ದಂಧೆಯಾಗಿ ಬೆಳೆಯುತ್ತಿರುವ ಬಗ್ಗೆ ಹಿರಿಯ ಜಾನಪದ ವಿದ್ವಾಂಸ, ಡಾ। ಅಮೃತ ಸೋಮೇಶ್ವರವರ ಮೇಲಿನ ಅಭಿಪ್ರಾಯ ಸಮಯೋಜಿತವಾಗಿದೆ.

ಕಾರ್ಕಳ ತಾಲೂಕಿನ ಮಿಯಾರು ಗ್ರಾಮದ 'ನಾಗಬ್ರಹ್ಮಸ್ಥಾನ'ದ ಜೀರ್ಣೋದ್ಧಾರದ ಸಂಬಂಧವಾಗಿ ೧೨ ಡಿಸೆಂಬರ ೨೦೦೪ರಲ್ಲಿಟ್ಟ ಅಷ್ಟಮಂಗಲ ಪ್ರಶ್ನೆ (ದೇವ ಪ್ರಶ್ನೆ) ಯಲ್ಲಿ ಕಂಡುಬಂದ ವಿಷಯವನ್ನು ಇಲ್ಲಿ ಪ್ರಸ್ತುತಪಡಿಸಿದೆ. "ಪುರಾತನದಲ್ಲಿ ಈ ಆರೂಢ ಸ್ಥಳವು (ನಾಗಬ್ರಹ್ಮಸ್ಥಾನವು) ಉತ್ತಮವಾದ ಸುಗಂಧಭರಿತ ಲತಾಬಳ್ಳಿಯಿಂದ ಕೂಡಿದ ಮತ್ತು ಔಷಧ ವೃಕ್ಷ ಲತೆಗಳಿಂದಲೂ ಪರಿಮಳ ಪುಷ್ಪಗಳಿಂದಲೂ ಕೂಡಿ ಪ್ರದಕ್ಷಿಣಾಕಾರ ಹರಿಯುವ ನದಿಯ (ಸ್ವರ್ಣ ನದಿಯ ಕವಲಿನ) ದಡದಲ್ಲಿ ಸುಂದರವಾದ ನಾಗಬ್ರಹ್ಮನ ಬಿಂಬಗಳನ್ನು ಪ್ರತಿಷ್ಠೆ ಮಾಡಿರುತ್ತಾರೆ". ಈ ಸಾನಿಧ್ಯದ ಪರಿಸರದಲ್ಲಿರುವ ಉತ್ತಮವಾದ ದೇವ ಸಂಪತ್ತು ಆಗಿರುವ ವೃಕ್ಷಗಳನ್ನು ಮಾನವರು ಸ್ವಾರ್ಥ ಮತ್ತು ದುರ್ಬುದ್ಧಿಯಿಂದ ಕಡಿದು ಪ್ರಕೃತಿಯನ್ನು ನಾಶಪಡಿಸಿರುವುದರಿಂದ ತನ್ಮೂಲಕ ದೇವಕೋಪಕ್ಕೆ ಕಾರಣವಾಗಿರುವುದರಿಂದ ಸ್ಥಳದಲ್ಲಿನ ದೇವಾನುಕೂಲತೆ ಕಡಿಮೆಯಾಗಿರುವುದಕ್ಕೆ ಕಾರಣವಾಯಿತು. ಹಿಂದೆ ವನದಲ್ಲಿ ನಾಶಮಾಡಿದ ಪರಿಣಾಮವಾಗಿ ತನ್ಮೂಲಕ ದೇವಕೋಪ ಬಂದು, ನಂತರ ನಾಶಪಡಿಸಿದ ಪರಿಣಾಮವಾಗಿ ಸಾನಿಧ್ಯ ಪರಿಸರದಲ್ಲಿ ಅಗ್ನಿಭಯ, ಆರೋಗ್ಯ ತೊಂದರೆ, ಕೃಷಿನಾಶ, ಉನ್ಮಾದಿ ರೋಗಾರಿಷ್ಟಗಳು ಸಂಭವಿಸಿರುತ್ತವೆ. ಇತ್ತೀಚೆಗೆ ಕೆಲವು ವರ್ಷಗಳಲ್ಲಿ ಕ್ಷೇತ್ರ ಪರಿಸರ ವಾಸಿಗಳು, ಅರ್ಚಕರು ತುಂಬ ಗೌರವದಿಂದ ವನವನ್ನು ವನವಾಗಿಯೇ ಉಳಿಸಿಕೊಂಡಿದ್ದಾರೆ. ಈ ಕ್ಷೇತ್ರದ ಜೀರ್ಣೋದ್ಧಾರದ ಕಾರ್ಯಗಳನ್ನು ಶ್ರದ್ಧಾ ಭಕ್ತಿಯಿಂದ ಒಂದಾಗಿ ನಡೆಸಿಕೊಂಡು ಬರಬೇಕು. ಈ ವನದಲ್ಲಿ ಪ್ರವೇಶ ಮಾಡಿ ಬೇಟೆಯಾಡುವುದು ಮುಂತಾದ ಕಾರ್ಯಗಳನ್ನು ಮಾಡಬಾರದು. ವನದಲ್ಲಿ ಮರಗಳನ್ನು ಕಡಿಯದೇ ವನಗಳನ್ನು ವನವನ್ನಾಗಿಯೇ ರಕ್ಷಿಸಿಕೊಂಡು ಬರಬೇಕು. ವನದಲ್ಲಿ ಸುಗಂಧಭರಿತ ಪುಷ್ಪ ವೃಕ್ಷಗಳನ್ನು ನೆಟ್ಟು ಬೆಳೆಸಬಹುದು. ಹೀಗೆ ಮಾಡಿಕೊಂಡು ಬಂದಲ್ಲಿ ಭಾವಿಯಲ್ಲಿ ಸಮಸ್ತ ಭಕ್ತ ಜನತೆಗೆ ಸಕಲ ವಿಧವಾಗಿ ಶ್ರೇಯಸ್ಸಿಗೆ ಅವಕಾಶವಿರುವುದೆಂದು ಅಷ್ಟಮಂಗಲ ಪ್ರಶ್ನೆಯಲ್ಲಿ ಕಂಡುಬರುತ್ತದೆ.

## ಉಡುಪಿ ಜಿಲ್ಲೆಯ ದೇವರ ಕಾಡುಗಳ ವೈವಿಧ್ಯ

ದಕ್ಷಿಣ ಕನ್ನಡ ಜಿಲ್ಲೆಯಿಂದ ೧೯೯೭ರಲ್ಲಿ ಪ್ರತ್ಯೇಕಿಸಲ್ಪಟ್ಟ ಉಡುಪಿ ಜಿಲ್ಲೆ ಭಾವನಾತ್ಮಕವಾಗಿಯೂ ಸಾಂಸ್ಕೃತಿಕ ವಾಗಿಯೂ ಇಂದಿಗೂ ಅದು ದಕ್ಷಿಣ ಕನ್ನಡದ ಭಾಗವೇ ಎಂದು ಅನಿಸುವುದಿದೆ. ಏಕೆಂದರೆ, ಸಾಂಸ್ಕೃತಿಕವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತೆ ಉಡುಪಿ ಜಿಲ್ಲೆಯಲ್ಲಿಯೂ ನಾಗಾರಾಧನೆ, ಭೂತಾರಾಧನೆ, ಜಾತ್ರೆ–ಉತ್ಸವಗಳು, ತಾಳಮದ್ದಲೆ, ಯಕ್ಷಗಾನ ಬಯಲಾಟ, ಕಂಬಳ, ಕೋಳಿ ಅಂಕ ಇತ್ಯಾದಿ ಜಾನಪದೀಯ ಕಲೆಗಳು ಜೀವಂತವಾಗಿ ಮುಂದುವರಿದಿವೆ. ನಾಗಶಿಲೆಗಳನ್ನಿಟ್ಟು, ಪೂಜಿಸುವ ಸಾವಿರಾರು ನಾಗಬನಗಳೂ ಕೆಲವೊಂದು ಆದಿಮ ಸಂಸ್ಕೃತಿಯ ಕಾಡ್ಯನ ಮನೆಗಳೂ ಈ ಜಿಲ್ಲೆಯಲ್ಲಿವೆ. ಕೆಲವು ನಾಗಬನಗಳು ಕಾಂಕ್ರೀಟು ಕಾಡುಗಳಾಗಿವೆ. ಕೆಲವು ಕಡೆಗಳಲ್ಲಿ ದೇವರ ಕಾಡುಗಳು ಉಳಿದುಕೊಂಡಿವೆ. ಈ ಜಿಲ್ಲೆಯ ವ್ಯಾಪ್ತಿಯೊಳಗಿರುವ ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಕೊಲ್ಲೂರು ಮೂಕಾಂಬಿಕಾ ಮತ್ತು ಸೋಮೇಶ್ವರ ಅಭಯಾರಣ್ಯಗಳಿವೆ ಹಾಗೂ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಒಂದು ಭಾಗವಿದೆ. ಈ ಜಿಲ್ಲೆಯ ಕಾಡುಗಳಲ್ಲಿ ಹುಲಿ, ಚಿರತೆ, ಕಾಟಿ, ಕಡವೆ, ಜಿಂಕೆಗಳ ಜೊತೆಗೆ ವಿನಾಶದಂಚಿನಲ್ಲಿರುವ ಕರಿಬಣ್ಣದ ಕಪಿ ಸಿಂಗಳೀಕನನ್ನು ಕಾಣಬಹುದಾಗಿದೆ. ಈ ಜಿಲ್ಲೆಯ ಅಳಿವೆ ಪ್ರದೇಶಗಳಲ್ಲಿ ಅತಿ ಮಹತ್ವದ ಅನೇಕ ಕಾಂಡ್ಲಾ ಕಾಡುಗಳಿವೆ.

ಉಡುಪಿ ಜಿಲ್ಲೆಯ ವೈಶಿಷ್ಟ್ಯಪೂರ್ಣ ಆರಾಧನಾ ಕ್ರಮಗಳಲ್ಲಿ 'ಸಿರಿ ಜಾತ್ರೆ' ಗೆ ತನ್ನದೇ ಆದ ಹಿನ್ನೆಲೆ ಇದೆ. ನಂದಳಿಕೆಯ ಮೂಲವಾಗಿ ಬೊಳ್ಯೊಟ್ಟು, ಕವತಾರು (ದ. ಕ. ಜಿಲ್ಲೆ), ಹಿರಿಯಡ್ಕಗಳೆಂಬ ಪ್ರಸಿದ್ಧ ಸಿರಿ ಜಾತ್ರೆಗಳು ನಡೆಯುವ ಕ್ಷೇತ್ರಗಳಿಗೆ ನಂದಳಿಕೆ ಮೂಲ. ನಾಲ್ಕು ಸ್ಥಾನ ನಂದಳಿಕೆ ಶ್ರೀ ಮಹಾಲಿಂಗೇಶ್ವರ ಕ್ಷೇತ್ರ ದೇವ–ದೈವ ಸಾನಿಧ್ಯಗಳ ಸಮುಚ್ಚಯವಾಗಿರುವುದರಿಂದ ಸಿರಿಗಳ ಮೂಲ ಸ್ಥಾನವೆಂದೇ ನಂಬಲಾಗಿದೆ. ದೈವಗಳ ಗುಂಪು, ಸಿರಿಗಳು, ಮಹಾಲಿಂಗೇಶ್ವರ ದೇವರ ಪರಿಹಾರ ಹಾಗೂ ಬ್ರಹ್ಮಸ್ಥಾನದ ಶಕ್ತಿಗಳು – ಈ ನಾಲ್ಕು ಶಕ್ತಿಗಳು ಒಂದೇ ಸ್ಥಾನದಲ್ಲಿ ನೆಲೆ ಪಡೆದಿರುವುದರಿಂದ ನಾಲ್ಕು ಸ್ಥಾನವೆಂಬ ವಿಶೇಷಣ ನಂದಳಿಕೆಗೆ ಒದಗಿ ಬಂದಿರಬಹುದು ಎನ್ನಲಾಗಿದೆ. ನಂದಳಿಕೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಾರ್ಷಿಕ ಆಯನೋತ್ಸವ (ಮಹೋತ್ಸವ)ದ ಸಂದರ್ಭದಲ್ಲಿ ಶ್ರೀ ಉರಿಬ್ರಹ್ಮ, ಗಣಪತಿ, ವೀರಭದ್ರ, ನಂದಿಗೋಣ, ಸಿರಿ, ಕುಮಾರ, ಅಬ್ಬಗ–ದಾರಗ, ಖಡ್ಗೇಶ್ವರಿ, ಚಾಮುಂಡಿ, ಅಣ್ಣಪ್ಪ, ಕ್ಷೇತ್ರಪಾಲ ಭೂತರಾಜ, ಗಜಮಲ್ಲ, ನಾಗ ಮುಂತಾದ ಮಹಾದೇವನ ಪರಿವಾರಕ್ಕೆ ವಿಶೇಷ ಪೂಜೆ ಸೇವೆಗಳು ನಡೆಯುವ ಪರ್ವಕಾಲವೇ 'ಸಿರಿ' ಜಾತ್ರೆ ಎಂದು ಖ್ಯಾತಿ ಹೊಂದಿದೆ. 'ಸಿರಿಗಳ ಹುಟ್ಟು ನಂದಳಿಕೆ, ಬೆಳವಣಿಗೆ ಹಿರಿಯಡಕ ಅವತಾರ ಕವತ್ತಾರಿನಲ್ಲಿ' ಎಂಬ ಮಾತಿದೆ. ಸಿರಿ ಜಾತ್ರೆ ವೇಳೆ ಸೇವೆಗಾಗಿ ಕಾಣಿಕೆ–ಹರಕೆ ಸಲ್ಲಿಸಲು ಆಗಮಿಸುವ ಭಕ್ತರಿಗೆ ಮಹಾಲಿಂಗೇಶ್ವರನೇ ದೇವರು. ಇಲ್ಲಿರುವ ದೈವಗಳೇ ಆರಾಧ್ಯ ದೈವಗಳು. ನಾಗನೇ ಮೂಲದ ನಾಗ. ಆದುದರಿಂದಲೇ ನಂದಳಿಕೆ ಪ್ರಸಿದ್ಧ ಮೂಲಸ್ಥಾನವಾಗಿದೆ. ಸುಮಾರು ೨೦೦ ವರ್ಷ ಇತಿಹಾಸವಿರುವ ನಾಗಮಂಡಲದ ಶಿಲ್ಪವಿರುವ ಅಪೂರ್ವ ನಾಗಬಿಂಬವೊಂದು ನಂದಳಿಕೆಯ ಮೂಡು ನಾಗಾಲಯದಲ್ಲಿದೆ. ಹೀಗೆ ನಂದಳಿಕೆಯಲ್ಲಿ ಒಂದು ಆದಿಮ ಸಂಸ್ಕೃತಿಯ ಇತಿಹಾಸವಿರುವುದನ್ನು ಗಮನಿಸಬಹುದಾಗಿದೆ.

ನಾಗಬನಗಳಲ್ಲಿ ಆರಾಧಿಸುವ ದೈವ ದೇವರುಗಳು, ಆಚರಿಸುವ ಉತ್ಸವಗಳು, ಭೂತಸ್ಥಾನ/ದೈವಸ್ಥಾನಗಳಲ್ಲಿ ಆರಾಧಿಸಲ್ಪಡುವ ಭೂತಗಳು, ದೈವ ದೇವತೆಗಳು, ದೇವರ ಕಾಡುಗಳಲ್ಲಿ ಅರ್ಪಿಸುವ ಬಲಿ ಅಥವಾ ಆಹುತಿಗಳು, ಆರಾಧನಾ ವಿಧಾನಗಳು, ಧಾರ್ಮಿಕ ಕಟ್ಟುಪಾಡುಗಳು, ದೇವಾಲಯಗಳ ಪ್ರಧಾನ ದೇವರುಗಳೊಂದಿಗೆ ಕ್ಷೇತ್ರಗಳ ದೈವಭೂತಗಳ ನಡುವಿನ ಸಂಬಂಧಗಳು ಇತ್ಯಾದಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಂತೆ ಉಡುಪಿ ಜಿಲ್ಲೆಯಲ್ಲೂ ಇವೆ. ಉಡುಪಿ ಜಿಲ್ಲೆಯ ವಿಸ್ತೀರ್ಣ ೩.೮೮೦ ಚ.ಕಿ.ಮೀ. ಮತ್ತು ಜನಸಂಖ್ಯೆ ೧೧,೧೨,೨೪೩. ಜಿಲ್ಲೆಯಿಂದ ಆಯ್ದ ೬ ಗ್ರಾಮಗಳಲ್ಲಿ ಒಟ್ಟು ೪೮೨ ದೇವರ

ಕಾಡುಗಳನ್ನು ದಾಖಲಿಸಲಾಗಿದೆ. ಅವುಗಳ ಒಟ್ಟು ವಿಸ್ತೀರ್ಣ ೨೩.೩೨ ಎಕರೆಗಳು. ಇವುಗಳಲ್ಲಿ ೧೨.೪೪ ಎಕರೆ ಪ್ರದೇಶದಲ್ಲಿ ೨೫೪ ನಾಗಬನಗಳಿದ್ದು, ೧೦.೮೮ ಎಕರೆ ಪ್ರದೇಶದಲ್ಲಿ ೨೨೮ ಭೂತಸ್ಥಾನಗಳಿವೆ.

## ಪ್ರಾಣಿ ಸಂಪತ್ತು

ಜಿಲ್ಲೆಯು ಸಮೃದ್ಧ ಹಾಗೂ ವರ್ಣರಂಜಿತವಾದ ವನ್ಯಜೀವಿ ಸಂಪತ್ತನ್ನು ಹೊಂದಿದೆ. ಭಾರೀ ಗಾತ್ರದ ಕಶೇರುಕಗಳನ್ನೊಳಗೊಂಡಂತೆ ಹಿರಿಕಿರಿ ಗಾತ್ರದ ಅನೇಕ ಪ್ರಾಣಿ ವರ್ಗಗಳಿಗೆ ಇದು ಹಿತಕರವಾದ ನೆಲೆಯಾಗಿದೆ. ಪ್ರಾಣಿಗಳ ಸಮುದಾಯ, ಅದರಲ್ಲೂ ಸ್ಥೂಲಕಾಯದ ಸಸ್ತನಿಗಳನ್ನು ಹೊಂದಿರುವುದು ಒಂದು ಪ್ರದೇಶದ ಸಸ್ಯ ಸಂಪತ್ತಿನ ಪರಿಸರಕ್ಕೆ ಬದ್ಧವಾಗಿದೆ. ಪ್ರಾಣಿಗಳು ಆಹಾರಕ್ಕೆ ಪರಾವಲಂಬಿಗಳಾಗಿರುವುದರಿಂದ ಸಸ್ಯಗಳ ಹಾಗೂ ಪ್ರಾಣಿಗಳ ವೈವಿಧ್ಯವಿರುವ ಸೂಕ್ತ ಪರಿಸರದಲ್ಲಿ ಪ್ರಾಣಿಗಳಲ್ಲಿ ವೈವಿಧ್ಯ ಕಾಣಬಹುದು. ಆಹಾರದ ಸಾಧ್ಯತೆಯ ಬಗ್ಗೆ ಪರಿಶೀಲಿಸಿದರೆ ನಿತ್ಯಹರಿದ್ವರ್ಣದ ಕಾಡುಗಳು ಹೆಚ್ಚಾಗಿ ಕೋತಿಗಳಂಥ ವೃಕ್ಷವಾಸಿಗಳಿಗೆ ತೀರ ಅನುಕೂಲ. ಎಲೆ ಉದುರುವ ಕಾಡುಗಳು ಹಿರಿ ಗಾತ್ರದ ಸಸ್ಯಾಹಾರಿ ಪ್ರಾಣಿಗಳಾದ ಕಾಡೆಮ್ಮೆ, ಆನೆ, ಜಿಂಕೆ ಇತ್ಯಾದಿಗಳಿಗೆ ಸೂಕ್ತ. ವನ್ಯಜೀವಿಗಳನ್ನು ಹೊಂದಿರುವ ಕರ್ನಾಟಕದ ಕಾಡುಗಳ ಆರು ಪ್ರದೇಶಗಳಲ್ಲಿ ಕರಾವಳಿ ಮತ್ತು ಪಶ್ಚಿಮಘಟ್ಟಗಳ ಶಿಖರಗಳ ಸರಣಿ ಪ್ರದೇಶಗಳು ಜಿಲ್ಲೆಯ ಎಲ್ಲೆಯಲ್ಲಿವೆ.

ನಿತ್ಯಹರಿದ್ವರ್ಣದ ಸಸ್ಯವರ್ಗ ಕಾಡುಗಳಲ್ಲಿ ಒಳ್ಳೆಯ ಅಚ್ಛಾದನವಿದ್ದು ಕೆಲವೊಮ್ಮೆ ಮಾನವನ ಓಡಾಟದಿಂದ ಅವು ತೆರೆದಿವೆ. ಈ ಅರಣ್ಯಗಳ ನೆಲವು ತರಗೆಲೆಗಳಿಂದ ಮುಚ್ಚಿದ್ದು ಅಲ್ಲಿ ಹುಲ್ಲು ಕಡಿಮೆ. ಇದರಿಂದ ಮೇಯುವ ಗೊರಸುಳ್ಳ ಪ್ರಾಣಿ ಹಾಗೂ ಆನೆಗಳಿಗೆ ಆಶ್ರಯವನ್ನು ನೀಡುವುದಕ್ಕೆ ಬದಲಾಗಿ ವೃಕ್ಷವಾಸಿಗಳಾದ ಕೋತಿ, ಅಳಿಲುಗಳಂಥ ಕಿರು ಕಶೇರುಕ ವರ್ಗಗಳಿಗೆ ಅವು ವಾಸಸ್ಥಳವಾಗಿದೆ. ಇದಲ್ಲದೆ ಕರಿಕರಡಿ, ಕಾಡುಹಂದಿ ಮುಂತಾದ ದ್ವಂದ್ವಾಹಾರಿ ಪ್ರಾಣಿಗಳು ಈ ಪ್ರದೇಶದಲ್ಲಿ ಸಿಗುತ್ತವೆ. ಈ ಪ್ರಾಣಿಗಳು ಅಲ್ಪಾಹಾರದಿಂದ ಬದುಕಬಲ್ಲವು. ಬಿದಿರು, ಕೆಳಮಟ್ಟದ ಎಲೆಗಳ ಗಿಡಗಳು ಇಲ್ಲವಾದ್ದರಿಂದ ಈ ಅರಣ್ಯಗಳು ಸಸ್ಯಾಹಾರಿ ಪ್ರಾಣಿಗಳಿಗೆ ಸೂಕ್ತವಲ್ಲ. ಆದರೆ ತೇವಾಂಶದ ಹೆಚ್ಚಳ ಹಾಗೂ ಸಾಕಷ್ಟು ಆಸರೆ ಇರುವುದರಿಂದ ಕೀಟಗಳು, ದ್ವಿಚರಗಳು (amphibia) ಮತ್ತು ಉರಗಗಳು (reptiles) ಇಲ್ಲಿ ವಿಪುಲವಾಗಿವೆ. ಈ ಉನ್ನತಾಚ್ಛಾದನದ ಅರಣ್ಯವು ವಿರಳವಾಗಿ ಅನ್ಯ ಸಸ್ಯಗಳ ದಾಳಿಯಾದಾಗ ಅದು ಮೇಯುವ ಪ್ರಾಣಿಗಳಿಗೆ ಸೂಕ್ತ ತಾಣವಾಗುತ್ತದೆ. ಉದುರೆಲೆಯ ಕಾಡುಗಳು ಹಾಗೂ ಹುಲ್ಲುಗಾವಲುಗಳು ಮತ್ತು ಅವುಗಳ ಪರಿಸರವು ಸಸ್ತನೀ ವರ್ಗದ ಪ್ರಾಣಿಗಳಿಗೆ ಉತ್ಕೃಷ್ಟ ನೆಲೆಗಳಾಗಿವೆ. ನಿತ್ಯ ಹರಿದ್ವರ್ಣದ ಅಥವಾ ಉದುರು ಎಲೆಗಳ ಅರಣ್ಯಗಳು ಅವದೆಸೆಗೊಳಗಾದರೂ ಹುಲ್ಲು ಮತ್ತು ಪೊದೆಗಳ ಬೆಳವಣಿಗೆಗೆ ಅವಕಾಶವಿತ್ತು. ದೊಡ್ಡ ವನ್ಯಪ್ರಾಣಿಗಳ ನಿವಾಸಕ್ಕೆ ಅವು ಅಣಿಯಾಗುತ್ತವೆ. ಆದರೆ ಮಿತಿಮೀರಿದ ಅರಣ್ಯ ಕ್ಷಯವು ಶೀಘ್ರವಾಗಿ ಹಬ್ಬುವ ಲಂಟನಾ ಮತ್ತು ಯುಪೆರೆಟೋರಿಯಂ (euparatorium) ನಂಥ ಕಳೆಗಳ ಬೆಳೆಗೆ ಅವಕಾಶವಾಗಿ ಇನ್ನೂ ಒಳ್ಳೆಯ ಜಾತಿಯ ಸಸ್ಯಗಳ ಬೆಳವಣಿಗೆಗೆ ಅಡಚಣೆಯುಂಟಾಗುತ್ತದೆ. ಕೆಲವು ಪ್ರಾಣಿಗಳು ಕಾಡುಹಣ್ಣು (berries), ಹೂ ಮುಂತಾದ ವಸ್ತುಗಳನ್ನು ತಿಂದು ಬದುಕುತ್ತವೆಂಬ ತೋರಿಕೆಯ ಲಾಭ ಕಂಡುಬಂದರೂ ಅದು ಇತರ ಹಾನಿಕಾರಕ ಸಂಗತಿಗಳಿಂದ ನಿಷ್ಫಲವಾಗುತ್ತದೆ. ಕರಾವಳಿ ಪ್ರದೇಶದಲ್ಲಿನ ದಟ್ಟವಾದ ಕಾಡು ಹಿಂದೆ ವನ್ಯಜೀವಿಗಳ ನೆಲೆ ಬೀಡಾಗಿತ್ತು. ಆದರೆ ಈಗ ಈ ಪ್ರದೇಶಗಳು ವನ್ಯಜೀವಿಗಳ ವಾಸಕ್ಕೆ ಸೂಕ್ತ ಪರಿಸರವನ್ನು ಹೊಂದಿಲ್ಲ. ಮರಗಿಡಗಳನ್ನು ಕಡಿಯುವಿಕೆ ಮತ್ತು ಅರಣ್ಯಗಳ ವಿಭಜನೆಯಿಂದ ವನ್ಯ ಜೀವಿಗಳ ವಾಸಕ್ಕೆ ಹಿತಕರವಾದ ಪರಿಸರ ನಾಶವಾಗಿದೆ. ಕರಾವಳಿಯ ಜಲವಾಸಿಗಳೆಂದರೆ ಕಡಲ ಆಮೆ ಮತ್ತು ಕಡಲು ಹಾವು. ಬೆಲಿನಾಪ್ಟಿರ (Balaenoptera) ಎಂಬ ಕುಲಕ್ಕೆ ಸೇರಿದ ತಿಮಿಂಗಿಲವು ಸಮುದ್ರಪ್ರದೇಶಗಳಲ್ಲಿ ವಾಸಿಸುತ್ತವೆ, ಕೊಲ್ಲಿ (bay), ಖಾರಿ (lagon) ಮತ್ತು ಸಾಗರ ತೀರಪ್ರದೇಶಗಳಲ್ಲಿ ಕಡಲುದನಗಳು (sea-cow; Dugong) ವಾಸಿಸುವುವು. ಜಿಲ್ಲೆಯಲ್ಲಿ ವಿನಾಶದ ಅಂಚಿನಲ್ಲಿರುವ ಮತ್ತು ನಶಿಸುವ ಸಾಧ್ಯತೆ ಇರುವ ಪ್ರಾಣಿಗಳ ಪ್ರಭೇದಗಳ ಪಟ್ಟಿ ಕೆಳಗಿನಂತಿದೆ.

**ಕೋಷ್ಟಕ ೧.೫ : ವಿನಾಶದ ಅಂಚಿನಲ್ಲಿರುವ ಪ್ರಾಣಿಗಳ ವಿವರ – ಉಡುಪಿ ಜಿಲ್ಲೆ**

| Species ಪ್ರಭೇದ | Type | ವಿಧ | Zone | ವಲಯ |
|---|---|---|---|---|
| *Avicennia officinalis* | Mangrove | ಮ್ಯಾಂಗ್ರೋವ್ | Coastal saline | ಕರಾವಳಿ ಉಪ್ಪು |
| *A.marina* | Mangrove | ಮ್ಯಾಂಗ್ರೋವ್ | Coastal saline | ಕರಾವಳಿ ಉಪ್ಪು |
| *Kandelia kandel* | Mangrove | ಮ್ಯಾಂಗ್ರೋವ್ | Coastal saline | ಕರಾವಳಿ ಉಪ್ಪು |
| *Rhizophora mucronata* | Mangrove | ಮ್ಯಾಂಗ್ರೋವ್ | Coastal saline | ಕರಾವಳಿ ಉಪ್ಪು |
| *Sonneratia alba* | Mangrove | ಮ್ಯಾಂಗ್ರೋವ್ | Coastal saline | ಕರಾವಳಿ ಉಪ್ಪು |
| *Aegiceras corniculatum* | Mangrove | ಮ್ಯಾಂಗ್ರೋವ್ | Upstream | ನೀರಿನ ಹರಿವಿನ ಮೇಲ್ಭಾಗ |
| *Excoecaria agallocha* | Mangrove | ಮ್ಯಾಂಗ್ರೋವ್ | Upstream | ನೀರಿನ ಹರಿವಿನ ಮೇಲ್ಭಾಗ |
| *Rhizophora conjugata* | Mangrove | ಮ್ಯಾಂಗ್ರೋವ್ | Upstream | ನೀರಿನ ಹರಿವಿನ ಮೇಲ್ಭಾಗ |
| *Sonneratia caseolaris* | Mangrove | ಮ್ಯಾಂಗ್ರೋವ್ | Upstream | ನೀರಿನ ಹರಿವಿನ ಮೇಲ್ಭಾಗ |
| *Salvadora persica* | Shrub | ಪೊದೆ | Upstream | ನೀರಿನ ಹರಿವಿನ ಮೇಲ್ಭಾಗ |
| *Ierodendrum inerme* | Shrub | ಪೊದೆ | Upstream | ನೀರಿನ ಹರಿವಿನ ಮೇಲ್ಭಾಗ |
| *Acanthus ilicifolius* | Shrub | ಪೊದೆ | Upstream | ನೀರಿನ ಹರಿವಿನ ಮೇಲ್ಭಾಗ |
| *Enteromorpha intestinalis* | Alga | | Backwaters | ಹಿನ್ನೀರು |
| *Cheatomaorpha lineum* | Alga | | Backwaters | ಹಿನ್ನೀರು |
| *Gracilaia verrucosa* | Alga | | Backwater | ಹಿನ್ನೀರು |
| *Ipomoea perscaprae* | Shrub | ಪೊದೆ | Coastal dune | ಕರಾವಳಿಯ ದಂಡೆ |
| *Asparagus dumosus* | Shrub | ಪೊದೆ | Coastal dune | ಕರಾವಳಿಯ ದಂಡೆ |
| *Spinifex littoreus* | Shrub | ಪೊದೆ | Coastal dune | ಕರಾವಳಿಯ ದಂಡೆ |
| *Cyperus aristatus* | Shrub | ಪೊದೆ | Coastal dune | ಕರಾವಳಿಯ ದಂಡೆ |
| *Sporoborus tremulus* | Shrub | ಪೊದೆ | Coastal dune | ಕರಾವಳಿಯ ದಂಡೆ |
| *Leucas aspera* | Shrub | ಪೊದೆ | Coastal dune | ಕರಾವಳಿಯ ದಂಡೆ |
| *Thespsia populnea* | Tree | ಮರ | Coastal dune | ಕರಾವಳಿಯ ದಂಡೆ |
| *Casuarina equisetifolia* | Tree | ಮರ | Coastal dune | ಕರಾವಳಿಯ ದಂಡೆ |
| *Vitex negundo* | Shrub | ಪೊದೆ | Back shore | ಸಮುದ್ರದ ಹಿನ್ನೀರು |
| *Pandanus Sp.* | Shrub | ಪೊದೆ | Back shore | ಸಮುದ್ರದ ಹಿನ್ನೀರು |
| *Durana repens* | Shrub | ಪೊದೆ | Back shore | ಸಮುದ್ರದ ಹಿನ್ನೀರು |
| *Anacardium* | Tree | ಮರ | Back shore | ಸಮುದ್ರದ ಹಿನ್ನೀರು |

| ಪ್ರಭೇದ | | ವಿಧ | ವಲಯ | ಪ್ರಸ್ತುತ ಸ್ಥಿತಿ |
|---|---|---|---|---|
| *occidentale* | | | | |
| *Cocos nucifera* | Tree | ಮರ | Back shore | ಸಮುದ್ರದ ಹಿನ್ನೀರು |

**ಕೋಷ್ಟಕ ೧.೬ : ಅಪರೂಪದ ಮತ್ತು ಅಪಾಯಕ್ಕೊಳಗಾದ ಕರಾವಳಿಯ ಸಸ್ಯ ಮತ್ತು ಪ್ರಾಣಿ ಸಂಕುಲ**

| ಪ್ರಭೇದ | ವಿಧ | ವಲಯ | ಪ್ರಸ್ತುತ ಸ್ಥಿತಿ |
|---|---|---|---|
| *Periophthalmus Sp.* | Mud Shipper | Intertidal | uncommon |
| *Fishing cat* | Mammal | Lagoon | Rare* |
| *Otter* | Mammal | Lagoon | Rare* |
| *Osprey* | Bird | Lagoon | Endangered |
| *Green Turtle* | Reptile | Sea | rare* |
| *Olive Ridley* | Reptile | Sea | rare* |
| *Water Monitor Varanus salvator* | Reptile | Lagoon | Threatened* |
| *Common monitor V.benghalesnsis* | Reptile | Lagoon | Threatened* |
| *Estuarine Crocodile Crocodilus porosus* | Reptile | Lagoon | V.rare* |
| *Cryptocoryne cognatoides* | Marsh plant | Coast | rare** |
| *Hubbarda heptaneuron* | Grass | River | Extinct (?)** |
| *Nelumbo mucifera* | Plant | Ponds | Heavily used |
| *Hydrobryopsis sessilis* | Plant | Stream | rare |
| *Aponogeton appendiculatus* | Plant | Coast | Threatened |

### ಪಕ್ಷಿ ಸಂಕುಲ

ಉಡುಪಿ ಜಿಲ್ಲೆಯಲ್ಲಿ ಪಕ್ಷಿಗಳ ವೈವಿಧ್ಯಕ್ಕೆ ಕೊರತೆ ಇಲ್ಲ. ನಿತ್ಯ ಹರಿದ್ವರ್ಣ ಕಾಡುಗಳಿಂದ ಹಿಡಿದು ಸಮುದ್ರತೀರ ದ್ವೀಪಗಳವರೆಗಿನ ವಿಭಿನ್ನ ಆವಾಸಗಳು ಪಕ್ಷಿ ಸಂಕುಲಕ್ಕೆ ಅನುಕೂಲಕರವಾಗಿವೆ. ಇವುಗಳಲ್ಲಿ ಕಾಡು ಪಕ್ಷಿಗಳು, ಜಲಪಕ್ಷಿಗಳು, ಸಮುದ್ರ ಪಕ್ಷಿಗಳು ಹಾಗೂ ಸಮುದ್ರತೀರದ ಪಕ್ಷಿಗಳು ಸೇರಿವೆ. ಪಶ್ಚಿಮ ಘಟ್ಟದ ನಿತ್ಯ ಹರಿದ್ವರ್ಣ ಕಾಡು ಕಾಡುಪಕ್ಷಿಗಳ ತಾಣವಾದರೆ, ಹಿನ್ನೀರು, ಜಲಾಶಯ, ಕೆರೆ, ನದಿಗಳು ಜಲಪಕ್ಷಿಗಳಿಗೆ ಆಶ್ರಯತಾಣಗಳಾಗಿವೆ. ಸಮುದ್ರ ತೀರವು ವಿಶೇಷವಾದ ಜೀವಾವಾಸವಾಗಿದ್ದು, ಇಲ್ಲಿ ಕಂಡುಬರುವ ಹಕ್ಕಿಗಳೂ ಅಪೂರ್ವವಾದುವು.

ಮಳೆ ಕೋಗಿಲೆಯೆಂತಲೇ ಪ್ರಸಿದ್ಧವಾಗಿರುವ ಹಾರ್ನ್‌ಬಿಲ್ ಪಕ್ಷಿಗಳು ಪಶ್ಚಿಮ ಘಟ್ಟದ ಕಾಡುಗಳ ಸ್ಥಳೀಯ ಪ್ರಭೇದಗಳು. ವೈಡ್ ಹಾರ್ನ್‌ಬಿಲ್‌ಗಳು ಅಪರೂಪವಾಗುತ್ತಿದ್ದು, ಕಾಡುಗಳ ನಾಶ ಅವುಗಳ ಮೇಲೆ ಭಾರೀ ಪರಿಣಾಮ ಬೀರಿದೆ. ಬಿಳಿ ಹೊಟ್ಟೆಯ ಸಮುದ್ರ ಗಿಡುಗ ಅಪಾಯ ಎದುರಿಸುತ್ತಿರುವ ಜಿಲ್ಲೆಯ ಮತ್ತೊಂದು ವಿಶಿಷ್ಟ ಪಕ್ಷಿಯಾಗಿದ್ದು, ವನ್ಯಜೀವಿ (ಸಂರಕ್ಷಣೆ) ಕಾಯ್ದೆಯಲ್ಲಿ ರಕ್ಷಿಸಲ್ಪಟ್ಟ ಪಕ್ಷಿಯಾಗಿದೆ. ಸಿಲೋನ್ ಫ್ರಾಗ್‌ಮೌತ್ (ಕಪ್ಪೆಬಾಯಿ ಹಕ್ಕಿ), ಘಟ್ಟ ಪ್ರದೇಶದ ಕಪ್ಪು ಡೇಂಗೆ, ಇಂಪೀರಿಯಲ್ ಗ್ರೀನ್ ಪಿಜನ್ (ಪಾರಿವಾಳ), ನೆತ್ತಿಂಗ (ನೈಟ್‌ಜಾರ್) ಲಾಫಿಂಗ್ ಥ್ರಶ್, ಎಮರಾಲ್ಡ್ ಕಪೋತಮೊದಲಾದವು ಇತರ ವಿಶೇಷ ಪಕ್ಷಿಗಳಾಗಿವೆ. ನೀರ್ನಡಿಗೆ ಹಕ್ಕಿಗಳು, ಜಲಪಕ್ಷಿ ಸಂಕುಲವೂ ಸಾಕಷ್ಟಿವೆ. ಕೆಂಗಂದು ಕೊಕ್ಕರೆ (Heron) ಬೂದು ಕೊಕ್ಕರೆ, ಕೆಂಗಂದು ನಾರಾಯಣಿ, ಹಾವಕ್ಕಿ, ನೀರುಕಾಗೆ, ಗುಳುಮುಳುಕ, ನೀರು ಕೋಳಿಗಳು, ವಿವಿಧ ರೀತಿಯ ಬಾತುಕೋಳಿಗಳು, ಕ್ರೌಂಚ ಮುಂತಾದ ವಿವಿಧ ಜಲಪಕ್ಷಿಗಳಿವೆ. ನಾಮದ ಹಕ್ಕಿ ಪುಂಡುಕೋಳಿ, ಮಿಂಚುಳ್ಳಿಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಜಾಡಮಾಲಿ ಹಕ್ಕಿಗಳಾದ ಗಿಡುಗ,

| ಹಕ್ಕಿಗಳ ಹೆಸರು | ವೈಜ್ಞಾನಿಕ ಹೆಸರು | ವಲಸೆ ಹೊರಡುವ ಪ್ರದೇಶ |
|---|---|---|

ಡೇಂಗೆ, ಹದ್ದು, ಕಾಗೆಗಳು ವಿಫುಲವಾಗಿವೆ. ವರ್ಷಂಪ್ರತಿ ಆಗಸ್ಟ್ ತಿಂಗಳಿನಿಂದ ಮಾರ್ಚ್, ಏಪ್ರಿಲ್ ತಿಂಗಳವರೆಗೆ ಉತ್ತರಾರ್ಧಗೋಳದಿಂದ ಅನೇಕ ಹಕ್ಕಿಗಳು ಕರಾವಳಿ ಜಿಲ್ಲೆಗಳಿಗೆ ವಲಸೆ ಬರುತ್ತವೆ. ಸುಮಾರು ೩೫ ವಿಧದ ಪಕ್ಷಿಗಳು ವಲಸೆ ಬಂದಿರುವುದನ್ನು ಗುರುತಿಸಲಾಗಿದೆ. ಅವುಗಳ ವಿವರಗಳನ್ನು ಮುಂದಿನ ಕೋಷ್ಟಕದಲ್ಲಿ ನೀಡಿದೆ.

**ಕೋಷ್ಟಕ ೧.೭ : ಚಳಿಗಾಲದಲ್ಲಿ ವಲಸೆ ಬರುವ ಹಕ್ಕಿಗಳು**

| ಹಕ್ಕಿಗಳ ಹೆಸರು | ವೈಜ್ಞಾನಿಕ ಹೆಸರು | ವಲಸೆ ಹೊರಡುವ ಪ್ರದೇಶ |
|---|---|---|
| ಸೋಲಾರಿ ಹಕ್ಕಿ (ಟೀಲ್) | ಅನಾಸ್ ಕ್ರೆಕ್ಕಾ (*Anas crecca*) | ಯೂರೊಪು–ಸೈಬೀರಿಯ |
| ನೀಲಿ ರೆಕ್ಕೆ ಸೋಲಾರಿ (ಗಾರ್ಗನಿ) | ಅನಾಸ್ ಕೆರ್ಕೆಡುಲಾ (*A.querquedula*) | .....”...... |
| ಸೂಜಿಬಾಲದ ಸೋಲಾರಿ (ಪಿನ್‌ಟೈಲ್) | ಅನಾಸ್ ಅಕ್ಯುಟಾ (*A. acuta*) | ಉತ್ತರ ಯುರೋಪ್ |
| ನೀಲಿ ಬಾಲದ ಜೇನ್ನೋಣಬಾಕ | ಮಿರಾಪ್ಸ್ ಫಿಲಿಪೈನಸ್ (*Merops philippines*) | ಹಿಮಾಲಯ, ಪಾಕಿಸ್ತಾನ |
| ಚಿಕ್ಕ ಕಿವಿಯ ಗೂಬೆ | ಅಸಿಯೊ ಫ್ಲಾಮಿಯಸ್ (*Asio flammeus*) | ಉತ್ತರ ಕಾಶ್ಮೀರ, ಹಿಮಾಲಯ |
| ಸಾಮಾನ್ಯ ಸೈಪು | ಗ್ಯಾಲ್ಲಿಂಗೊ ಗ್ಯಾಲ್ಲಿಂಗೊ (*Gallingo gallingo*) | ಉತ್ತರ ಯುರೋಪ್ |
| ಜಾಕ್ ಸೈಪು | ಲಿಮ್ನೊಕ್ರಿಪ್ಟಸ್ ಮಿನಿಮಸ್ (*Lymnocryptes minimus*) | ಉತ್ತರ ಯುರೋಪ್ |
| ಸೈಬೀರಿಯಾ | | |
| ಗ್ರಡ್ವಿಚ್ | ಲಿಮೋಸಾ ಲಿಮೋಸಾ(*Limosa limosa*) | ಮಧ್ಯ ಯುರೋಪ್ |
| ವಿಂಬ್ರೆಲ್ | ನ್ಯುಮೇನಿಯಸ್ ಫಿಯೋಪಸ್ (*Numenius phaeopus*) | ಮಧ್ಯ ಯುರೋಪ್ |
| ಕೊಂಚೆ | ನ್ಯುಮೇನಿಯಸ್ ಅರ್ಕ್ವೇಟಾ(*N.arquata*) | ಉ. ಮಧ್ಯ ಯುರೋಪ್ |
| ಕೆಂಪುಕಾಲಿನ ಹಕ್ಕಿ | ಟ್ರಿಂಗಾ ಟೊಟಾನಸ್ (*Tringa totanus*) | ಮಧ್ಯ ಯುರೋಪ್, ಟಿಬೇಟ್ |
| ಹಸಿರುಕಾಲಿನ ಹಕ್ಕಿ | ಟ್ರಿಂಗಾ ನೆಬುಲೇರಿಯಾ (*T. nebularia*) | ಮ.ಯುರೋಪ್, ಉ. |
| ಏಷ್ಯಾ | | |
| ಜವುಗು ಮರಳು ಪೀಪಿ | ಟ್ರಿಂಗಾ ಸ್ಟ್ರಾಗ್ನಾಟಿಲಿಸ್ (*T.stragnatilis*) | ಮಧ್ಯ ಯುರೋಪ್ |
| ವುಡ್ ಮರಳು ಪೀಪಿ | ಟ್ರಿಂಗಾ ಗ್ಲಾರಿಯೋಲಾ (*T. glariola*) | ಮ. ಯುರೋಪ್ , ಸೈಬೇರಿಯಾ |
| ಸಾಮಾನ್ಯ ಮರಳು ಪೀಪಿ | ಅಕ್ಟೈಟಿಸ್ ಲೈಪೊಲ್ಯುಕಾಸ್ (*Actitis lypoleucos*) | ಹಿಮಾಲಯ |
| ಚೆರೆಕ್ ಮರಳು ಪೀಪಿ | ಕ್ಷೆನಸ್ ಸೈನೇರಿಯಸ್ (*Xenus cinerius*) | ಉ. ಯುರೋಪ್, ಸೈಬೀರಿಯಾ |
| ಲಿಟಲ್ ಸ್ಟಿಚಿಟ್ | ಕ್ಯಾಲಡ್ರಿಸ್ ಮೈನುಟಾ(*Caladris minuta*) | ಸೈಬೀರಿಯಾ |
| ಟಮಿಂಕ್ ಸ್ಟಿಂಟ್ | ಕ್ಯಾಲಡ್ರಿಸ್ ಟೆಮಿಂಕ್ಟಿಸ್ (*C.temminctis*) | ಉ. ಯುರೋಪ್ |
| ಡನ್‌ಲಿನ್ | ಕ್ಯಾಲಡ್ರಿಸ್ ಆಲ್ಪೈನಾ (*C.alpina*) | ಉ. ಯುರೋಪ್, ಉ. ಏಷ್ಯಾ |
| ಗೋಲ್ಡನ್ ಪ್ಲೋವರ್ | ಪ್ಲುವಿಯಾಲಿಸ್ ಫುಲ್ವಾ (*Pluviales fulva*) | .....”...... |
| ಗ್ರೇ ಪ್ಲೋವರ್ | ಪ್ಲುವಿಯಾಲಿಸ್ ಸ್ಕ್ವಾಟರೋಲಾ (*P. squatarola*) | ಸೈಬೀರಿಯಾ |

| ಹಕ್ಕಿಗಳ ಹೆಸರು | ವೈಜ್ಞಾನಿಕ ಹೆಸರು | ವಲಸೆ ಹೊರಡುವ ಪ್ರದೇಶ |
|---|---|---|
| ಸ್ಯಾಂಡ್ ಪ್ಲೋವರ್ | ಕ್ಯಾರಾಡ್ರಿಯಸ್ ಮಂಗೋಲಸ್ (*Charadrius mongolus*) | ಯುರೋಪ್ |
| ಕೆಂಟಿಶ್ ಪ್ಲೋವರ್ | ಕ್ಯಾರಾಡ್ರಿಯಸ್ ಅಲೆಕ್ಸಾಂಡ್ರಿಯಸ್ (*C. alexandrius*) | ಯುರೋಪ್ |
| ಕಪ್ಪು ತಲೆಯ ಕಡಲು ಕಾಗೆ | ಲಾರಸ್ ಜೀನ (*Larus genei*) | |
| ಕಂದು ತಲೆಯ ಕಡಲು ಕಾಗೆ | ಲಾರಸ್ ಬ್ರನ್ನಿಫಾಲಸ್ (*L.brunniaphalus*) | ಲಡಕ್, ಟಿಬೇಟ್ |
| ಗಲ್‌ಬಿಲ್ಡ್ ಟರ್ನ್ | ಜಿಲೊಖೆಲಿಡಾನ್ ನಲೊಟಿಕಾ (*Gelochelidon nilotica*) | |
| ಕ್ರೆಸ್ಟೆಡ್ ಟರ್ನ್ | ಸ್ಟರ್ನಾ ಬೆಂಗಾಲೆಂಸಿಸ್ (*Sterna bengalensis*) | ಪಾಕಿಸ್ತಾನ |
| ವಿಸ್ಕರ್ಡ್ ಟರ್ನ್ | ಕ್ಲೈಡೊ ನಿಯಾಸ್ ಹೈಬ್ರಿಡಸ್ (*Chlidonias hybridus*) | ಉತ್ತರ ಭಾರತ (ಕಾಶ್ಮೀರ) |
| ಆಸ್ಪ್ರೆ ಪ್ಯಾಂಡಿಯಾನ್ ಹೇಲಿಯಿಟಸ್ | (*Pandion haliaetus*) | ಯುರೋಪ್ (ಹಿಮಾಲಯ) |
| ಮಾರ್ಶ್ ಹ್ಯಾರಿಯರ್ (ಜವುಗು ಡೇಗೆ) | ಸರ್ಕಸ್ ಏರುಜಿನೊಸಿಸ್ (*Circus aeruagenosis*) | ಪಶ್ಚಿಮ ಹಿಮಾಲಯ |
| ಪ್ಯಾಲ್ಲೀಡ್ ಹ್ಯಾರಿಯರ್ | ಸರ್ಕಸ್ ಮಾಕ್ರೊಯುರಸ್ (*C. macrourus*) | |
| ಬಾರ್ನ್ ಸ್ವಾಲ್ಲೊ | ಹಿರುಂಡೊ ರಸ್ಟಿಕಾ (*Hirunda rustica*) | |
| ಬಿಳಿ ಕುಂಡೆಕುಸುಕ | ಮೊಟಸಿಲ್ಲಾ ಆಲ್ಬ (*Motacilla alba*) | ಪಾಕಿಸ್ತಾನ, ಕಾಶ್ಮೀರ |
| ಹಳದಿ ಕುಂಡೆಕುಸುಕ | ಮೊಟಸಿಲ್ಲಾ ಫ್ಲೇವ್ (*M.flava*) | ಹಿಮಾಲಯ |
| ಬೂದು ಕುಂಡೆಕುಸುಕ | ಮೊಟಸಿಲ್ಲಾ ಸಿನೇರಿಯಾ (*M.cinerea*) | ಹಿಮಾಲಯ |
| ಗುಲಾಬಿ ಮೈನಾ | ಸ್ಟುರಸ್ ರೋಸಿಯಸ್ (*Sterus roseus*) | ಪಾಕಿಸ್ತಾನ |

ದೂರದಿಂದ ವಲಸೆ ಬರುವ ಹಕ್ಕಿಗಳು ಸಾಮಾನ್ಯವಾಗಿ ಹಿಂಡು ಹಿಂಡಾಗಿ ಕಂಡುಬರುವುದಲ್ಲದೆ, ಎರಡು ಅಥವಾ ಮೂರು ವಿಭಿನ್ನ ಪ್ರಭೇದಗಳಲ್ಲಿ ಒಟ್ಟಿಗೆ ಇರುತ್ತವೆ. ಕಡಲ ತೀರ, ತೀರದ ಬಳಿ ಇರುವ ದ್ವೀಪ, ಬತ್ತದ ಗದ್ದೆಗಳು, ಹಿನ್ನೀರ ಪ್ರದೇಶ, ನದಿಗಳ ಮಧ್ಯೆ ಇರುವ ಮಣ್ಣಿನ ದಿಣ್ಣೆಗಳು ಇತ್ಯಾದಿಗಳಲ್ಲಿ ವಲಸೆ ಹಕ್ಕಿಗಳು ಸಾಮಾನ್ಯ. ಅಷ್ಟಾಗಿ ಕಣ್ಣಿಗೆ ಬೀಳದ ಹಕ್ಕಿಗಳು ಆಸಕ್ತಿಯಿಂದ ನೋಡಿದಾಗ ಮಾತ್ರ ಅವುಗಳ ವೈವಿದ್ಯದ ಅರಿವಾಗುತ್ತದೆ. ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಹಲವಾರು ಪಕ್ಷಿಗಳು ತಮ್ಮ ಆವಾಸಗಳನ್ನು ಬದಲಿಸುತ್ತವೆ. ಬೇಸಿಗೆಯಲ್ಲಿ ಕೆರೆ ಕುಂಟೆಗಳು ಬತ್ತಿದಾಗ, ಜಲಪಕ್ಷಿಗಳು ಸೂಕ್ತ ಆವಾಸ ಹುಡುಕಿ ಬೇರೆಡೆ ಸಾಗುತ್ತವೆ. ಮಳೆಗಾಲದಲ್ಲಿ ಎಲ್ಲೆಡೆ ಚದುರಿರುವ ಈ ಪಕ್ಷಿಗಳು ಬೇಸಿಗೆ ತಿಂಗಳುಗಳಲ್ಲಿ ಕರಾವಳಿಯ ಕೆರೆ ಮದಗಗಳಿಗೆ ಬರುತ್ತವೆ. ಸ್ಥಳೀಯ ವಲಸೆ ಹಕ್ಕಿಗಳು ವರ್ಷಂಪ್ರತಿ ಒಂದೇ ನಿರ್ದಿಷ್ಟ ಸ್ಥಳಕ್ಕೆ ವಲಸೆ ಹೋಗುವುದಿಲ್ಲ. ಸೂಕ್ತ ನೆಲೆ ಕಂಡುಬಂದಲ್ಲಿ ಕೆಲಕಾಲ ಉಳಿಯುತ್ತವೆ. ನೀರುಕಾಗೆ, ಹಾವುಹಕ್ಕಿ, ಐಬಿಸ್, ಪರ್ಪಲ್ ಹೆರಾನ್, ಗ್ರೇ ಹೆರಾನ್ ಮೊದಲಾದವು ಕೂಡ ಸ್ಥಳೀಯವಾಗಿ ತಮ್ಮ ಆವಾಸಗಳನ್ನು ಬದಲಿಸುತ್ತವೆ. ಮಳೆಗಾಲದ ಮಳೆ ಆರ್ಭಟ ಮತ್ತು ಗಾಳಿಯ ಒತ್ತಡಕ್ಕೆ ಸಿಕ್ಕಿ ಕೆಲವು ಸಾಗರ ಪಕ್ಷಿಗಳು ಕಡಲ ತೀರ ಸೇರುವುದು ಕಂಡುಬರುತ್ತದೆ. ಇವು ಉದ್ದೇಶಪೂರ್ವಕವಾಗಿ ಬರುವಂಥವಲ್ಲ. ಬದಲಾಗಿ ದಾರಿತಪ್ಪಿ ಬರುವಂಥವು. ಇನ್ನು ಕೆಲವು ಪಕ್ಷಿಗಳು ತಮ್ಮ ದೀರ್ಘ ವಲಸೆ ಕಾಲದಲ್ಲಿ ತೀವ್ರ ಬಳಲಿ ಆಯಾಸಗೊಂಡು ನೆಲಕಚ್ಚುವುದುಂಟು. ಇತ್ತೀಚಿನ ವರ್ಷಗಳಲ್ಲಿ ಕಂಡುಬಂದ ಆಗುಂತಕ ಪಕ್ಷಿ ಪಟ್ಟಿಯನ್ನು ಮುಂದೆ ನೀಡಿದೆ.

**ಕೋಷ್ಟಕ ೧.೮ : ಆಗುಂತಕ ಪಕ್ಷಿಗಳ ವಿವರ – ಉಡುಪಿ ಜಿಲ್ಲೆ**

| ಸಾಮಾನ್ಯ ಹೆಸರು | ವೈಜ್ಞಾನಿಕ ಹೆಸರು | ಬಂದಿರಬಹುದಾದ ತಾಣ |
|---|---|---|
| ಮಾಸ್ಕಡ್ ಬೂಬಿ | ಸೂಲಾ ಡ್ಯಾಕ್ಟೈಲಾಟ್ರ (*Sula dactylatra*) | ಲಕ್ಷದ್ವೀಪ ಸಮೂಹ |
| ರೋಸಿ ಟರ್ನ್ | ಸ್ಟರ್ನಾ ಡ್ಯುಗಾಲಿ (*Sterna dougalli*) | ಅರಬ್ಬೀ ಸಮುದ್ರದ ಲಕ್ಷದ್ವೀಪ |
| ಬ್ರಿಡಲ್ಡ್ ಟರ್ನ್ | ಸ್ಟರ್ನಾ ಅನತೀಟಸ್ (*Sterna anaethatus*) | .....”...... |
| ಫ್ರಿಗೇಟ್ | ಫ್ರಿಗೇಟಾ ಮೈನರ್ (*Frigate minor*) | ಪೆಸಿಫಿಕ್ (ಶಾಂತ) ಸಾಗರ |
| ದೊಡ್ಡ ಫ್ರಿಗೇಟ್ | ಫ್ರಿಗೇಡಾ ಮ್ಯಾಗ್ನಿಫಿಸೆಂಸ್ (*F.mageificens*) | .....”...... |
| ವಿಸ್ಕರ್ಡ್ ಟನ್ | ಕ್ಲೈಡೊನಿಯಾಸ್ ಹೈಬ್ರಿಡಾ (*Chlidonias hybrida*) | ಉತ್ತರ ಭಾರತ |
| ಟ್ರಾಪಿಕ್ ಬರ್ಡ್ | ಫೇತಾನ್ ಈತೀರಸ್ (*Phaethon aetherus*) | ಅರಬ್ಬೀ ಸಮುದ್ರದ ಲಕ್ಷದ್ವೀಪ |
| ಸ್ಕುವಾ | ಕೆತರಾಕ್ಟ್ ಸ್ಕುವಾ (*Catheract skua*) | ದಕ್ಷಿಣ ಧ್ರುವ (Antarctica) |
| ಹೆಜ್ಜಾರ್ಲೆ | ಪೆಲಿಕಾನಸ್ ಫಿಲಿಪೆಂಸಿಸ್ (*Palecanus phillippensis*) | ಸ್ಥಳೀಯ ವಲಸೆ ಹಕ್ಕಿ |

ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪಕ್ಷಿಗಳಿಗೂ ಪರಿಸರೀಯ ಸಮಸ್ಯೆಗಳು ತೊಂದರೆ ಉಂಟುಮಾಡುವುದು ಕಂಡುಬಂದಿದೆ. ಸುಮಾರು ೪೦ ವರ್ಷಗಳ ಹಿಂದೆ ಕರಾವಳಿ ಪ್ರದೇಶದಲ್ಲಿ ದಾಖಲಾಗಿದ್ದ ರಾಜರಣಹದ್ದು (King Vulture) ಇಂದು ಹೇಳ ಹೆಸರಿಲ್ಲ. ೧೯೯೦ರಲ್ಲಿ ರಾಜರಣಹದ್ದುಗಳು ಸ್ಥಿತಿಗತಿಗಳ ಬಗ್ಗೆ ರಾಷ್ಟ್ರದಾದ್ಯಂತ ಅಧ್ಯಯನ ನಡೆದಿತ್ತು. ಅಂದಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಹಕ್ಕಿಯಾಗಲೀ ಅದರ ಗೂಡಾಗಲೀ ದಾಖಲೆಗೆ ಸಿಕ್ಕಿಲ್ಲ. ಆಹಾರ ಸರಪಳಿಯ ದಂಡಗೋಪುರದಲ್ಲಿರುವ ಹಣಹದ್ದುಗಳು ಅನೇಕ ರೀತಿಯ ಒತ್ತಡಕ್ಕೆ ಒಳಗಾಗಿವೆ. ಕೀಟನಾಶಕ ದೇಹದಲ್ಲಿ ಸೇರಿದಂತೆ ಸಂತಾನೋತ್ಪತ್ತಿಯ ಮೇಲೆ ಪರಿಣಾಮ, ದೊಡ್ಡ ಮರಗಳ ನಾಶದಿಂದ ಗೂಡು ಕಟ್ಟಲು ಸ್ಥಳವಿಲ್ಲದಿರುವುದು, ಸತ್ತ ಪ್ರಾಣಿಗಳು ಸಿಗದೇ ಆಹಾರದ ಕೊರತೆಯಿರುವುದು, ಈ ಪಕ್ಷಿಗಳು ವಿರಳವಾಗುವುದಕ್ಕೆ ಕಾರಣಗಳಾಗಿವೆ. ರಾಜರಣಹದ್ದು ಕರಾವಳಿ ಪ್ರದೇಶದಿಂದ ಕಣ್ಮರೆಯಾಗಿದ್ದರೆ, ಬಿಳಿ ಬೆನ್ನಿನ ರಣಹದ್ದುಗಳು ಸಹ ಕಡಿಮೆಯಾಗುತ್ತಿವೆ.

ಕಡಲ ಕೊರೆತ ಕರಾವಳಿ ಜಿಲ್ಲೆಗಳ ಒಂದು ಪ್ರಮುಖ ಸಮಸ್ಯೆಯಾಗಿದೆ. ತಡೆಗೋಡೆ ನಿರ್ಮಿಸಿ ಕಡಲು ಕೊರೆತ ನಿಯಂತ್ರಿಸುವುದು ಒಂದು ಮಾರ್ಗೋಪಾಯವಾಗಿದೆ. ಈ ತಡೆಗೋಡೆಯ ನೇರ ಪರಿಣಾಮ ಕಡಲ ತೀರದ ಪಕ್ಷಿಗಳ ಮೇಲೆ ಆಗಿದೆ. ಡಲ್ನಿನ್ (Dulnin), ಸ್ಯಾಂಡರ್‌ಲಿಂಗ್ (Sanderling) ರಿಂಗಡ್ ಪ್ಲೋವರ್ (Ringed Plover) ಮೊದಲಾದ ಪಕ್ಷಿಗಳಿಗೆ ತಡೆಗೋಡೆಯಿಂದ ನೆಲೆ ಇಲ್ಲದಂತಾಗುತ್ತದೆ.

## ಅರಣ್ಯಗಳು

ಎಚ್. ಜಿ. ಚಾಂಪಿಯನ್ ಮತ್ತು ಎಸ್. ಕೆ. ಸೇಥಿ ಅವರ ಪರಿಷ್ಕೃತ ಅರಣ್ಯ ಸರ್ವೇಕ್ಷಣೆಯಂತೆ ಮಂಗಳೂರು ಅರಣ್ಯ ವಿಭಾಗದಲ್ಲಿ ಕಂಡು ಬರುವ ವಿವಿಧ ಅರಣ್ಯ ಪ್ರಕಾರಗಳು ಉಡುಪಿ ಜಿಲ್ಲೆಯಲ್ಲೂ ಕಂಡುಬರುತ್ತವೆ. ಆದರೂ ಯಾವುದೇ ಒಂದು ನಿರ್ಧಿಷ್ಟ ವಲಯದಲ್ಲಿ ಏಕ ಪ್ರಕಾರದ ಅರಣ್ಯ ಕಂಡುಬರುವುದಿಲ್ಲ. ಒಂದು ಅರಣ್ಯ ಪ್ರಕಾರದಿಂದ ಮತ್ತೊಂದಕ್ಕೆ ಬದಲಾವಣೆಯ ಹಂತದಲ್ಲಿರುವುದನ್ನು ಕಾಣಬಹುದು. ಸಾಮಾನ್ಯವಾಗಿ ಒಟ್ಟು ಅರಣ್ಯ ಪ್ರದೇಶದಲ್ಲಿ ಶೇ ೦.೫ ರಷ್ಟು ನಿತ್ಯ ಹರಿದ್ವರ್ಣದ ಕಾಡುಗಳು, ಶೇ ೫೪ ರಷ್ಟು ಅರೆ ನಿತ್ಯ ಹರಿದ್ವರ್ಣ ಕಾಡುಗಳು, ಶೇ ೪೨ ರಷ್ಟು ತೇವಾಂಶಭರಿತ ಎಲೆಯುದುರುವ ಕಾಡುಗಳು ಮತ್ತು ಉಳಿದ ಪ್ರದೇಶದಲ್ಲಿ ಶೇ ೩.೫ ಇತರೆ ವಿಧದ ಕಾಡುಗಳನ್ನು ಕಾಣಬಹುದು. ಆದರೆ ಈ ಕಾಡುಗಳ ಎಲ್ಲೆಗಳನ್ನು ಗುರುತಿಸಿ ಬೇರ್ಪಡಿಸುವುದು ಅಸಾಧ್ಯವಾಗುತ್ತದೆ.

**ಜಂಬಿಟ್ಟಿಗೆ (ಮುರಕಲ್ಲು) ಕುರುಚಲು ಕಾಡುಗಳು (Lateritic scrub) :** ಜಿಲ್ಲೆಯ ಕರಾವಳಿ ತೀರದಲ್ಲಿ ಒಣ ಭೂಮಿಯಲ್ಲಿ ಅತಿ ಕಡಿಮೆ ಆಳದ ಜಂಬಿಟ್ಟಿಗೆ ಮಣ್ಣಿನ ಪ್ರದೇಶದಲ್ಲಿ ಈ ವಿಧದ ಕಾಡುಗಳನ್ನು ಗುರುತಿಸಬಹುದು.

ಇಲ್ಲಿನ ವಾತಾವರಣವು ನಿತ್ಯ ಹರಿದ್ವರ್ಣ ಮತ್ತು ಅರೆನಿತ್ಯಹರಿದ್ವರ್ಣ ಕಾಡುಗಳ ಬೆಳವಣಿಗೆಗೆ ಪೂರಕವಾಗಿದ್ದರೂ ಭೂಮಿ ಬೋಳಾಗಿರುವುದು ಮತ್ತು ವಾತಾವರಣದ ಗಾಳಿ, ಮಳೆ ಮತ್ತು ಬಿಸಿಲಿಗೆ ತೆರೆದಿಟ್ಟುಕೊಂಡಿರುವುದರ ಪ್ರಯುಕ್ತ ಕುರುಚಲು ಕಾಡುಗಳನ್ನು ನೋಡಬಹುದು. ಇಲ್ಲಿರುವ ಮರಗಳು ಕುಬ್ಜವಾಗಿದ್ದು ಎಲೆಯುದುರುವ ಮರಗಳಾಗಿದ್ದು ತೆರೆದ ಕುರುಚಲು ಕಾಡಿನ ವಿಧಕ್ಕೆ ಸೇರಿವೆ. ಇಲ್ಲಿನ ನೆಲಹಾಸು ಸಸ್ಯಗಳಿಂದ ವಿರಳವಾಗಿ ಆವೃತ್ತವಾಗಿದೆ. ಉಷ್ಣ ವಾತಾವರಣಕ್ಕೆ ಒಗ್ಗಿದ ನಿತ್ಯಹರಿದ್ವರ್ಣದ ಕೆಲವು ಸಸ್ಯಪ್ರಭೇಧಗಳನ್ನು ನೆಲಹಾಸಿನಲ್ಲಿ ಕಾಣಬಹುದು.

**ಮುಖ್ಯ ಸಸ್ಯ ಪ್ರಭೇಧಗಳು :** *Terminalia chebula, Careya arborea, Strychnos nux-vomica, Anacardium occidentale; Randia species, Ixora* etc.,

**ದಕ್ಷಿಣ ವಲಯದ ದ್ವಿತೀಯ ತೇವಾಂಶಭರಿತ ಮಿಶ್ರ ಎಲೆಯುದುರುವ ಕಾಡುಗಳು (**Southern Secondary Moist Mixed Deciduous Forest**):** ಈ ವಿಧದ ಕಾಡುಗಳು ಮಂಗಳೂರು ಅರಣ್ಯ ವಲಯದ ಪಶ್ಚಿಮ ಭಾಗದಲ್ಲಿ ಕಂಡುಬರುತ್ತವೆ. ಇಲ್ಲಿನ ವಾತಾವರಣ ಉಷ್ಣವಲಯದ ನಿತ್ಯಹರಿದ್ವರ್ಣ ಅಥವಾ ಅರೆ ನಿತ್ಯಹರಿದ್ವರ್ಣ ಕಾಡುಗಳು ಬೆಳೆಯುವುದಕ್ಕೆ ಸೂಕ್ತವಾಗಿದ್ದರೂ ಭೂಮಿಯ ಗುಣದಿಂದ ಎಲೆಯುದುರುವ ತೇವಾಂಶಭರಿತ ಕಾಡುಗಳ ಬೆಳವಣಿಗೆಗೆ ಸಹಾಯಕವಾಗಿದೆ. ಕುಮ್ರಿ ಬೇಸಾಯ, ಕಾಡಿನ ಉತ್ಪನ್ನಗಳ ಅತಿಯಾದ ಬಳಕೆ, ದನಕರುಗಳ ಮೇಯುವಿಕೆ, ಬೆಂಕಿ ಮುಂತಾದ ಕಾರಣಗಳಿಂದ ನಾಶವಾದ ಕಾಡಿನ ಪ್ರದೇಶದಲ್ಲಿ ಈ ವಿಧದ ಕಾಡಿನ ಅಭಿವೃದ್ಧಿಯನ್ನು ಕಾಣಬಹುದು. ಈ ಕಾಡುಗಳು ಉತ್ತುಂಗದಲ್ಲಿರುವ ತೇವಾಂಶಭರಿತ ಕಾಡಿನ ಹಾಗೆಯೇ ಇದ್ದು ಇಲ್ಲಿ ಕೆಲವು ಅತಿ ಎತ್ತರದ ಮರಗಳು ಮತ್ತು ಮೃದುವಾದ ಅತಿ ಬೇಗ ಬೆಳೆಯುವ ಮರಗಳಿವೆ. ಕೆಲವು ಪ್ರದೇಶಗಳಲ್ಲಿ ಪ್ರಾಥಮಿಕ ಅರಣ್ಯದ ಅಳಿದುಳಿದ ಮರಗಳನ್ನು ಜೌಗಿನ ಮತ್ತು ತೇವಾಂಶ ಹೆಚ್ಚಿರುವ ಪ್ರದೇಶಗಳಲ್ಲಿ ಕಾಣಬಹುದು. ಕಾಡಿನ ಬೆಂಕಿಯ ಹತೋಟಿಯಿಂದಾಗಿ ದಟ್ಟವಾದ ನಿತ್ಯಹರಿದ್ವರ್ಣದ ಮರಗಳ ಬೆಳವಣಿಗೆಯಿಂದಾಗಿ ಕೆಲವೆಡೆ ತೇವಾಂಶಭರಿತ ಎಲೆಯುದುರುವ ಮರಗಳ ಬೆಳವಣಿಗೆಗೆ ಅಡ್ಡಿಯಾಗಿದೆ. ಕಾಡಿನ ಬೆಂಕಿ ಪದೇ ಪದೇ ಕಂಡುಬರುವೆಡೆ ನೆಲಹಾಸು ಎಲೆಯುದುರುವ ಪೊದೆ ಸಸ್ಯಗಳಿಂದ ಮತ್ತು ಹುಲ್ಲಗಾವಲಿನಿಂದ ಮುಚ್ಚಿರುತ್ತದೆ. ಇಲ್ಲಿನ ಮಣ್ಣಿನ ಆಳ ಕಡಿಮೆಯಿದ್ದು ಸಣ್ಣ ಸಣ್ಣ ಕಲ್ಲುಗಳಿಂದ ಕೂಡಿದ್ದು ಸವಕಳಿಗೆ ಒಳಗಾಗುತ್ತದೆ. ಜಂಬಿಟ್ಟಿಗೆ ಮಣ್ಣುಗಳನ್ನು ವಿಶೇಷವಾಗಿ ಕಾಣಬಹುದು.

ಇಲ್ಲಿ ಕಂಡುಬರುವ ಮುಖ್ಯವಾದ ಸಸ್ಯ ಪ್ರಭೇಧಗಳು : *Terminalia paniculata, Bombax ceiba, Mangifera indica, Dalbergia latifolia, Adina cordifolia, Dillenia pentagyna, Schleichera oleosa, Alstonia scholaris, Xylia xylocarpa, Lagerstroemia lanceolata, Olea dioca, Careya arborea, Emblica officinalis, Strychnos nux-vomica, Clerodendron infortunatum, Helecteris isora.* In damp areas evergreen under growth includes *Actinodaphne, Psychotria, Webera, Ixora* and *Strobilanthes.* No bamboos but canes are confined to wet pockets. Climbers of the species of Calycopteris floribunda, Acacia species are common.

**ಜಂಬಿಟ್ಟಿಗೆಯಿಂದ ಕೂಡಿದ ಅರೆ ನಿತ್ಯ ಹರಿದ್ವರ್ಣದ ಕಾಡುಗಳು** (Lateritic Semi Evergreen Forest): ಈ ವಿಧದ ಕಾಡುಗಳು ಜಂಬಿಟ್ಟಿಗೆ ಮಣ್ಣಿರುವ ಪ್ರದೇಶದಲ್ಲಿ ವ್ಯಾಪಿಸಿದ್ದು ವಿಶೇಷವಾಗಿ *Xylia xylocarpa* ಸಸ್ಯಗಳನ್ನು ಕಾಣಬಹುದು. ವಾತಾವರಣವು ಇತರೆ ಅರೆ ನಿತ್ಯಹರಿದ್ವರ್ಣದ ಕಾಡುಗಳ ಪ್ರದೇಶದ ಹಾಗೆಯೇ ಇದ್ದರೂ ಮಣ್ಣು ಜಂಬಿಟ್ಟಿಗೆಯಿಂದ ಕೂಡಿದ್ದು, ಕಡಿಮೆ ಆಳವನ್ನು ಹೊಂದಿದ್ದು ಶುಷ್ಕವಾಗಿರುತ್ತದೆ.

ಇಲ್ಲಿ ಕಂಡುಬರುವ ಮುಖ್ಯವಾದ ಸಸ್ಯ ಪ್ರಭೇಧಗಳು : *Xylia xylocarpa, Pterocarpus marsupium, Grewia tiliaefolia, Terminalia* species, *Careya arborea, Bridelia retusa, Calycopteris floribunda, Strychnos nux-vomica, Lea indica.* Generally sparse *Adhatoda vasica, Holarrhena antidysenterica.*

**ಪಶ್ಚಿಮ ಕರಾವಳಿಯ ಪುನರ್ಜೀವಿತ ನಿತ್ಯಹರಿದ್ವರ್ಣ ಡಿಪ್ಟೆರೋಕಾರ್ಪಸ್ ಕಾಡುಗಳು** (West Coast Secondary Evergreen Dipterocarpus Forest) : ಈ ವಿಧದ ಅರಣ್ಯವು ಪಶ್ಚಿಮ ಘಟ್ಟಗಳ ಕೆಳಗಿನ ಸಮನಾದ ಮೈದಾನ ಪ್ರದೇಶದಲ್ಲಿ ಕಾಣಸಿಗುತ್ತದೆ. ಇದರಲ್ಲಿ ಸಮನಾದ ಮತ್ತು ದಟ್ಟವಾದ ಕಾಡುಗಳಿದ್ದು ನಿತ್ಯಹರಿದ್ವರ್ಣದ ಪೊದೆಗಳಿಂದ ನೆಲಹಾಸು ಆವೃತ್ತವಾಗಿದೆ. *Hopea parviflora* ಹುಲುಸಾಗಿ ಬೆಳೆಯುತ್ತದೆ.

ಇಲ್ಲಿ ಕಂಡುಬರುವ ಮುಖ್ಯವಾದ ಸಸ್ಯ ಪ್ರಭೇಧಗಳು : *Hopea parviflora, Hopea wightiana, Vateria indica, Diospyros microphylla, Eugenia gardneri, Aporasa lindleyana, Olea dioica, Syzygium* Species, *Ixora and Calycopteris floribunda* bushes.

**ಪಶ್ಚಿಮ ಕರಾವಳಿಯ ಅರೆಹರಿದ್ವರ್ಣ ಕಾಡುಗಳು** (West Coast Semi Evergreen Forest): ನಿತ್ಯಹರಿದ್ವರ್ಣ ಕಾಡುಗಳು ಮತ್ತು ತೇವಾಂಶಭರಿತ ಎಲೆಯುದುರುವ ಕಾಡುಗಳ ಮಧ್ಯಂತರದ ಕಾಡು ಇದಾಗಿದೆ. ಕೆಲವೊಮ್ಮೆ ಮೇಲಿನ ಎರಡೂ ಕಾಡುಗಳ ವಿಧಗಳು ಈ ಕಾಡಿನಲ್ಲಿ ಸಿಗುತ್ತವೆ. ಇಲ್ಲಿ ಅತಿ ದಟ್ಟವಾದ ಹಾಗೂ ಎತ್ತರವಾದ ಮರಗಳಿವೆ. ನಿಜವಾದ ನಿತ್ಯ ಹರಿದ್ವರ್ಣ ಕಾಡುಗಳಿಗಿಂತ ಈ ಕಾಡಿನಲ್ಲಿ ಮರಗಳ ದಟ್ಟಣೆ ಕಡಿಮೆ ಇರುತ್ತದೆ. ಕೆಳಅಂತಸ್ತು ನಿತ್ಯ ಹರಿದ್ವರ್ಣದ ಸಸ್ಯಗಳಿಂದ ಕೂಡಿದ್ದು ನೆಲಹಂತಸ್ತು ಬಹಳ ದಟ್ಟವಾದ ಪೊದೆಗಳಿಂದ ಕೂಡಿರುತ್ತದೆ. *Bambusa bambos* ಬಿದಿರಿನ ಪ್ರತಿನಿಧಿಯಾಗಿದೆ. *Terminalia paniculata* ಸಾಮಾನ್ಯವಾಗಿ ಕಂಡುಬರುತ್ತದೆ.

ಇಲ್ಲಿ ಕಂಡುಬರುವ ಮುಖ್ಯವಾದ ಸಸ್ಯ ಪ್ರಭೇಧಗಳು : *Terminalia paniculata, Diospyros spp, Lagerstroema lanceolata, Lophopetalum wightianum, Machilus macarantha, Cinnamomum spp, Hopea parviflora, Mangifera indica,Artocarpus hirsute, Holigarna arnotiana, Elaeocarpus serratus, Mallotus philippensis, Diospyros spp, Ixora spp, Strobilanthus , Ixora.* Climabers and canes are numerous.

**ಪಶ್ಚಿಮ ಕರಾವಳಿಯ ಉಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳು** (West Coast Tropical Evergreen Forest): ಮಂಗಳೂರು ಅರಣ್ಯ ವಿಭಾಗದಲ್ಲಿ ಈ ಕಾಡುಗಳು ದಟ್ಟವಾದ ಮತ್ತು ನಿತ್ಯಹರಿದ್ವರ್ಣದ ಕಾಡುಗಳ ವಿಧವಾಗಿದೆ. ಈ ಕಾಡುಗಳು ವಾರ್ಷಿಕ ೩,೦೦೦ ಮಿ.ಮೀ ಗೂ ಹೆಚ್ಚು ಮಳೆಯಾಗುವ, ಪಶ್ಚಿಮ ಘಟ್ಟಗಳ ಇಳಿಜಾರಿನ ಪ್ರದೇಶದಲ್ಲಿ ಸಮುದ್ರಮಟ್ಟದಿಂದ ೧೨೦ ರಿಂದ ೨೫೦ ಮೀ ಎತ್ತರದಲ್ಲಿ ಕಂಡುಬರುತ್ತವೆ. ಈ ಪ್ರದೇಶದ ಆರ್ದ್ರತೆ ಮತ್ತು ಮಣ್ಣಿನ ಗುಣಗಳು ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳ ಬೆಳವಣಿಗೆಗೆ ಸಹಕಾರಿಯಾಗಿವೆ. ಮರಗಳ ಪ್ರಭೇಧಗಳ ವೈವಿದ್ಯತೆಯನ್ನು ಇಲ್ಲಿ ಕಾಣಬಹುದಾಗಿದ್ದು ಅತಿ ಎತ್ತರಕ್ಕೆ ಬೆಳೆದಿರುವ ಮರಗಳನ್ನು ಇಲ್ಲಿ ನೋಡಬಹುದು.

ಇಲ್ಲಿ ಕಂಡುಬರುವ ಮುಖ್ಯವಾದ ಸಸ್ಯ ಪ್ರಭೇಧಗಳು: *Dipterocarpus indicus,Hopea wightiana,Vateria indica, Calophyllum wightianum, Hardwickia pinnata, Artocarpus hirsute, Machilus macaranta, Mangifera indica, Lophopetalum wightianum, Olea dioca etc,. Aporosa lindleyana, Myristica spp, Garcinia spp, Caryota urens, Elaeocarpus serratus, Strobilanthus spp, Psychotria spp, Lea sambucina.* Climbers are seen often and are mainly of *Entada scandens, Dioscorea spp.* Regeneration of inferior spp is more abundant than that of merchantable ones. Epiphytes are numerous, mosses and ferns occur almost everywhere.

**ದಕ್ಷಿಣದ ಬಿದಿರಿನ ತಡೆಪಟ್ಟಿಗಳು** (Southern Wet Bamboo Brakes) : ದಕ್ಷಿಣದ ಬಿದಿರಿನ ತಡೆಪಟ್ಟಿಗಳು ಸಾಮಾನ್ಯವಾಗಿ ಹೊಳೆ / ತೊರೆಗಳ ದಡದಲ್ಲಿ ಮತ್ತು ನೀರಿನ ಬಸಿಯುವಿಕೆ ಕಡಿಮೆ ಇರುವ ಪ್ರದೇಶದಲ್ಲಿ ನಿತ್ಯಹರಿದ್ವರ್ಣದ ಮರಗಳ ಬದಲು ಬಿದಿರಿನ ಮೆಳೆಗಳು ತಡೆಪಟ್ಟಿಯಂತೆ ಬೆಳೆದಿರುತ್ತವೆ.

**ಕೇನ್ ತಡೆಪಟ್ಟಿಗಳು (Cane Brakes)** : ಕೇನ್ ತಡೆಪಟ್ಟಿಗಳು ತೇವಾಂಶ ಭರಿತ ನಿತ್ಯಹರಿದ್ವರ್ಣ ಮತ್ತು ಅರೆ ಹರಿದ್ವರ್ಣ ಕಾಡುಗಳಲ್ಲಿ ನೀರಿನ ಬಸಿಯುವಿಕೆ ಕಡಿಮೆ ಇರುವ ಪ್ರದೇಶಗಳಲ್ಲಿ ಕಂಡುಬರುತ್ತವೆ.

ಕೆಲಾಮಸ್ ಪ್ರಭೇಧದ ಅನೇಕ ಕೇನ್‌ಗಳನ್ನು ನೋಡಬಹುದು. ಉಡುಪಿ ಜಿಲ್ಲೆಯು ಅತ್ಯಂತ ವೈವಿಧ್ಯಮಯ ಸಸ್ಯಗಳನ್ನು ಹೋದಿರುವ ೯೯,೪೫೯ ಹೆಕ್ಟೇರು ಅರಣ್ಯ ಪ್ರದೇಶವನ್ನು ಹೊಂದಿದೆ. ಶ್ರೀಗಂಧ, ತೇಗ, ನಂದಿ, ಮತ್ತಿ, ಬೀಟೆ, ಸುರಹೊನ್ನೆ, ದಬ್ಬೆ, ಹಲಸು ಮೊದಲಾದ ಮೌಲ್ಯಯುತವಾದ ಮರಗಳು ಇಲ್ಲಿಯ ಕಾಡುಗಳಲ್ಲಿವೆ. ಆಲ, ಅತ್ತಿ, ಸಂಪಿಗೆ, ಅರಳೆ, ಮಾವು, ಹೊಂಗೆ ಮರಗಿಡಗಳಿವೆ. ಕೆಲವೆಡೆ ಬಿದಿರು, ಬೆತ್ತ, ವಾಟೆ, ಕೇದಿಗೆ, ಈಚಲು, ಬಗನಿ ಮುಂತಾದವುಗಳಿವೆ. ಏಲಕ್ಕಿ, ಕಾಡುಮೆಣಸು, ಸೀಗೆ, ಗೇರು,ಅಂಟುವಾಳ, ಚಕ್ಕೆ ಮೊದಲಾದ ಅರಣ್ಯೋತ್ಪನ್ನಗಳಿವೆ. ಜಿಲ್ಲೆಯಲ್ಲಿರುವ ಚೌಬೀನೇತರ ಮರಗಳಲ್ಲಿ ಮುಖ್ಯ ಮರಗಳ ಪಟ್ಟಿಯನ್ನು ಮುಂದೆ ನೀಡಲಾಗಿದೆ. ಈ ಮರಗಳು ಆಹಾರಕ್ಕಾಗಿ, ಔಷಧಿಗಾಗಿ, ಗೊಬ್ಬರಕ್ಕಾಗಿ ಹಾಗೂ ಸೌಂದರ್ಯ ಸಾಧನಗಳ ತಯಾರಿಕೆಯಲ್ಲಿ ಉಪಯೋಗವಾಗುತ್ತವೆ.

**ಕೋಷ್ಟಕ ೧.೯ : ಅರಣ್ಯ ಉತ್ಪನ್ನಗಳ ವಿವರ**

| ಕ್ರ.ಸಂ. | ವೈಜ್ಞಾನಿಕ ಹೆಸರು | ಸ್ಥಳೀಯ ಹೆಸರು | ಮರದ ಉಪಯುಕ್ತ ಭಾಗ |
|---|---|---|---|
| ೧ | *Acacia sinuate* | ಸೀಗೆಕಾಯಿ | ಹಣ್ಣು |
| ೨ | *Artocarpus gomezianus* | ವಾಟೆಹುಳಿ | ಹಣ್ಣು |
| ೩ | *Cinnamomum verum* | ದಾಲ್ಚಿನ್ನಿ | ಎಲೆ, ಹೂವು, ಮೊಗ್ಗು, ಚಕ್ಕೆ |
| ೪ | *Garcinia gummigutta* | ಉಪಗಿಮರ | ಹಣ್ಣು |
| ೫ | *Garcinia indica* | ಪುನರ್‌ಪುಲಿ | ಹಣ್ಣು |
| ೬ | *Garcinia xanthochymus* | ಜಾರಿಗೆ | ಹಣ್ಣು |
| ೭ | *Myristica malabarica* | ರಾಮಪತ್ರೆ | ಹೂವು, ಬೀಜ |
| ೮ | *Emblica officinalis* | ನೆಲ್ಲಿಕಾಯಿ | ಹಣ್ಣು |
| ೯ | *Sapindus laurifolia* | ನೊರೆಕಾಯಿ | ಹಣ್ಣು |
| ೧೦ | *Strychnos nuxvomica* | ಕಾಸರ್ಕ | ಬೀಜ, ಚಕ್ಕೆ |
| ೧೧ | *Tamarindus indica* | ಹುಣಿಸೆ | ಹಣ್ಣು |
| ೧೨ | *Terminalia bellirica* | ಶಾಂತಿ | ಹಣ್ಣು |
| ೧೩ | *Terminalia chebula* | ಅಳಲೇ ಕಾಯಿ | ಹಣ್ಣು |
| ೧೪ | *Zanthoxylum rhetsa* | ಗಮಟಮರ್ | ಹಣ್ಣು |

ದಕ್ಷಿಣ ಭಾರತದ ಎಲ್ಲ ಪ್ರಾಣಿವರ್ಗಗಳು ಜಿಲ್ಲೆಯಲ್ಲಿವೆ. ಹುಲಿ, ಚಿರತೆ, ಆನೆ, ಕಾಟಿ, ಕಡವೆ, ಕಾಡುಹಂದಿಗಳಂತಹ ದೊಡ್ಡ ಪ್ರಾಣಿಗಳಿಂದ ಹಿಡಿದು ಮೊಲ, ಕೆಂಜಳಿಲು, ಮುಸಿಯ ಮಂಗಗಳಂತಹ ಬಗೆಬಗೆಯ ಪ್ರಾಣಿಗಳಿವೆ. ಉರಗ ಮತ್ತು ಪಕ್ಷಿ ಜಾತಿಗಳಿ ಸಮೃದ್ಧವಾಗಿವೆ.

## ವಾಯುಗುಣ

ಸಾಗರದಿಂದ ಇರುವ ದೂರ, ಮಾನ್ಸೂನ್ ಗಾಳಿಗಳು, ಮತ್ತು ಪ್ರಾಕೃತಿಕ ಲಕ್ಷಣಗಳು ರಾಜ್ಯದ ವಾಯುಗುಣವನ್ನು ರೂಪಿಸುತ್ತವೆ. ಪಶ್ಚಿಮ ಕರಾವಳಿ ಮತ್ತು ನೆರೆಯಲ್ಲಿರುವ ಹೆಚ್ಚು ಮಳೆ ಬೀಳುವ ಪರ್ವತ ಪ್ರದೇಶಗಳ ಮತ್ತು ಪೂರ್ವದಲ್ಲಿರುವ ಶುಷ್ಕ ಲಘು ಮಳೆಯ ಪ್ರದೇಶ ಮತ್ತು ಬರಸಂಭವ ಪ್ರದೇಶಗಳ ಮಧ್ಯ, ಪಶ್ಚಿಮಘಟ್ಟಗಳು ವಾಯುಗುಣ ವಿಭಾಜಕದಂತೆ ಇವೆ. ಪಶ್ಚಿಮಘಟ್ಟವು ನಮ್ಮ ರಾಜ್ಯದ ವಾಯುಗುಣವನ್ನು ನಿರ್ಧರಿಸುವ ಅತ್ಯಂತ ಪ್ರಮುಖ ಪ್ರಾಕೃತಿಕ ಅಂಶವಾಗಿದೆ. ಪಶ್ಚಿಮಘಟ್ಟಗಳು ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಹರಿವ ನದಿಗಳ ಜಲಾನಯನ ಪ್ರದೇಶವಾಗಿದ್ದು ಈ ನದಿಗಳೆಲ್ಲ ಇಲ್ಲಿಂದಲೇ ಹುಟ್ಟುತ್ತವೆ. ನೈಋತ್ಯ ಮಾನ್ಸೂನ್ ಮಾರುತಗಳಿಗೆ ಅಡ್ಡಲಾಗಿ ಉತ್ತರ–ದಕ್ಷಿಣ ದಿಕ್ಕಿನಲ್ಲಿ ಹಬ್ಬಿಕೊಂಡಿರುವ ಪಶ್ಚಿಮಘಟ್ಟಗಳು ಕರಾವಳಿ ಮತ್ತು ಮಲೆನಾಡಿನ ಭಾರೀ ಮಳೆಗೆ ಪ್ರಮುಖ ಕಾರಣಗಳಾಗಿವೆ. ಈ ಪ್ರದೇಶಗಳೇ ನಮ್ಮ ಜಲಸಂಪನ್ಮೂಲಗಳ ಮೂಲಸ್ಥಾನಗಳಾಗಿರುವುದರಿಂದ ಪಶ್ಚಿಮಘಟ್ಟಗಳನ್ನು ನಮ್ಮ ರಾಜ್ಯದ ಬೆನ್ನೆಲುಬು ಎಂದೇ ಕರೆಯಬಹುದಾಗಿದೆ.

ಅತಿ ಹೆಚ್ಚು ವಾರ್ಷಿಕ ಮಳೆ, ಹೆಚ್ಚು ಆರ್ದ್ರತೆ ಮತ್ತು ತೀಕ್ಷ್ಣವಾದ ಹವಾಗುಣ ಜಿಲ್ಲೆಯ ವೈಶಿಷ್ಟವಾಗಿದೆ. ಹವಾಮಾನ ದೃಷ್ಟಿಯಿಂದ ವರ್ಷವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ಮಾರ್ಚ್ ತಿಂಗಳಿನಿಂದ ಮೇ ತಿಂಗಳವರೆಗೆ ಬೇಸಿಗೆ ಕಾಲ, ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳವರೆಗೆ ನೈಋತ್ಯ ಮಾನ್ಸೂನ್ ಕಾಲ, ಅಕ್ಟೋಬರ್–ನವೆಂಬರ್ ತಿಂಗಳುಗಳು ಹಿಂಗಾರು ಮಾರುತದ ಕಾಲ ಹಾಗೂ ಡಿಸೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳವರೆಗೆ ಈಶಾನ್ಯ ಮಾನ್ಸೂನ್ ಕಾಲವೆಂದು ವಿಭಾಗಿಸಬಹುದು. ಈಶಾನ್ಯ ಮಾರುತದಿಂದ ಸಾಮಾನ್ಯವಾಗಿ ಡಿಸೆಂಬರ್ ತಿಂಗಳಿನಲ್ಲಿ ಮಳೆಯಾಗುತ್ತದೆ. ಉಳಿದೆರಡು ತಿಂಗಳು ಮಳೆ ಇರುವುದಿಲ್ಲ.

ರಾಜ್ಯದ ನಾಲ್ಕು ಪ್ರಮುಖ ವಾಯುಗುಣ ಪ್ರದೇಶಗಳಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಎರಡು ವಾಯುಗುಣ ಪ್ರದೇಶಗಳನ್ನು ಗುರುತಿಸಬಹುದು.

೧) **ಕರಾವಳಿ ಪ್ರದೇಶ**: ಈ ಪ್ರದೇಶವು ಅರಬೀಸಮುದ್ರ ಮತ್ತು ಪಶ್ಚಿಮಘಟ್ಟಗಳ ಮಧ್ಯ ಇದ್ದು, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ನೈಋತ್ಯ ಭಾಗವನ್ನು ಒಳಗೊಂಡಿದೆ. ಇಲ್ಲಿ ವರ್ಷಕ್ಕೆ ೩,೦೦೦ ಮಿ.ಮಿ.ಗಿಂತಲೂ ಹೆಚ್ಚು ಮಳೆ ಬೀಳುತ್ತದೆ ಮತ್ತು

೨) **ಪಶ್ಚಿಮಘಟ್ಟಗಳು ಮತ್ತು ಮಲೆನಾಡು ಪ್ರದೇಶ** : ಈ ಪ್ರದೇಶವು, ಪಶ್ಚಿಮಘಟ್ಟಗಳ ಪಶ್ಚಿಮ ಅಂಚಿನಿಂದ ಪೂರ್ವಕ್ಕೆ ಇರುವ ಪರ್ವತ ಪ್ರದೇಶ ಮತ್ತು ಕಾಡುಪ್ರದೇಶವನ್ನು ಒಳಗೊಂಡಿದೆ.

## ಮಳೆಯ ಹಂಚಿಕೆ

**ನೈಋತ್ಯ ಮಾನ್ಸೂನ್ (ಜೂನ್‌ನಿಂದ ಸೆಪ್ಟೆಂಬರ್)** : ಸಮವರ್ಷ ರೇಖೆಗಳು ಉತ್ತರ ದಕ್ಷಿಣವಾಗಿ ಕರಾವಳಿ ಮತ್ತು ಪಶ್ಚಿಮಘಟ್ಟಗಳಿಗೆ ಸಮನಾಂತರವಾಗಿವೆ. ಬೇಸಿಗೆಯಲ್ಲಿ ಕಾದ ಏಶಿಯಾ ಭೂಖಂಡ ಮತ್ತು ಅದನ್ನು ದಕ್ಷಿಣದಲ್ಲಿ ಸುತ್ತುವರಿದಿರುವ ತಣ್ಣನೆಯ ಸಾಗರಗಳ ವಾಯುಗಳ ಒತ್ತಡವೇ ಈ ನೈಋತ್ಯ ಮಾನ್ಸೂನ್ ಮಾರುತದ ಪರಿಚಲನೆಗೆ ಕಾರಣ. ಪೂರ್ವ ಆಫ್ರಿಕಾದ ಸೂಡಾನ್‌ನಿಂದ ರಾಜಾಸ್ಥಾನ ಮತ್ತು ಪಶ್ಚಿಮ ಬಂಗಾಳದವರೆಗೆ ಹಬ್ಬಿರುವ ದಕ್ಷಿಣ ಏಶಿಯಾದ ಭೂಖಂಡದಲ್ಲಿನ ಭಾಗವು ಚಳಿಗಾಲದಲ್ಲಿ ಹೆಚ್ಚಿನ ವಾಯುಒತ್ತಡವನ್ನು ಹೊಂದಿರುತ್ತದೆ. ಆದರೆ ಈ ಪ್ರದೇಶದ ವಾಯುಒತ್ತಡವು ಬೇಸಿಗೆಯಲ್ಲಿ (ಏಪ್ರಿಲ್–ಮೇ) ತೀರ ಕಡಿಮೆಯಾಗುತ್ತದೆ. ಮೇ ತಿಂಗಳ ಕೊನೆಗೆ ಆಗ್ನೇಯ ವಾಣಿಜ್ಯ ಮಾರುತಗಳು, ಭೂಮಧ್ಯ ರೇಖೆಯ ದಕ್ಷಿಣದಿಂದ ಉತ್ತರದತ್ತ ತೇವಭರಿತವಾದ ನೈಋತ್ಯ ಮಾರುತವಾಗಿ ಅರಬೀಸಮುದ್ರ ಮತ್ತು ಬಂಗಾಳಕೊಲ್ಲಿಗಳಡೆ ಚಲಿಸುತ್ತದೆ. ಇದನ್ನೇ ನೈಋತ್ಯದ ಮಾನ್ಸೂನ್ ಎಂದು ಕರೆಯಲಾಗುತ್ತದೆ. ಈ ನೈಋತ್ಯದ ಮಾರುತಗಳು, ಕರಾವಳಿಯನ್ನು ತಲುಪುವುದಕ್ಕಿಂತ ಮೊದಲು, ಸಾಗರದ ಮೇಲೆ ಹಾಯ್ದು ಬರುವಾಗ ಗಣನೀಯ ಎತ್ತರದವರೆಗೆ ಸಾಕಷ್ಟು ತೇವವನ್ನು ಹೀರಿಕೊಳ್ಳುತ್ತದೆ. ಈ ಆರ್ದ್ರ ಮಾನ್ಸೂನ್ ಪ್ರವಾಹವು ಘಟ್ಟಗಳಿಗೆ ಡಿಕ್ಕಿ ಹೊಡೆಯುವುದರಿಂದ ಪಶ್ಚಿಮ ಕರಾವಳಿ ಮತ್ತು ನೆರೆಯ ಪಶ್ಚಿಮ ಘಟ್ಟಗಳ ಪ್ರದೇಶಗಳಲ್ಲಿ ಭಾರೀ ಮಳೆಯಾಗುತ್ತದೆ. ಈ ಹೊಡೆತದ ಕ್ರಿಯೆಯಿಂದಾಗಿ ಈ ಪ್ರವಾಹವು ಕೆಳಕ್ಕಿಳಿಸಲ್ಪಟ್ಟು ತೀವ್ರ ಶೈತ್ಯೀಕರಣಕ್ಕೆ ಒಳಗಾಗಿ ದಟ್ಟವಾದ ಮೋಡಗಳು ರೂಪಗೊಂಡು, ನಂತರ ಆರ್ದ್ರತೆಯು ಘನೀಭವಿಸಿ ಭಾರೀ ಮಳೆಗೆ ಕಾರಣವಾಗುತ್ತವೆ. ಭಾರೀ ಮಳೆಯ ಪ್ರದೇಶಗಳಲ್ಲಿಯೂ ಮಾನ್ಸೂನ್ ಅವಧಿಯಲ್ಲಿ ಮಳೆಯು ನಿರಂತರವಾಗಿ ಬೀಳುವುದಿಲ್ಲ. ಮಳೆಯ ದಿನಗಳು ನಾಡಿಯ ಮಿಡಿತದಂತೆ ಇರುತ್ತವೆ. ಕೆಲಕಾಲದ ಭಾರೀ ಮಳೆಯ ನಂತರ, ಕೆಲ ದಿನಗಳವರೆಗೆ ಅಥವಾ ಒಂದೆರಡು ವಾರಗಳವರೆಗೆ ಮಳೆ ಇರುವುದಿಲ್ಲ. ಈ ಮಧ್ಯಂತರಗಳು ಜೂನ್ ಅಥವಾ ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳುಗಳಲ್ಲಿ ಇರುತ್ತವೆ; ಜುಲೈ ತಿಂಗಳಲ್ಲಿ ಇದು ಇರುವುದು ಅಪರೂಪ. ಕರಾವಳಿ ಮತ್ತು ಪಶ್ಚಿಮ ಘಟ್ಟಗಳಲ್ಲಿ ಭಾರೀ ಮಳೆ ಬೀಳುತ್ತದೆ. ಕರಾವಳಿಯಲ್ಲಿ ೩,೨೦೦ ಮಿ.ಮಿ. ಮಳೆ ಬೀಳುತ್ತದೆ. ಈ ಋತುವಿನ ಮಳೆಯು ಕರಾವಳಿ ಮತ್ತು ಘಟ್ಟಗಳ ಪ್ರದೇಶಗಳ ವಾರ್ಷಿಕ ಮಳೆಯ ಶೇಕಡ ೮೦ ರಿಂದ ೯೦ರಷ್ಟು ಆಗುವುದು.

ಮಳೆಯ ದಿನಗಳ ಸಂಖ್ಯೆಯು (೨೪ ಗಂಟೆಗಳಲ್ಲಿ ಕನಿಷ್ಠ ೨.೫ ಮಿ.ಮಿ. ಮಳೆ ಬಿದ್ದರೆ ಅದನ್ನು ಒಂದು ಮಳೆಯ ದಿನವೆಂದು ಪರಿಗಣಿಸಲಾಗುವುದು) ಭಾರಿ ಮಳೆಯ ಭಾಗಗಳಾದ ಕರಾವಳಿ ಮತ್ತು ಘಟ್ಟ ಪ್ರದೇಶಗಳಲ್ಲಿ ೯೫ ರಿಂದ ೧೦೫ ದಿನದವರೆಗೆ ಇದೆ.

**ಈಶಾನ್ಯದ ಮಾನ್ಸೂನ್ (ಅಕ್ಟೋಬರ್‌ನಿಂದ ಡಿಸೆಂಬರ್)**: ಈಶಾನ್ಯದ ಮಾನ್ಸೂನ್ ಅಕ್ಟೋಬರ್ ತಿಂಗಳಲ್ಲಿ ಪ್ರಾರಂಭವಾದರೆ, ಅದೇ ಕಾಲದಲ್ಲಿ ನೈಋತ್ಯದ ಮಾನ್ಸೂನ್ ಹಿಂಜರಿಯಲು ಆರಂಭಿಸುತ್ತದೆ. ಅಕ್ಟೋಬರ್ ತಿಂಗಳಲ್ಲಿ ಭಾರತವರ್ನ್ನೊಳಗೊಂಡ ದಕ್ಷಿಣ ಏಶಿಯಾದಲ್ಲಿ ವಾಯುಒತ್ತಡದ ವ್ಯವಸ್ಥೆಯು ಮಾರ್ಪಾಟಾಗುತ್ತದೆ. ಉತ್ತರದಲ್ಲಿ ಒತ್ತಡವು ಹೆಚ್ಚಾಗಿದ್ದರೆ, ದಕ್ಷಿಣದಲ್ಲಿ ಒತ್ತಡವು ಕಡಿಮೆಯಾಗಿರುತ್ತದೆ. ಆದರೆ ನೈಋತ್ಯದ ಮಾನ್ಸೂನ್ ಅವಧಿಯಲ್ಲಿ ಈ ಒತ್ತಡ ವ್ಯವಸ್ಥೆಯು ತದ್ವಿರುದ್ಧವಾಗಿರುತ್ತದೆ. ಬಂಗಾಳಕೊಲ್ಲಿಯ ದಕ್ಷಿಣದ ಭಾಗದಲ್ಲಿ ಒತ್ತಡವು ಕುಸಿಯುತ್ತದೆ. ಇದರಿಂದಾಗಿ ಮಾರುತಗಳ ಓಟದಲ್ಲಿ ಬದಲಾವಣೆಯಾಗಿ ಈಶಾನ್ಯ ಮಾರುತಗಳು ಭಾರತ ಮತ್ತು ಅದರ ನೆರೆಯ ಪ್ರದೇಶಗಳ ಮೇಲೆ ಬೀಸುತ್ತವೆ. ಈ ಭೂ ಸಂಜಾತ ಮಾರುತಗಳು ಸಾಮಾನ್ಯವಾಗಿ ಶುಷ್ಕವಾಗಿದ್ದು ಮಾರ್ಗ ಮಧ್ಯದ ಬಂಗಾಳಕೊಲ್ಲಿಯಿಂದ ತೇವವನ್ನು ಹೀರಿಕೊಳ್ಳುತ್ತವೆ. ದಕ್ಷಿಣ ಭಾರತದ ಪೂರ್ವ ಕರಾವಳಿಯನ್ನು ಈ ಮಾರುತಗಳು ತಟ್ಟಿದಾಗ ಈಶಾನ್ಯ ಮಾರುತದ ಮಳೆಯನ್ನು ನೀಡುತ್ತವೆ. ರಾಜ್ಯದ ಕರಾವಳಿ ಪ್ರದೇಶದಲ್ಲಿ ೨೦೦ ರಿಂದ ೩೦೦ ಮಿ.ಮಿ. ಗಳಷ್ಟು ಬೀಳುತ್ತವೆ. ಕರಾವಳಿ ಮತ್ತು ಘಟ್ಟ ಪ್ರದೇಶಗಳಲ್ಲಿ ಈ ವೃಷ್ಟಿಯು ವಾರ್ಷಿಕ ಮಳೆಯ ಶೇಕಡ ೧೦ಕ್ಕಿಂತ ಕಡಿಮೆಯಾಗಿದೆ. ಅಕ್ಟೋಬರಿನಲ್ಲೇ ಈ ಋತುವಿನ ಮಳೆಯ ಅರ್ಧಕ್ಕೂ ಹೆಚ್ಚಿನ ಭಾಗವು ಬೀಳುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೫೦ ರಿಂದ ೨೦೦ ಮಿ.ಮಿ. ನಷ್ಟು ಮಳೆಯಾಗುತ್ತದೆ. ನವೆಂಬರ್ ತಿಂಗಳಲ್ಲಿ ಅಕ್ಟೋಬರ್‌ಗಿಂತ ಕಡಿಮೆ ಮಳೆ ಬೀಳುತ್ತದೆ; ಡಿಸೆಂಬರ್ ತಿಂಗಳಲ್ಲಿ ಇದು ಇನ್ನೂ ಕ್ಷೀಣಿಸುತ್ತದೆ.

**ಚಳಿಗಾಲ (ಜನವರಿ ಫೆಬ್ರವರಿ)**: ಇದು ಶುಷ್ಕ ಋತುವಾಗಿದ್ದು ರಾಜ್ಯದಲ್ಲೆಲ್ಲ ಅಲ್ಪ ಮಳೆ ಬೀಳುತ್ತದೆ. ಬೇಸಿಗೆ ಕಾಲ (ಮಾರ್ಚಿನಿಂದ ಮೇ): ಮಾರ್ಚಿ ತಿಂಗಳು ಬಹುಮಟ್ಟಿಗೆ ಒಣ ಹವೆಯ ಕಾಲವಾಗಿದ್ದು ಆಗ ಅತ್ಯಂತ ಕಡಿಮೆ ಮಳೆ ಬೀಳುತ್ತದೆ. ಏಪ್ರಿಲ್ ತಿಂಗಳಲ್ಲಿ ಗಮನಾರ್ಹ ಬದಲಾವಣೆಯಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣದ ತುದಿಗಳಲ್ಲಿ ೧೫೦ ಮಿ.ಮಿ. ಮಳೆಯಾಗುತ್ತದೆ. ಈ ಋತುವಿನ ಒಟ್ಟು ಮಳೆಯ ಅರ್ಧಭಾಗವು ಮೇ ತಿಂಗಳಲ್ಲಿ ಆಗುತ್ತದೆ.

**ವಾಯು ಕುಸಿತ ಮತ್ತು ಬಿರುಗಾಳಿ**

ಬಿರುಗಾಳಿಯು ಅರಬೀಸಮುದ್ರಕ್ಕಿಂತ ಹೆಚ್ಚಾಗಿ ಬಂಗಾಳಕೊಲ್ಲಿಯಲ್ಲಿ ಕಾಣಿಸುತ್ತವೆ. ಒಂದು ವರ್ಷದಲ್ಲಿ ಸರಾಸರಿ ಎರಡು ಬಿರುಗಾಳಿಯು ದಕ್ಷಿಣ ಭಾರತದ ಪೂರ್ವದ ಕರಾವಳಿಯನ್ನು ತಾಕುತ್ತವೆ. ಅಥವಾ ಅದರ ಸನಿಹಕ್ಕೆ ಬರುತ್ತವೆ. ಆದರೆ ಸರಾಸರಿ ಹತ್ತು ವರ್ಷದ ಅವಧಿಯಲ್ಲಿ ಒಂದು ಬಿರುಗಾಳಿಯೂ ನಮ್ಮ ರಾಜ್ಯದ ಪಶ್ಚಿಮ ಕರಾವಳಿಯನ್ನು ತಾಕುವುದಿಲ್ಲ. ಬಿರುಗಾಳಿಗಳಲ್ಲಿ ಕೆಲವು ಮಾತ್ರ ಕರಾವಳಿಯನ್ನು ಅಪ್ಪಳಿಸಿ ನಂತರ ದುರ್ಬಲಗೊಂಡು ಪರ್ಯಾಯ ದ್ವೀಪವನ್ನು ದಾಟಿ ಅರಬೀ ಸಮುದ್ರದ ಮೇಲೆ ಹಾಯ್ದು ಅಲ್ಲಿ ಮತ್ತೆ ತೀವ್ರಗೊಂಡು ಬಿರುಗಾಳಿಯಾಗಿ ಮಾರ್ಪಡಬಹುದು. ಇದರಿಂದ, ನಮ್ಮ ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಬೀಸುಗಾಳಿಯಿಂದ ಕೂಡಿದ ವ್ಯಾಪಕ ಮಳೆ ಬೀಳಬಹುದು. ಇಂಥ ತೀರ ಅಪರೂಪದ ಘಟನೆಗಳು ಮೇ ಮತ್ತು ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಸಂಭವಿಸಬಹುದು. ಮೂರು ಅಥವಾ ಐದು ವರ್ಷಗಳಿಗೊಮ್ಮೆ ಇಂತಹ ಬಿರುಗಾಳಿ ಬೀಸುವ ಸಂಭವವುಂಟು. ೧೮೭೨ರ ಮೇ ೨, ೧೮೭೪ರ ಮೇ ೪, ೧೮೮೦ ನವೆಂಬರ್ ತಿಂಗಳ ಕೊನೆಯ ಭಾಗ, ೧೮೮೫ರ ನವೆಂಬರ್ ೧೭, ೧೯೦೯ರ ಮೇ ೩, ೧೯೧೬ರ ಅಕ್ಟೋಬರ್ ೧೬ ಮತ್ತು ೨೩ ಈ ದಿನಗಳಂದು ಬಂಗಾಳಕೊಲ್ಲಿಯ ಬಿರುಗಾಳಿಯು ಕರಾವಳಿಯನ್ನು ದಾಟಿ ರಾಜ್ಯದ ಮೇಲೆ ಹಾಯ್ದು ಭಾರೀ ಮಳೆ ಮತ್ತು ಬೀಸುಗಾಳಿ ಕಾರಣವಾದುವು. ಕೇರಳದ ಕರಾವಳಿಯಾದ ಅರಬೀ ಸಮುದ್ರದಲ್ಲಿ ಮಾನ್ಸೂನ್ ಪ್ರಾರಂಭವಾಗುವುದಕ್ಕಿಂತ

ಮುಂಚೆ ಮೇ ತಿಂಗಳ ಉತ್ತರಾರ್ಧದಲ್ಲಿ ಅರಬೀ ಸಮುದ್ರದ ನೈಋತ್ಯ ಭಾಗದಲ್ಲಿ ಹುಟ್ಟುವ ಬಿರುಗಾಳಿಯು, ಕೆಲವೊಮ್ಮೆ ಆದರೆ ತೀರ ವಿರಳವಾಗಿ ಉತ್ತರಾಭಿಮುಖವಾಗಿ ಚಲಿಸಿದರೆ ರಾಜ್ಯದ ಪಶ್ಚಿಮ ಕರಾವಳಿಯಲ್ಲಿ ಭಾರೀ ಮಳೆ ಮತ್ತು ಬೀಸುಗಾಳಿಗೆ ಕಾರಣವಾಗಬಹುದು.

## ಮಳೆ

ಜಿಲ್ಲೆಯಲ್ಲಿ ಉತ್ತಮ ಮಳೆಮಾಪನ ಕೇಂದ್ರಗಳ ಜಾಲವಿದ್ದು, ಸುಮಾರು ೯೦ ರಿಂದ ೧೨೦ ವರ್ಷಗಳವರೆಗಿನ ಅಂಕಿ-ಅಂಶಗಳು ದೊರೆಯುತ್ತವೆ. ೧೯೦೧ ರಿಂದ ೧೯೫೦ರವರೆಗೆ ಮಳೆಯಾದ

**ಕೋಷ್ಟಕ ೧.೧೦ : ಉಡುಪಿ ಜಿಲ್ಲೆಯಲ್ಲಿ ೧೯೦೧ ರಿಂದ ೧೯೫೦ ರ ವರೆಗಿನ ಸಾಮಾನ್ಯ ಮತ್ತು ವಾಸ್ತವಿಕ ಮಳೆ ಮಿ.ಮೀ.ಗಳಲ್ಲಿ**

| ಮಳೆಮಾಪನ ಕೇಂದ್ರಗಳು | | ಉಡುಪಿ | ಬೈಂದೂರು | ಕಾರ್ಕಳ | ಕುಂದಾಪುರ |
|---|---|---|---|---|---|
| ಲಭ್ಯವಿರುವ ವರ್ಷಗಳ ಅಂಕಿ ಅಂಶಗಳು | | ೫೦ | ೫೦ | ೫೦ | ೫೦ |
| ಜನವರಿ | ಅ | ೩.೬ | ೧.೩ | ೭.೬ | ೧.೫ |
| | ಆ | ೦.೩ | ೦.೧ | ೦.೪ | ೦.೧ |
| ಫೆಬ್ರವರಿ | ಅ | ೩.೩ | ೦.೮ | ೧.೮ | ೨.೫ |
| | ಆ | ೦.೧ | ೦.೧ | ೦.೧ | ೦.೧ |
| ಮಾರ್ಚ್ | ಅ | ೩.೩ | ೨.೩ | ೧೨.೨ | ೩.೮ |
| | ಆ | ೦.೨ | ೦.೨ | ೦.೮ | ೦.೧ |
| ಏಪ್ರಿಲ್ | ಅ | ೨೯.೭ | ೨೩.೯ | ೪೮.೫ | ೨೫.೭ |
| | ಆ | ೨.೦ | ೧.೨ | ೩.೫ | ೧.೩ |
| ಮೇ | ಅ | ೧೪೧.೫ | ೧೨೧.೪ | ೧೬೦.೫ | ೧೨೬.೫ |
| | ಆ | ೫.೮ | ೪.೮ | ೬.೯ | ೫.೧ |
| ಜೂನ್ | ಅ | ೯೯೫.೯ | ೧೧೨೩.೯ | ೧೧೦೮.೫ | ೧೦೩೭.೮ |
| | ಆ | ೨೫.೧ | ೨೪.೮ | ೨೫.೫ | ೨೪.೫ |
| ಜುಲೈ | ಅ | ೧೧೯೭.೬ | ೧೩೬೧.೭ | ೧೫೩೨.೧ | ೧೨೧೧.೩ |
| | ಆ | ೨೮.೨ | ೨೯.೨ | ೨೯.೫ | ೨೮.೨ |
| ಆಗಸ್ಟ್ | ಅ | ೭೨೧.೬ | ೮೨೩.೨ | ೯೭೬.೪ | ೬೯೮.೩ |
| | ಆ | ೨೬.೦ | ೨೭.೧ | ೨೭.೬ | ೨೫.೮ |
| ಸೆಪ್ಟೆಂಬರ್ | ಅ | ೩೫೧.೫ | ೩೯೫.೨ | ೪೧೨.೨ | ೩೪೯.೮ |
| | ಆ | ೧೭.೪ | ೧೮.೦ | ೧೮.೮ | ೧೬.೮ |
| ಅಕ್ಟೋಬರ್ | ಅ | ೧೮೭.೨ | ೨೦೧.೨ | ೨೯೮.೭ | ೧೫೬.೨ |
| | ಆ | ೯.೦ | ೯.೬ | ೧೩.೮ | ೭.೯ |
| ನವೆಂಬರ್ | ಅ | ೬೮.೮ | ೭೩.೪ | ೧೧೧.೮ | ೬೬.೦ |
| | ಆ | ೩.೮ | ೩.೯ | ೬.೨ | ೩.೩ |
| ಡಿಸೆಂಬರ್ | ಆ | ೧೪.೭ | ೯.೧ | ೨೪.೧ | ೧೩.೫ |
| | ಆ | ೧.೦ | ೦.೮ | ೧.೫ | ೦.೮ |

ವಿವರಗಳನ್ನು ಕೋಷ್ಟಕ ೧.೧೨ರಲ್ಲಿ ನೀಡಿದೆ. ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳವರೆಗಿನ ಕಾಲ ಪ್ರಮುಖ ಮಳೆಗಾಲದ ಅವಧಿಯಾಗಿದೆ. ವಾರ್ಷಿಕವಾಗಿ ಸರಾಸರಿ ೩,೯೩೦ಮೀ.ಮೀ. ಮಳೆಯಾಗುತ್ತದೆ. ಮಳೆಯ ಕಡಲ ಕಡೆಯಿಂದ ಪೂರ್ವದ ಪಶ್ಚಿಮ ಘಟ್ಟಗಳೆಡೆ ವೃದ್ಧಿಯಾಗುತ್ತಾ ಹೋಗುತ್ತದೆ. ಸುಮಾರು ವಾರ್ಷಿಕ ಮಳೆಯ ಶೇ. ೮೭ ರಷ್ಟು ಭಾಗ ನೈಋತ್ಯ ಮಾನ್ಸೂನ್ ಕಾಲದಲ್ಲಿ ಬೀಳುತ್ತದೆ. ಸಾಮಾನ್ಯವಾಗಿ ಜುಲೈ ತಿಂಗಳು ಅತಿ ಹೆಚ್ಚಿನ ಮಳೆ ಬೀಳುವ ತಿಂಗಳಾಗಿದೆ. ಕೋಷ್ಟಕ ೧.೧೦ ನೋಡಿ.

## ಒತ್ತಡ ಮತ್ತು ಗಾಳಿ

ನೈಋತ್ಯ ಮಾನ್ಸೂನ್ ಋತುವಿನ ಕಾಲದಲ್ಲಿ ಸಾಮಾನ್ಯವಾಗಿ ರಾಜ್ಯದಲ್ಲಿ ಗಾಳಿಯು ಪಶ್ಚಿಮ ಅಥವಾ ನೈಋತ್ಯ, ಒಳನಾಡಿನಲ್ಲಿ ವಾಯವ್ಯ ದಿಕ್ಕಿನಿಂದ ಮತ್ತು ಈಶಾನ್ಯ ಮಾನ್ಸೂನ್ ಋತುವಿನ ಕಾಲದಲ್ಲಿ ಈಶಾನ್ಯ ಅಥವಾ ಪೂರ್ವದಿಕ್ಕಿನಿಂದ ಬೀಸುತ್ತದೆ. ಚಳಿಗಾಲದಲ್ಲಿ ಉತ್ತರ ಭಾರತದಲ್ಲಿ ವಾಯುವಿನ ಒತ್ತಡ ಹೆಚ್ಚಾಗಿದ್ದರೆ ದಕ್ಷಿಣದಲ್ಲಿ ಇದು ಕಡಿಮೆಯಾಗಿರುತ್ತದೆ. ಚಳಿಗಾಲದಲ್ಲಿ ರಾಜ್ಯದ ವಾಯುವಿನ ಒತ್ತಡದ ಇಳಿತದ ಪ್ರಮಾಣವು ದುರ್ಬಲವಾಗಿರುತ್ತದೆ. ಮತ್ತು ಗಾಳಿಗಳು ಈಶಾನ್ಯ ಅಥವಾ ಪೂರ್ವದಿಂದ ಬೀಸುತ್ತವೆ. ಮಾರ್ಚಿಯಲ್ಲಿ ಒತ್ತಡವು ಕ್ಷೀಣಿಸಲು ಪ್ರಾರಂಭವಾಗುತ್ತದೆ. ಏಪ್ರಿಲ್ ವೇಳೆಗೆ ಒತ್ತಡದ ಇಳಿತದ ತಿರುವುಮುರುವಾಗಿ ಉತ್ತರ ಭಾರತದಲ್ಲಿ  ಒತ್ತಡವು ಕಡಿಮೆಯಾಗುತ್ತದೆ.  ಏಪ್ರಿಲ್ ವೇಳೆಗೆ ಒತ್ತಡದ ಇಳಿತದ ತಿರುವು ಮುರುವಾಗಿ ಉತ್ತರಭಾರತದಲ್ಲಿ ಒತ್ತಡವು ಕಡಿಮೆಯಾದರೆ ದಕ್ಷಿಣದಲ್ಲಿ ಹೆಚ್ಚಾಗುತ್ತದೆ. ಮಾರ್ಚಿ ಮತ್ತು ಏಪ್ರಿಲ್ ತಿಂಗಳಲ್ಲಿ ಒತ್ತಡದ ಇಳಿತ ರಾಜ್ಯದಲ್ಲಿ ಇನ್ನೂ ದುರ್ಬಲವಾಗಿದ್ದು, ಲಘುವಾದ ಗಾಳಿಗಳು ಸಾಯಂಕಾಲದಲ್ಲಿ ಕರಾವಳಿ ಪ್ರದೇಶದಲ್ಲಿ ಪಶ್ಚಿಮಾಭಿಮುಖವಾಗಿ ಬೀಸುತ್ತವೆ; ಬೇಸಿಗೆಯು ಮುಂದುವರಿದಂತೆ ಉತ್ತರಭಾರತದಲ್ಲಿ ಆ ಕಾಲಕ್ಕನುಗುಣವಾದ ಲಘು ಒತ್ತಡವು ಸ್ಪಷ್ಟವಾಗುತ್ತದೆ. ರಾಜ್ಯದಲ್ಲಿ ಲಘು ಒತ್ತಡದ ಇಳಿತದ ಪ್ರಮಾಣವು ಜುಲೈ ತಿಂಗಳಿನಲ್ಲಿ ತೀವ್ರಗೊಳ್ಳುತ್ತದೆ. ಸಮಭಾರರೇಖೆಗಳು (ಸಮನಾದ ಒತ್ತಡಗಳನ್ನು ಸೇರಿಸುವ ರೇಖೆಗಳು) ವಾಯವ್ಯದಿಂದ ಆಗ್ನೇಯ ದಿಕ್ಕಿನಲ್ಲಿ ಚಲಿಸುತ್ತವೆ. ಗಾಳಿಯು ಮೇ ತಿಂಗಳಿಗಿಂತ ಜೂನ್ ಮತ್ತು ಜುಲೈ ತಿಂಗಳಲ್ಲಿ ಬಲವಾಗಿದ್ದು ಪಶ್ಚಿಮ ಅಥವಾ ನೈಋತ್ಯ ದಿಕ್ಕಿನಿಂದ ಕರಾವಳಿ ಪ್ರದೇಶದ ಮೇಲೆ ಸಾಮಾನ್ಯವಾಗಿ ಸಂಜೆ ಹೊತ್ತಿನಲ್ಲಿ ಬೀಸುತ್ತವೆ. ಗಾಳಿ ಮತ್ತು ಒತ್ತಡ ವ್ಯವಸ್ಥೆಯು ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಹೆಚ್ಚು ಕಡಿಮೆ ಒಂದೇ ಇರುತ್ತದೆ. ಅಕ್ಟೋಬರ್‌ನಲ್ಲಿ ಒತ್ತಡದ ಇಳಿತವು ತಿರುವು ಮುರುವಾಗುತ್ತದೆ.  ಉತ್ತರ ಭಾರತದಲ್ಲಿ ಪುನ: ಒತ್ತಡ ಹೆಚ್ಚಾಗಿ, ದಕ್ಷಿಣದಲ್ಲಿ ಕಡಿಮೆಯಾಗುತ್ತದೆ. ಒತ್ತಡದ ಇಳಿತ ಮತ್ತು ಗಾಳಿಯು ಅಕ್ಟೋಬರಿನಲ್ಲಿ ಸ್ವಲ್ಪ ವ್ಯತ್ಯಾಸಗೊಳ್ಳುತ್ತವೆ. ಆದರೆ ನಂತರ ಈಶಾನ್ಯದ ಮಾನ್ಸೂನ್ ಕಾಲದಲ್ಲಿ ಗಾಳಿಯು ಈಶಾನ್ಯ ಮತ್ತು ಪೂರ್ವದಿಂದ ಬೀಸುತ್ತದೆ. ಒತ್ತಡದ ಇಳಿತವು ಸ್ವಲ್ಪ ತೀವ್ರವಾಗುತ್ತದೆ.

## ಉಷ್ಣತೆ

ಉಷ್ಣತೆಯು ಜನವರಿಯ ಆದಿ ಭಾಗದಲ್ಲಿ ಅತಿ ಕಡಿಮೆಯಾಗಿದ್ದು ಕ್ರಮೇಣ ಏರುತ್ತಾ ಹೋಗಿ, ಫೆಬ್ರವರಿಯ ಮಧ್ಯ ಭಾಗದಿಂದ ಅಥವಾ ಮಾರ್ಚಿಯ ಆದಿಭಾಗದಿಂದ ತೀವ್ರವಾಗಿ ಏರುತ್ತದೆ. ಅತಿ ಉಷ್ಣತೆಯು ಕರಾವಳಿ ಪ್ರದೇಶದಲ್ಲಿ ಮೇ ತಿಂಗಳಲ್ಲಿ ಇರುತ್ತದೆ. ಜನವರಿ ತಿಂಗಳಲ್ಲಿ ಕರಾವಳಿ ಪ್ರದೇಶದಲ್ಲಿ ದಿನದ ಸರಾಸರಿ ಗರಿಷ್ಠ ಉಷ್ಣತೆಯು ೩೧ ರಿಂದ ೩೨ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ.  ಘಟ್ಟ ಮತ್ತು ಮಲೆನಾಡಿನಲ್ಲಿ ಇದು ೨೮ ರಿಂದ ೩೨ ಡಿಗ್ರಿ ಸೆ. ಇರುತ್ತದೆ. ರಾಜ್ಯದ ಬಹುಭಾಗದಲ್ಲಿ ಅತಿ ಹೆಚ್ಚಿನ ಉಷ್ಣ ಮಾಸವೆನ್ನಬಹುದಾದ ಮೇ ತಿಂಗಳಿನಲ್ಲಿ ಕರಾವಳಿ ಪ್ರದೇಶದಲ್ಲಿ ಉಷ್ಣತೆಯು ೩೫ ರಿಂದ ೩೬ ಡಿಗ್ರಿ ಸೆ. ಇರುತ್ತದೆ.  ಮೇ ತಿಂಗಳ ನಂತರ ಉಷ್ಣತೆಯು ಇಳಿಯುತ್ತದೆ. ಈ ಉಷ್ಣತೆಯು ಕರಾವಳಿ ಪ್ರದೇಶದಲ್ಲಿ ೨೮ ಡಿಗ್ರಿ ಸೆ. ತಲುಪುತ್ತದೆ. ಘಟ್ಟಗಳಲ್ಲಿ ಮತ್ತು ಮಲೆನಾಡಿನಲ್ಲಿ ಇದು ೨೦ ರಿಂದ ೨೪ ಡಿಗ್ರಿ ಸೆ. ಇರುತ್ತದೆ. ಕರಾವಳಿ ಪ್ರದೇಶದಲ್ಲಿ ಮತ್ತು ಹಾಸನದವರೆಗೆ ಇರುವ ಮಲೆನಾಡು ಪ್ರದೇಶದಲ್ಲಿ ಜುಲೈ ತಿಂಗಳ ಗರಿಷ್ಠ ಉಷ್ಣತೆಯು ಜನವರಿ ತಿಂಗಳ ಗರಿಷ್ಠ ಉಷ್ಣತೆಗಿಂತ ಕಡಿಮೆಯಾಗಿದೆ ಎಂಬುದು ಕುತೂಹಲಕಾರಿ

ವಿಷಯ. ಜುಲೈ ತಿಂಗಳಲ್ಲಿ ಈ ಪ್ರದೇಶದ ಆಕಾಶವು ಮುಗಿಲಿನಿಂದ ಮುಚ್ಚಿದ್ದು, ಆಗಾಗ ಮಳೆ ಬೀಳುತ್ತದೆ. ಜನವರಿಯಲ್ಲಿ ಆಕಾಶ ಶುಭ್ರವಾಗಿದ್ದು ಹಗಲಿನಲ್ಲಿ ಸೂರ್ಯನ ಬಿಸಿಲು ಬೀಳುತ್ತದೆ. ಅಕ್ಟೋಬರ್ ಹೊತ್ತಿಗೆ ಗರಿಷ್ಠ ಉಷ್ಣತೆಯು ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಏರಿತ್ತದೆ. ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಹಗಲು ಮತ್ತು ರಾತ್ರಿಯ ವೇಳೆಯ ಉಷ್ಣತೆಯು ಹೆಚ್ಚಿದ್ದರೂ ಡಿಸೆಂಬರ್ ತಿಂಗಳಿನಲ್ಲಿ ದೈನಂದಿನ ಗರಿಷ್ಠ ಉಷ್ಣತೆಯು ಹೆಚ್ಚಾಗಿರುತ್ತದೆ. ಜನವರಿಯಲ್ಲಿ ದಿನದ ಸರಾಸರಿ ಕನಿಷ್ಠ ಉಷ್ಣತೆಯು ಕರಾವಳಿಯಲ್ಲಿ ಸುಮಾರು ೨೦ ಡಿಗ್ರಿ ಸೆ. ಇದ್ದರೆ, ಘಟ್ಟ ಮತ್ತು ಮಲೆನಾಡು ಪ್ರದೇಶಗಳಲ್ಲಿ ೧೩ ರಿಂದ ೧೪ ಡಿಗ್ರಿ ಸೆ.ಗೆ ಇಳಿಯುತ್ತದೆ. ಇದುವರೆಗೂ ದಾಖಲಾದ ಅತಿ ಕನಿಷ್ಠ ಉಷ್ಣತೆಯು, ಕರಾವಳಿಯಲ್ಲಿ ೧೬ ರಿಂದ ೧೮ ಡಿಗ್ರಿ.ಸೆ. ಇದೆ. ವಾರ್ಷಿಕ ಸರಾಸರಿ ಉಷ್ಣತೆಯ ವ್ಯಾಪ್ತಿಯು (ಅಂದರೆ ಸರಾಸರಿ ದಿನದ ಗರಿಷ್ಠ ಉಷ್ಣತೆ ಮತ್ತು ಸರಾಸರಿ ದಿನದ ಕನಿಷ್ಠ ಉಷ್ಣತೆಯ ನಡುವಿನ ಅಂತರ) ಕರಾವಳಿ ಪ್ರದೇಶದಲ್ಲಿ ಅತಿ ಕಡಿಮೆ (ಸುಮಾರು ೬ ಡಿಗ್ರಿ ಸೆ.) ಇರುವುದು ಗಮನಾರ್ಹ ಅಂಶ. ವಾರ್ಷಿಕ ಸರಾಸರಿ ಉಷ್ಣತೆಯು (ಅಂದರೆ ೧೨ ತಿಂಗಳ ಸರಾಸರಿ ಮಾಸಿಕ ಉಷ್ಣತೆಯು) ಘಟ್ಟ ಮತ್ತು ಮಲೆನಾಡು ಪ್ರದೇಶದಲ್ಲಿ ೧೮ ರಿಂದ ೨೮ ಡಿಗ್ರಿ ಸೆ. ಇರುತ್ತದೆ. ಇದು ಕರಾವಳಿಯಲ್ಲಿ ೨೭ ಡಿಗ್ರಿ ಸೆ. ಇದೆ. ಕೋಷ್ಟಕ: ೧.೧೪ ರಲ್ಲಿ ಉಷ್ಣತೆಯ ವಿವರಗಳನ್ನು ನೀಡಿದೆ.

**ಆರ್ದ್ರತೆ:** ರಾಜ್ಯದ ಸರಾಸರಿ ಸಾಪೇಕ್ಷ ಆರ್ದ್ರತೆಯು ಜುಲೈ ಮತ್ತು ಆಗಸ್ಟ್‌ನಲ್ಲಿ ಅತಿ ಹೆಚ್ಚು ಮತ್ತು ಮಾರ್ಚ್–ಏಪ್ರಿಲ್‌ನಲ್ಲಿ ಅತಿ ಕಡಿಮೆಯಾಗಿರುತ್ತದೆ. ಈ ಸಾಪೇಕ್ಷ ಆರ್ದ್ರತೆಯು ವಾತಾವರಣದಲ್ಲಿರುವ ನೀರ ಆವಿಯನ್ನಷ್ಟೇ ಅಲ್ಲ ಉಷ್ಣತೆಯನ್ನೂ ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಕರಾವಳಿ, ಘಟ್ಟಗಳು ಮತ್ತು ಮಲೆನಾಡು ಪ್ರದೇಶಗಳು ಬಯಲುನಾಡಿಗಿಂತ ಹೆಚ್ಚು ಆರ್ದ್ರವಾಗಿವೆ. ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ಶೇಕಡ ೩೦ ರಿಂದ ೪೦ ರಷ್ಟು ಸಾಪೇಕ್ಷ ಆರ್ದ್ರತೆಯನ್ನು ಮಾರ್ಚ್–ಏಪ್ರಿಲ್ ಅವಧಿಯಲ್ಲಿ ಗುರುತಿಸಬಹುದು. ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಘಟ್ಟಗಳಲ್ಲಿ ಮತ್ತು ಮಲೆನಾಡುಪ್ರದೇಶಗಳಲ್ಲಿ ಶೇಕಡ ೯೦ಕ್ಕೂ ಮೇಲ್ಪಟ್ಟು ಸಾಪೇಕ್ಷ ಅರ್ದ್ರತೆಯು ಇರುತ್ತದೆ. ಇದೇ ಅತಿ ಹೆಚ್ಚಿನ ಆರ್ದ್ರತೆ. ಸೆಪ್ಟೆಂಬರ್ ನಂತರ ಆರ್ದ್ರತೆಯು ಕ್ರಮೇಣವಾಗಿ ನವೆಂಬರ್‌ವರೆಗೆ ಇಳಿದು, ನಂತರ ಇಳಿತವು ಇನ್ನೂ ತೀವ್ರವಾಗುತ್ತದೆ.

**ಮುಗಿಲ ಮಸುಕು :** ಮುಗಿಲುಗಳ ಮುಸುಕಿರುವಿಕೆ (cloudiness)ಯನ್ನು ಓಕ್ಟಾಗಳಲ್ಲಿ ಅಳೆಯಲಾಗುತ್ತದೆ. ಒಂದು ಓಕ್ಟಾ ಎಂದರೆ ಮೇಘಾಚ್ಛಾದಿತ ಆಕಾಶದ ಎಂಟರಲ್ಲಿ ಒಂದು ಭಾಗ. ಪೂರ್ಣವಾಗಿ ಮೋಡಗಳಿಂದ ಆವರಿಸಲ್ಪಟ್ಟ ಆಕಾಶವನ್ನು ೮ ಓಕ್ಟಾಗಳಷ್ಟು ಮುಚ್ಚಿ ಹೋಗಿದೆ ಎಂದೂ ಮತ್ತು ಅರ್ಧ ಆವರಿಸಲ್ಪಟ್ಟ ಆಕಾಶವನ್ನು ೪ ಓಕ್ಟಾಗಳಷ್ಟು ಮುಚ್ಚಿಹೋಗಿದೆ ಎಂದೂ ಬಣ್ಣಿಸಲಾಗುವುದು. ನೈಋತ್ಯ ಮಾನ್ಸೂನ್ ಋತುವಿನಲ್ಲಿ ಮುಗಿಲ ಮುಸುಕು ಅತಿ ಹೆಚ್ಚಾಗಿದ್ದು, ಜನವರಿ ಮಾರ್ಚ್ ಅವಧಿಯಲ್ಲಿ ತೀರಾ ಕಡಿಮೆಯಾಗಿದ್ದು ಆಕಾಶವು ಶುಭ್ರವಾಗಿರುತ್ತದೆ. ಆಗೊಮ್ಮೆ ಈಗೊಮ್ಮೆ ದೊಡ್ಡ ಅಥವಾ ಮಧ್ಯಮ ಗಾತ್ರದ ಮೋಡಗಳು ತೇಲುತ್ತವೆ. ಕರಾವಳಿ ಘಟ್ಟಗಳು ಮತ್ತು ಮಲೆನಾಡು ಪ್ರದೇಶಗಳಲ್ಲಿ ಜುಲೈ–ಆಗಸ್ಟ್ ಅವಧಿಯಲ್ಲಿ ಆಕಾಶವು ಅತಿಯಾಗಿ ಮುಸುಕಿದ್ದು ಮೋಡಗಳು ತೀರ ಕೆಳಗೆ ತೇಲಾಡುತ್ತವೆ. ಈ ಅವಧಿಯಲ್ಲಿ ತಿಂಗಳ ೨೦ ದಿನಗಳಿಗಿಂತ ಹೆಚ್ಚು ಅವಧಿಯಲ್ಲಿ ಮಳೆಯು ಬೀಳುತ್ತದೆ ಮತ್ತು ಎಷ್ಟೋ ದಿನಗಳವರೆಗೆ ಸೂರ್ಯನ ದರ್ಶನವಾಗುವುದಿಲ್ಲ.

**ಹವಾಗುಣದ ಇತರ ಸಂಗತಿಗಳು :** ಸಿಡಿಲು, ಬಿರುಗಾಳಿ, ಆಲಿಕಲ್ಲು, ಮಳೆ, ಧೂಳಿನ ಬಿರುಗಾಳಿ, ಚಂಡಮಾರುತ ಮತ್ತು ಮಂಜು ಇವು ಇತರ ಪ್ರಮುಖ ಹವಾಗುಣ ಸಂಬಂಧೀ ಸಂಗತಿಗಳು. ಸಿಡಿಲು ಬಿರುಗಾಳಿಯು ಮುಖ್ಯವಾಗಿ ಬೇಸಿಗೆಯ ತಿಂಗಳುಗಳಲ್ಲಿ (ಏಪ್ರಿಲ್–ಮೇ) ಮತ್ತು ಸೆಪ್ಟೆಂಬರ್–ಅಕ್ಟೋಬರ್ ತಿಂಗಳಲ್ಲಿ ಬೀಸುತ್ತವೆ. ನವೆಂಬರ್–ಮಾರ್ಚ್ ಅವಧಿಯಲ್ಲಿ ಸಿಡಿಲು ಬಿರುಗಾಳಿಗಳು ತೀರ ವಿರಳ. ಆದರೆ ಜೂನ್–ಆಗಸ್ಟ್ ಅವಧಿಯಲ್ಲಿ ಕೆಲವು ಸಿಡಿಲು ಬಿರುಗಾಳಿ ಬರುವುದೂ ಉಂಟು. ಆದರೆ ಇದು ತೀರ

ಅಪರೂಪ. ಆಲೀಕಲ್ಲು ಮಳೆ ವಿರಳ. ಏಪ್ರಿಲ್–ಮೇ ತಿಂಗಳುಗಳ ಕೆಲವು ಸಲ ಸೆಪ್ಟೆಂಬರ್–ಅಕ್ಟೋಬರಿನಲ್ಲಿ ಸಿಡಿಲು ಬಿರುಗಾಳಿಗಳೊಂದಿಗೆ ಮತ್ತು ಭಾರೀ ಮಳೆಯೊಡನೆ ಆಲೀಕಲ್ಲು ಮಳೆ ಬರುವುದುಂಟು. ಜೂನ್‌ನಿಂದ

**ಕೋಷ್ಟಕ ೧.೧೧ : ಮಾಸಿಕ ಸರಾಸರಿ ಉಷ್ಣತೆ, ಅತಿ ಹೆಚ್ಚು ಹಾಗೂ ಅತಿ ಕಡಿಮೆ ಉಷ್ಣತೆ ಸಾಪೇಕ್ಷ ಆರ್ದ್ರತೆ, ಮಂಗಳೂರು.**

| ತಿಂಗಳು | ಸರಾಸರಿ ದೈನಂದಿನ ಉಷ್ಣತೆ ಡಿಗ್ರಿ ಸೆಲ್ಸಿಯಸ್ | | ಗರಿಷ್ಟ ದಾಖಲಾದ ಉಷ್ಣತೆ | | ಕನಿಷ್ಟ ದಾಖಲಾದ ಉಷ್ಣತೆ | | ಸಾಪೇಕ್ಷ ಆರ್ದ್ರತೆ (ಶೇಕಡಾ) | |
|---|---|---|---|---|---|---|---|---|
| | ಗರಿಷ್ಟ | ಕನಿಷ್ಟ | ಡಿಗ್ರಿ ಸೆಲ್ಸಿಯಸ್ | ದಿನಾಂಕ | ಡಿಗ್ರಿ ಸೆಲ್ಸಿಯಸ್ | ದಿನಾಂಕ | ಬೆಳಿಗ್ಗೆ ೮.೩೦ | ಸಂಜೆ ೫.೩೦ |
| ಜನವರಿ | ೩೧.೬ | ೨೧.೫ | ೩೬.೧ | ೨೧-೧-೧೯೫೭ | ೧೬.೭ | ೧೩-೧-೧೯೧೧ | ೬೯ | ೬೩ |
| ಫೆಬ್ರವರಿ | ೩೧.೨ | ೨೨.೬ | ೩೭.೮ | ೨೮-೨-೧೯೨೦ | ೧೬.೭ | ೮-೨-೧೯೧೧ | ೭೪ | ೬೭ |
| ಮಾರ್ಚ್ | ೩೨.೦ | ೨೪.೪ | ೩೭.೩ | ೭-೩-೧೯೫೮ | ೧೮.೩ | ೪-೩-೧೯೧೧ | ೭೫ | ೬೮ |
| ಏಪ್ರಿಲ್ | ೩೨.೮ | ೨೫.೯ | ೩೫.೬ | ೨೮-೪-೧೯೨೧ | ೨೦.೦ | ೨೩-೪-೧೯೫೪ | ೭೨ | ೬೯ |
| ಮೇ | ೩೨.೬ | ೨೬.೧ | ೩೬.೭ | ೨-೫-೧೯೨೧ | ೧೮.೯ | ೬-೫-೧೯೧೧ | ೭೫ | ೭೨ |
| ಜೂನ್ | ೨೯.೨ | ೨೩.೮ | ೩೪.೪ | ೫-೬-೧೯೨೩ | ೨೦.೦ | ೧೬-೬-೧೯೨೦ | ೮೮ | ೮೭ |
| ಜುಲೈ | ೨೮.೬ | ೨೩.೫ | ೩೧.೭ | ೨೫-೭-೧೯೫೪ | ೨೦.೬ | ೨೫-೭-೧೯೩೧ | ೯೦ | ೮೯ |
| ಆಗಸ್ಟ್ | ೨೮.೭ | ೨೩.೫ | ೩೨.೨ | ೨೬-೮-೧೯೩೨ | ೨೦.೬ | ೧೨-೮-೧೯೧೧ | ೯೧ | ೮೮ |
| ಸೆಪ್ಟೆಂಬರ್ | ೨೮.೯ | ೨೩.೫ | ೩೧.೭ | ೨೩-೯-೧೯೫೫ | ೨೧.೧ | ೯-೯-೧೯೫೦ | ೮೮ | ೮೫ |
| ಅಕ್ಟೋಬರ್ | ೩೦.೦ | ೨೩.೭ | ೩೪.೪ | ೩೧-೧೦-೧೯೪೧ | ೨೦.೦ | ೨೩-೧೦-೧೯೩೩ | ೮೪ | ೭೯ |
| ನವೆಂಬರ್ | ೩೧.೧ | ೨೩.೨ | ೩೫.೬ | ೩-೧೧-೧೯೪೧ | ೧೮.೩ | ೩೦-೧೧-೧೯೫೦ | ೭೬ | ೭೨ |
| ಡಿಸೆಂಬರ್ | ೩೧.೭ | ೨೧.೮ | ೩೫.೦ | ೧-೧೨-೧೯೫೩ | ೧೬.೭ | ೧೦-೧೨-೧೯೫೦ | ೬೮ | ೬೩ |
| ವಾರ್ಷಿಕ | ೩೦.೭೯ | ೨೩.೬೭೫ | | | | | | |

**ಕೋಷ್ಟಕ ೧.೧೨ : ಮಂಗಳೂರಿನಲ್ಲಿ ಮಾಸಿಕವಾರು ಗಾಳಿ ಬೀಸುವ ಸರಾಸರಿ ವೇಗ (ಗಂಟೆಗೆ ಕಿ.ಮೀ.ಗಳಲ್ಲಿ)**

| | | | | | |
|---|---|---|---|---|---|
| ಜನವರಿ | ೭.೯ | ಫೆಬ್ರವರಿ | ೮.೨ | ಮಾರ್ಚ್ | ೭.೯ |
| ಏಪ್ರಿಲ್ | ೮.೨ | ಮೇ | ೯.೦ | ಜೂನ್ | ೮.೭ |
| ಜುಲೈ | ೯.೦ | ಆಗಸ್ಟ್ | ೭.೪ | ಸೆಪ್ಟೆಂಬರ್ | ೬.೪ |
| ಅಕ್ಟೋಬರ್ | ೬.೬ | ನವೆಂಬರ್ | ೬.೬ | ಡಿಸೆಂಬರ್ | ೭.೮ |
| ವಾರ್ಷಿಕ | ೭.೮ | | | | |

ಆಗಸ್ಟ್‌ವರೆಗೆ ಪಶ್ಚಿಮ ಘಟ್ಟಗಳಲ್ಲಿ ಮತ್ತು ಮಲೆನಾಡಿನಲ್ಲಿ ಸಿಡಿಲು ಬಿರುಗಾಳಿ ಬೀಸು ಕೆಲವು ಸಿಡಿಲು ಬಿರುಗಾಳಿಗಳು ಚಂಡಮಾರುತದೊಂದಿಗೆ ಬರುತ್ತದೆ. ಹಠಾತ್ತನೆ ಅಂದರೆ ೩ ರಿಂದ ೫ ನಿಮಿಷಗಳಲ್ಲಿಯೇ ಪ್ರತಿ ಗಂಟೆಗೆ ೫೦ ಕಿ.ಮೀ.ಗಿಂತ ಹೆಚ್ಚಿನ ವಾಯುವೇಗವನ್ನು ಪಡೆದು, ಸುಮಾರು ೧೦ ನಿಮಿಷಗಳ ಕಾಲ ಬೀಸುವ ಗಾಳಿಯನ್ನು ಚಂಡಮಾರುತವೆಂದು (squall) ಕರೆಯಲಾಗುವುದು. ಕೋಷ್ಟಕ ೧.೧೧, ೧.೧೨ ಹಾಗೂ ೧.೧೩ರಲ್ಲಿ ಹವಾಮಾನದ ಇತರ ಸಂಗತಿಗಳ ವಿವರಗಳನ್ನು ನೀಡಿದೆ.

## ಜಿಲ್ಲೆಯಲ್ಲಿ ಪರಿಸರದ ಪರಿಸ್ಥಿತಿ

ಭೂಮಿಯ ಮೇಲೆ ಜೀವಿಗಳ ಉಳಿವು ನೈಸರ್ಗಿಕ (ಪ್ರಾಕೃತಿಕ) ಸಂಪನ್ಮೂಲಗಳ ಲಭ್ಯತೆಯನ್ನು ಅವಲಂಬಿಸಿದೆ. ಈ ಸಂಪನ್ಮೂಲಗಳ ಉಪಯೋಗವು ನಮ್ಮ ಸುತ್ತಮುತ್ತಲಿರುವ ಪರಿಸರದ ಮೇಲೆ ಪ್ರಭಾವ ಬೀರುತ್ತದೆ. ನೀರಿನ ಉಪಯೋಗವು ಅದರ ಮಾಲಿನ್ಯಕ್ಕೆ ಎಡೆ ಮಾಡಿಕೊಡುತ್ತದೆ. ಹೆಚ್ಚಿನ ಬಳಕೆಯಿಂದ ಇದ್ದಿಲು, ಎಣ್ಣೆ, ಖನಿಜಗಳು ಮತ್ತು ಲೋಹಗಳ ಸಂಗ್ರಹಣೆ ಬರಿದಾಗುತ್ತಿದೆ. ನೀರಿನ

**ಕೋಷ್ಟಕ ೧.೧೩ : ಹವಾಮಾನದ ಇತರ ಸಂಗತಿಗಳು – ಮಂಗಳೂರು**

| ಇರುವ ದಿನಗಳು* | ಜನವರಿ<br>ಸೆಪ್ಟೆಂಬರ್ | ಫೆಬ್ರವರಿ<br>ಅಕ್ಟೋಬರ್ | ಮಾರ್ಚ್<br>ನವೆಂಬರ್ | ಏಪ್ರಿಲ್<br>ಡಿಸೆಂಬರ್ | ಮೇ<br>ವಾರ್ಷಿಕ | ಜೂನ್ | ಜುಲೈ | ಆಗಸ್ಟ್ |
|---|---|---|---|---|---|---|---|---|
| ಸಿಡಿಲು ಬಿರುಗಾಳಿ | ೦.೦ | ೦.೩<br>೦.೯ | ೦.೫<br>೬.೯ | ೪.೧<br>೫.೩ | ೫.೮<br>೧.೨ | ೩.೭<br>೩೦.೧ | ೧.೦ | ೦.೪ |
| ಆಲಿಕಲ್ಲು | ೦.೦ | ೦.೦<br>೦.೦ | ೦.೦<br>೦.೦ | ೦.೦<br>೦.೦ | ೦.೦<br>೦.೦ | ೦.೦<br>೦.೦ | ೦.೦ | ೦.೦ |
| ಧೂಳಿನ ಬಿರುಗಾಳಿ | ೦.೦ | ೦.೧<br>೦.೧ | ೦.೦<br>೦.೦ | ೦.೦<br>೦.೦ | ೦.೦<br>೦.೦ | ೦.೦<br>೦.೪ | ೦.೦ | ೦.೨ |
| ಚಂಡಮಾರುತ | ೦.೨ | ೦.೦<br>೦.೧ | ೦.೦<br>೦.೩ | ೦.೫<br>೦.೪ | ೦.೯<br>೦.೧ | ೨.೯<br>೭.೬ | ೧.೯ | ೦.೩ |
| ಮಂಜು | ೦.೫ | ೦.೧<br>೦.೫ | ೦.೭<br>೦.೫ | ೦.೨<br>೦.೨ | ೦.೦<br>೦.೨ | ೦.೦<br>೩.೬ | ೦.೨ | ೦.೧ |

** ಎರಡು ದಿವಸಗಳಿಗಿಂತ ಹೆಚ್ಚಿನ ದಿವಸಗಳಲ್ಲಿ ಬಂದಲ್ಲಿ ಪೂರ್ಣ ಸಂಖ್ಯೆಗಳಲ್ಲಿ ಕೊಟ್ಟಿದೆ.*
***ಆಧಾರ :** ಭಾರತ ಹವಾಮಾನ ಇಲಾಖೆ, ಭಾರತ ಸರ್ಕಾರ ೧೯೮೪*

ಬಸಿಯುವಿಕೆಯು ಸರಿಯಾಗಿ ಇಲ್ಲದೇ ಇದ್ದಲ್ಲಿ ವ್ಯಾಪಕ ನೀರಾವರಿಯು ಮಣ್ಣನ್ನು ಕ್ಷಾರ ಅಥವಾ ಜವುಗು ಮಣ್ಣಾಗಿ ಮಾಡುತ್ತದೆ. ಹೆಚ್ಚು ಜ್ವಲಕ್ರಿಯೆಯಿಂದ ಇಂಗಾಲಾಮ್ಲದ ಸಂಗ್ರಹಣೆ ಉಂಟಾಗಿ ವಿಶ್ವದ ಶಾಖ ಹೆಚ್ಚಾಗಲು (ಗ್ಲೋಬಲ್ ವಾರ್ಮಿಂಗ್) ದಾರಿಯಾಗುತ್ತದೆ. ಸಂಪನ್ಮೂಲಗಳ ಈ ರೀತಿಯ ಉಪಯೋಗ ಮತ್ತು ಬರಿದುಮಾಡುವಿಕೆಯಿಂದ ನಮ್ಮ ಪರಿಸರದ ಮೇಲೆ ಪ್ರಭಾವ ಬೀರುತ್ತದೆ.

ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳ ವಿಸ್ತರಣೆಯ ಪರಿಣಾಮವಾಗಿ ಮೈದಾನದಲ್ಲಿನ ಸ್ವಾಭಾವಿಕ ಸಸ್ಯವರ್ಗವು ಹೆಚ್ಚು ಪ್ರಮಾಣದಲ್ಲಿ ನಷ್ಟ ಹೊಂದಿದೆ. ವಾಸ್ತವವಾಗಿ ಈ ಸ್ಥಳದ ವಿಶೇಷ ಗುಣದ ಸಸ್ಯವರ್ಗವು ಅಂದರೆ ಕುರುಚಲು ಕಾಡುಗಳು ಹೆಚ್ಚು ಕಡಿಮೆ ಅದೃಶ್ಯವಾಗಿದೆ. ಕೆಲವು ಪ್ರತ್ಯೇಕವಾದ ಜಾಗಗಳನ್ನು ಬಿಟ್ಟರೆ ವನ್ಯಜೀವಿಗಳೂ ಕೂಡಾ ತೊಡೆದು ಹಾಕಲ್ಪಟ್ಟಿವೆ. ಹಾಗೆಯೆ ಪಶ್ಚಿಮ ಘಟ್ಟಗಳಲ್ಲಿ. ಸ್ವಾಭಾವಿಕ ಸಸ್ಯವರ್ಗದ ತುಂಡು ತುಂಡಾಗುವಿಕೆ ಈಗಾಗಲೇ ಅಪಾಯ ಸೂಚಕ ಪ್ರಮಾಣವನ್ನು ತಲುಪಿದೆ ಮತ್ತು ಸಸ್ಯ ಜಾತಿಗಳ ನಿರ್ನಾಮದ ದರದ ಮೇಲೆ ತೀವ್ರವಾದ ಪರಿಣಾಮವಾಗುತ್ತದೆ. ರಾಜ್ಯದ ಅನೇಕ ಭಾಗಗಳಲ್ಲಿ ವನ್ಯಜೀವಿಗಳು ನಾಶಮಾಡಲ್ಪಟ್ಟಿವೆ ಮತ್ತು ಅವುಗಳ ಸಂಖ್ಯೆಗಳು ತೀವ್ರ ಗತಿಯಲ್ಲಿ ಕಡಿಮೆಯಾಗುತ್ತಿರುವುದರ ಕಾರಣ ಅವುಗಳ ವಾಸಸ್ಥಳದ ನಷ್ಟ, ನಿರಂತರ ಹಂಚಿಹೋಗುವಿಕೆ ಮತ್ತು ಕಾನೂನು ಬಾಹಿರವಾಗಿ ಕೊಲ್ಲುವುದು ಆಗಿದೆ. ಪಶ್ಚಿಮ ಘಟ್ಟದ ಅರಣ್ಯ ಪ್ರದೇಶಗಳನ್ನು ಏಲಕ್ಕಿ, ಕೋಕೋ, ಕಾಫಿ ಮತ್ತು ಚಹ ನೆಡು ತೋಪುಗಳನ್ನಾಗಿ ಮಾರ್ಪಡಿಸಲಾಗುತ್ತಿದೆ. ಹಾಗೆಯೇ ಮರ ಮುಟ್ಟು ಮತ್ತು ಉರುವಲು ಜಾತಿ ಮರಗಳ ಸ್ಥಳದಲ್ಲಿ ಸಂಪದ್ಭರಿತ ಉಷ್ಣವಲಯದ ಕಾಡುಗಳು ಬರುತ್ತಿವೆ. ಈ ನೆಡು ತೋಪುಗಳು ವಾಣಿಜ್ಯ ರೀತಿಯಿಂದ ಲಾಭದಾಯಕವಾಗಿದ್ದರೂ ಜೀವರಾಶಿ, ವೈವಿಧ್ಯತೆ ಮತ್ತು ಸಸ್ಯವರ್ಗ ಮತ್ತು ಪ್ರಾಣಿವರ್ಗದ ವಾಸಸ್ಥಳಕ್ಕೂ ಕೂಡಾ ತುಂಬಾ ನಷ್ಟವಾಗುತ್ತದೆ. ಪಶ್ಚಿಮಕ್ಕೆ ಹರಿಯುವ ನದಿಗಳನ್ನು ಉಪಯೋಗಿಸಿ ಕೈಗೊಂಡಿರುವ ವಿದ್ಯುತ್ ಯೋಜನೆಗಳಿಂದ ವಿಸ್ತಾರವಾದ ಅರಣ್ಯ ಪ್ರದೇಶ ನೀರಿನಲ್ಲಿ ಮುಳುಗಡೆಯಾಗಿದೆ. ಇಂತಹ ಅಭಿವೃದ್ಧಿ ಯೋಜನೆಗಳಿಂದ ನಿರಾಶ್ರಿತ ಜನರ ಪುನರ್ವಸತಿಗಾಗಿ ಅರಣ್ಯ ವಿಸ್ತೀರ್ಣವು ಇನ್ನೂ ಕಡಿಮೆ ಮಾಡಲ್ಪಟ್ಟಿದೆ. ಪುನರ್ ನವೀಕರಣವಾಗುವ ಮತ್ತು ಪುನರ್ ನವೀಕರಣವಾಗದ ಪ್ರಾಕೃತಿಕ ಸಂಪತ್ತನ್ನು ಸ್ವಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುವುದರಿಂದ ಪರಿಸರದ ಮೇಲೆ ಪರಿಣಾಮವಾಗುವ ಸಾಧ್ಯತೆ ಉಂಟು. ಖನಿಜಗಳ ಹೆಚ್ಚಾದ ಉತ್ಪಾದನೆಯು ಸ್ಥಳ, ವಿಧಾನ ಮತ್ತು ಕಾರ್ಯದ ಗಾತ್ರದ ಮೇಲೆ ಬದಲಾಗುತ್ತದೆ. ಗಣಿ ಸುತ್ತ ಇರುವ ಪ್ರದೇಶವೂ ಕೂಡಾ ಅಲ್ಲಿಯ ಚಟುವಟಿಕೆಗಳಿಂದ

ಹಾಗೂ ಕೆಲಸಗಾರರಿಂದ ಒತ್ತಡಕ್ಕೆ ಒಳಗಾಗುತ್ತದೆ. ಆದ್ದರಿಂದ ಸಂಪನ್ಮೂಲಗಳ ದೀರ್ಘಾವಧಿ ಉಪಯೋಗಕ್ಕೋಸ್ಕರ ಪರಿಸರ ಪರಿಗಣನೆಯಿಂದ ಗಣಿಗಾರಿಕೆಯ ವಿಸ್ತಾರ ಮತ್ತು ವಿಧಾನಗಳನ್ನು ಕ್ರಮಗೊಳಿಸಬೇಕು. ಮಾಲಿನ್ಯವೆಂದರೆ ಹೊರಗಿನ (ಅಪ್ರಕೃತ) ವಸ್ತುಗಳು ಪರಿಸರದಲ್ಲಿ ಸೇರಿಕೊಂಡು ಅದರ ಸಾಮಾನ್ಯ ಉಪಯೋಗಕ್ಕೆ ತೊಂದರೆಯಾಗುವಂತಹುದು. ಜಲ ಮಾಲಿನ್ಯವು ನಿರುಪಯುಕ್ತ ನೀರನ್ನು ಸ್ವಾಭಾವಿಕ ನೀರಿನೊಂದಿಗೆ ಪ್ರವಹಿಸುವಂತೆ ಮಾಡುವ ಮೂಲಕ ಮತ್ತು ಶುದ್ಧ ನೀರಿನೊಂದಿಗೆ ಬೆರೆಯುವುದರಿಂದ ಉಂಟಾಗುವುದು. ಕೈಗಾರಿಕೆಗಳಿಂದ ಮತ್ತು ಮಾನವನ ವಾಸಸ್ಥಳದಿಂದ ನೀರು ಮಲಿನವಾಗುತ್ತದೆ. ಕೈಗಾರಿಕೆಗಳು ಹೊರಹಾಕುವ ಮಾಲಿನ್ಯವು ಸಾವಯವ, ರಾಸಾಯನಿಕ ಮತ್ತು ಅಪಾಯಕರವಾದ ಮಾಲಿನ್ಯವನ್ನೂ ಕೂಡಾ ಉಂಟುಮಾಡುತ್ತದೆ. ಈ ಮಾಲಿನ್ಯವನ್ನು ನಿಯಂತ್ರಿಸಲು ಆಯಾ ಕೈಗಾರಿಕೆಗಳಿಂದ ಹೊರಹೊಮ್ಮುವ ಮಾಲಿನ್ಯದ ಪ್ರಮಾಣಗಳನ್ನು ನಿರ್ಧರಿಸಲಾಗಿದೆ. ಜಲ (ಮಾಲಿನ್ಯ ನಿಯಂತ್ರಣ ಮತ್ತು ತಡೆ) ಕಾಯಿದೆಯನ್ನು ಸಂಸತ್ತು ೧೯೭೪ರ ಮಾರ್ಚ್ ೨೩ರಿಂದ ಜಾರಿಗೊಳಿಸಿರುವುದು. ರಾಜ್ಯದಲ್ಲಿ ಹೆಚ್ಚಿನ ನೀರಿನ ಮಾಲಿನ್ಯವು ನಗರ ಸಮುಚ್ಚಯಗಳಿಂದ ಆಗುತ್ತದೆ. ಚರಂಡಿಯ ಕೊಳಚೆಯನ್ನು ಹೊರಬಿಡುವ ಮೊದಲು ಅದನ್ನು ಪರಿಷ್ಕರಿಸಬೇಕಾದುದು ಸಂಬಂಧಪಟ್ಟವರ ಆದ್ಯ ಕರ್ತವ್ಯವಾಗಿದೆ.

**ವಾಯುಮಾಲಿನ್ಯ** : ಶಬ್ದ ಮಾಲಿನ್ಯವು ೧. ಕೈಗಾರಿಕಾ ಸದ್ದು, ೨. ಸಂಚಾರ ದಟ್ಟಣೆಯ ಸದ್ದು, ೩. ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಉಂಟಾಗುವ ಶಬ್ದಗಳಿಂದ ಆಗುತ್ತಿದ್ದು, ಇದು ಕೂಡಾ ವಾಯು (ಮಾಲಿನ್ಯ ನಿಯಂತ್ರಣ ತಡೆ) ಕಾಯಿದೆ ೧೯೮೧ರ ವ್ಯಾಪ್ತಿಯಲ್ಲಿ ಬರುತ್ತದೆ. ಮಲಿನವಾದ ವಾಯು ಮತ್ತು ನೀರಿನಂತೆ ಶಬ್ದ ಮಾಲಿನ್ಯವೂ ಕೂಡ ಹೆಚ್ಚುತ್ತಿದೆ. ಬಹಳ ಹೆಚ್ಚಿನ ಜನರ ಒಂದು ತಪ್ಪು ಅಭಿಪ್ರಾಯ ಏನೆಂದರೆ ಕಿವಿಗಳು ಹೆಚ್ಚಿನ ಮಟ್ಟದ ಶಬ್ದ ಮಾಲಿನ್ಯಕ್ಕೆ ಹೊಂದಿಕೊಳ್ಳುತ್ತವೆ ಎಂಬುದಾಗಿ. ಆದರೆ ಅದು ಹಾಗಲ್ಲ. ಆದರೆ ವ್ಯಕ್ತಿಯ ವಯಸ್ಸು ಹೆಚ್ಚಾಗುತ್ತಿದ್ದಂತೆ, ಕಿವಿಗಳು ತಮ್ಮ ಕಾರ್ಯಗಳನ್ನು ಸದ್ದಿಲ್ಲದೇ ಸ್ಥಗಿತಗೊಳಿಸುತ್ತವೆ. ಪರಿಸರದ ರಕ್ಷಣೆ ಮತ್ತು ಅದರ ಅಭಿವೃದ್ಧಿಯನ್ನು ಸಾಧಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಒಂದು ಹೆಚ್ಚು ವ್ಯಾಪಕವಾದ ಪರಿಸರ (ಸಂರಕ್ಷಣೆ) ಕಾಯಿದೆಯನ್ನು ಜಾರಿಗೆ ತಂದಿತು. ೧೯೮೬ರ ಮೇ ೨೩ರಿಂದ ಇದು ಜಾರಿಯಲ್ಲಿದೆ. ರಾಜ್ಯದಲ್ಲಿ ವಾಯು ಮತ್ತು ಜಲ ಮಾಲಿನ್ಯದ ತಡೆ ಮತ್ತು ನಿಯಂತ್ರಣ ಅರಣ್ಯ ಸಂಪತ್ತಿನ ಮತ್ತು. ಇತರ ಸ್ವಾಭಾವಿಕ ಸಂಪನ್ಮೂಲಗಳ ರಕ್ಷಣೆ ಮತ್ತು ಸಮಗ್ರ ಅಭಿವೃದ್ಧಿಯನ್ನು ಕುರಿತಂತೆ ೧೯೮೧ರ ಮಾರ್ಚ್‌ನಲ್ಲಿ ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯು ಸ್ಥಾಪಿಸಲ್ಪಟ್ಟಿತು. ೧೯೮೬ರ ನವೆಂಬರ್‌ನಿಂದ ಪರಿಸರ (ಸಂರಕ್ಷಣೆ) ಕಾಯಿದೆ ಜಾರಿಗೆ ಬಂದಿತು. ಪರಿಸರ ಕಾನೂನಿನ ಹೊಸ ಅದಿನಿಯಮಗಳನ್ವಯ, ಪರಿಸರ ಮಾಲಿನ್ಯ ನಿಯಂತ್ರಣದಲ್ಲಿ ತೊಡಗಿರುವ ಅಧಿಕಾರಿಗಳನ್ನು ಸಾರ್ವಜನಿಕರು ನ್ಯಾಯಾಲಯದಲ್ಲಿ ಪ್ರಶ್ನಿಸಬಹುದು ಜೀವಿ. ಪರಿಸ್ಥಿತಿ ಮತ್ತು ಪರಿಸರ ಇಲಾಖೆಯು ವಿಷಪೂರಿತ ರಾಸಾಯನಿಕಗಳ ನಿರ್ವಹಣೆ ಮತ್ತು ಸಮುದ್ರದ ನೀರಿನಲ್ಲಿ ಎಣ್ಣೆ ಮಾಲಿನ್ಯ ತಡೆಗಳಿಗೆ ಈಗ ಜವಾಬ್ದಾರಿಯಾಗಿದೆ. ಇದರ ಜೊತೆಗೆ ಕಡಲ ತೀರಗಳ (ಬೀಚ್) ರೇವುಗಳ ನಿರ್ವಹಣೆಗೂ ಕೂಡಾ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ೧೯೭೪ ರಿಂದ ಅಸ್ತಿತ್ವದಲ್ಲಿದೆ. ಈ ಮಂಡಳಿಯು ನೀರಿನ ಕಾಯಿದೆ, ವಾಯು ಕಾಯಿದೆಯ ಮತ್ತು ಪರಿಸರ ಸಂರಕ್ಷಣಾ ಕಾಯಿದೆಯ ಕೆಲವು ನಿಯಮಗಳನ್ನು ಅನುಷ್ಠಾನಗೊಳಿಸುತ್ತದೆ. ಜಿಲ್ಲೆಯಲ್ಲಿ ೧೯೯೧ ರಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಯ ಪ್ರಾರಂಭಗೊಂಡಿತು. ಜಿಲ್ಲೆಯಲ್ಲಿಯೂ ಜಾರಿಯಲ್ಲರುವ ನಿಯಮಗಳು: ಜಲ(ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯಿದೆ ೧೯೭೪, ಜಲ ( ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕರ ಕಾಯಿದೆ ೧೯೭೭, ವಾಯು (ಮಾಲಿನ್ಯ ತಡೆ ಮತ್ತು ನಿಯಂತ್ರಣ) ಕಾಯಿದೆ ೧೯೮೧, ಪರಿಸರ ಸಂರಕ್ಷಣಾ ಕಾಯಿದೆ ೧೯೮೬, ಅಪಾಯಕಾರಿ ತ್ಯಾಜ್ಯ (ನಿರ್ವಹಣೆ ಮತ್ತು ಉಪಯೋಗಿಸುವುದು) ನಿಯಮಗಳು ೧೯೮೯, ಜೈವಿಕ ತ್ಯಾಜ್ಯ (ನಿರ್ವಹಣೆ ಮತ್ತು ಉಪಯೋಗಿಸುವುದು) ನಿಯಮಗಳು ೧೯೯೮, ನಗರಗಳ ಘನ ತ್ಯಾಜ್ಯ (ನಿರ್ವಹಣೆ ಮತ್ತು ಉಪಯೋಗಿಸುವುದು) ನಿಯಮಗಳು ೨೦೦೦, ಬ್ಯಾಟರಿಗಳ

(ನಿರ್ವಹಣೆ ಮತ್ತು ಉಪಯೋಗಿಸುವುದು) ನಿಯಮಗಳು ೨೦೦೧ ಮತ್ತು ಪ್ಲಾಸ್ಟಿಕ್ ತಯಾರಿಸುವುದು, ಮಾರಾಟ ಮತ್ತು ಉಪಯೋಗಿಸುವುದು ನಿಯಮಗಳು ೧೯೯೯. ಇವುಗಳ ಅಡಿಯಲ್ಲಿ ನಾಡಿನ ಜಲ, ವಾಯು, ಭೂಮಿ, ಮಾಲಿನ್ಯವನ್ನು ನಿಯಂತ್ರಿಸಲು ಉದ್ದಿಮೆಗಳು, ಆಸ್ಪತ್ರೆಗಳು, ಸ್ಥಳೀಯ ಸಂಸ್ಥೆಗಳು ಕೆಲಸ ಮಾಡುವಂತೆ ಕ್ರಮ ತೆಗೆದುಕೊಳ್ಳುವುದು ಕಛೇರಿಯ ಮುಖ್ಯ ಧ್ಯೇಯೋದ್ದೇಶಗಳು ಮತ್ತು ಕಾರ್ಯಚಟುವಟಿಕೆಗಳಾಗಿವೆ.

೧೯೬೦ರ ವರೆಗೆ ಉಡುಪಿ-ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಖನಿಜ ನಿಕ್ಷೇಪಗಳ ಬಗ್ಗೆ ನಿಖರ ದಾಖಲೆಗಳು ಲಭ್ಯವಿಲ್ಲ. ನಂತರದ ಅಧ್ಯಯನದ ಪ್ರಕಾರ ಕುಂದಾಪುರ ತಾಲೂಕಿನ ಕೇರಾಡಿಯಲ್ಲಿ ಕಬ್ಬಿಣದ ನಿಕ್ಷೇಪ, ಕಾಪು, ಮೂಳೂರು, ಹೆಜ್ಮಾಡಿಗಳಲ್ಲಿ ಸಿಲಿಕಾ ಹೊಯಿಗೆ, ಬೈಂದೂರಿನ ಮಡಲ್ವಾರೆಯಲ್ಲಿ ಅಲ್ಯುಮಿನೀಯಮ್ ನಿಕ್ಷೇಪ ಕಂಡು ಬಂದಿವೆ. ಆದರೆ ವಾಣಿಜ್ಯಿಕವಾಗಿ ಇವು ಯಾವುದೂ ಹೆಚ್ಚು ಉಪಯೋಗವಾದಂತಿಲ್ಲ. ಜಿಮ್ಮಿಟ್ಟಿಗೆ (laterite) ಮತ್ತು ಪಾದೆ (grainte) ಗಳ ವ್ಯಾಪಕ ಬಳಕೆ ಜಿಲ್ಲೆಯಾದ್ಯಂತ ಇವೆ. ವ್ಯವಸಾಯ ಯೋಗ್ಯ ಭೂಮಿಯ ಹೆಂಚಿನ ಕೊಜೆ ಉಡುಪಿ ಜಿಲ್ಲೆಯಲ್ಲಿ ಬಳಕೆಯಾಗುತ್ತಿರುವ ಮತ್ತೊಂದು ನೈಸರ್ಗಿಕ ಸಂಪನ್ಮೂಲ. ಹೆಂಚು ಉತ್ಪಾದನೆ ಜಿಲ್ಲೆಯ ಪ್ರಮುಖ ಕೈಗಾರಿಕೆಗಳಲ್ಲಿ ಒಂದು. ದೇಶದ ಒಟ್ಟು ಹೆಂಚು ಉತ್ಪಾದನೆಯ ಮೂರನೇ ಒಂದರಷ್ಟು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದಲೇ ಆಗುತ್ತದೆ ಎಂದರೆ ಹೆಂಚು ಕಾರ್ಖಾನೆಗಳ ಮಹತ್ವ ಅರ್ಥವಾಗುತ್ತದೆ. ಕಪ್ಪೆಚಿಪ್ಪು (sea shells) ಸಂಗ್ರಹ ಇನ್ನೊಂದು ಕಸುಬು. ಕುಂದಾಪುರದ ಬಳಿಯ ಹೊಳೆಗಳಲ್ಲಿ ತೀರ ಇತ್ತೀಚಿನವರೆಗೆ ಸಾಕಷ್ಟು ಪ್ರಮಾಣದಲ್ಲಿ ಕಪ್ಪೆ ಚಿಪ್ಪುಗಳು ದೊರೆಯುತ್ತಿದ್ದವು. ಸುಮಾರು ೨೦-೨೫ ವರ್ಷಗಳಿಂದ ಕಪ್ಪೆ ಚಿಪ್ಪು ಸಂಗ್ರಹ ನಡೆಯುತ್ತಾ ಬಂದಿದ್ದರೂ, ಇತ್ತೀಚಿನ ದಿನಗಳಲ್ಲಿ ಅವುಗಳ ಲಭ್ಯ ಸಾಕಷ್ಟಿಲ್ಲದಿರುವುದು ಕಸುಬುದಾರರನ್ನು ಕಂಗೆಡಿಸಿದೆ.

ಜೈವಿಕ ಸಂಪತ್ತಿನ ೨೫ ಅಗ್ರ ತಾಣ (hot spot) ಗಳಲ್ಲಿ ಒಂದಾದ ಪಶ್ಚಿಮ ಘಟ್ಟದ ಸ್ವಲ್ಪ ಭಾಗ ಮಾತ್ರ ಉಡುಪಿಗೆ ಸೇರಿದ್ದರೂ, ಜಿಲ್ಲೆಯಲ್ಲಿ ಜೈವಿಕ ವೈವಿಧ್ಯಕ್ಕೆ ಕೊರತೆ ಇಲ್ಲ. ಸುಮಾರು ೧,೬೦೦ ವಿವಿಧ ಹೂ ಬಿಡುವ ಸಸ್ಯ ಪ್ರಭೇದಗಳನ್ನು ಡಾ. ಗೋಪಾಲಕೃಷ್ಣ ಭಟ್ಟರು ಉಡುಪಿ ಜಿಲ್ಲೆಯಲ್ಲಿ ದಾಖಲಿಸಿದ್ದಾರೆ. ಪ್ಯಾರ ಕಾಟ್ಲಿಯ ಭಟ್ಟೆ (Paracatlia bhalli) ಎಂಬ ಶುಂಠಿ ಜಾತಿಗೆ ಸೇರಿದ ಸಸ್ಯ ಪ್ರಭೇದವೊಂದು ಜಗತ್ತಿನಲ್ಲಿಯೇ ಅಪರೂಪ ಮಾತ್ರವಲ್ಲ ಅದು ಉಡುಪಿ ಜಿಲ್ಲೆಗೆ ಸೀಮಿತ (!) ವಾಗಿದೆ.

ಜಾಗತಿಕ ಮಟ್ಟದಲ್ಲಿ ಅಪರೂಪವೆನಿಸಿದ ಮತ್ತು ಪಶ್ಚಿಮ ಘಟ್ಟಕ್ಕೆ ಮಾತ್ರ ಸೀಮಿತವಾದ ಸಿಂಗಳೀ (ಸಿಂಹ ಬಾಲದ ಮಂಗ), ಬರ್ಕ (ಬರಂಕ), ಕಾಡು ಪಾಪ ಮೊದಲಾದವು ಉಡುಪಿ ಜಿಲ್ಲೆಯಲ್ಲೂ ಇರುವುದು ಹೆಮ್ಮೆಯ ವಿಷಯ. ಇವುಗಳಿಗೆ ಆಶ್ರಯವಿರುವುದು ಜಿಲ್ಲೆಯ ಎರಡು ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ಉದ್ಯಾನದ ಒಂದು ಭಾಗದಲ್ಲಿ. ವಿವಿಧ ಹಕ್ಕಿಗಳು ದೂರದೇಶದಿಂದ ಉಡುಪಿ ಜಿಲ್ಲೆಗೆ ವಲಸೆ ಬರುವುದನ್ನು ಗಮನಿಸಿ ದಾಖಲಿಸಿದೆ. ಇವುಗಳಲ್ಲಿ ಕೆಲವು ಉತ್ತರ ಯೂರೋಪಿನಿಂದಲೂ, ಮತ್ತೆ ಕೆಲವು ಸೈಬೀರಿಯಾದಿಂದಲೂ, ಇನ್ನು ಕೆಲವು ಹಿಮಾಲಯದಿಂದಲೂ ವಲಸೆ ಬರುತ್ತವೆ. ದೂರದ ವಲಸೆಗಾರರಲ್ಲಿ ದ್ವಿತೀಯ ಸ್ಥಾನದ ಗೋಲ್ಡನ್ ಪ್ಲೋವರ್ (Golden plover) ಉಡುಪಿ ಜಿಲ್ಲೆಯ ಕೆಲವು ಕಡೆ ಕಂಡುಬರುತ್ತವೆ. ಜಿಲ್ಲೆಯ ಮೀನುಗಾರಿಕೆಯೂ ಮಹತ್ವದ್ದು. ಸೊರಗೆ ತೊರಗೆ, ಬೈಗೆ, ಬೂತ್ಯಾ, ಬಂಗುಡೆ, ಪಂಬೊಳೆ, ನಂಗು ಮೊದಲಾದ ಮೀನುಗಳು ಸಾಗರ ಸಂಪತ್ತಿನ ಕೊಡುಗೆಯಾಗಿದೆ.

ಉಡುಪಿ ಜಿಲ್ಲೆಯಲ್ಲಿ ಹಲವಾರು ಸೂಕ್ಷ್ಮ ಹಾಗೂ ವಿಶಿಷ್ಟ ಜೈವಿಕ ತಾಣಗಳಿವೆ. ಕುಂದಾಪುರದ ಬಳಿಯ ಕಾಂಡ್ಲವನ ಇಂತಹ ವಿಶಿಷ್ಟ ಜೀವಾವಾಸಗಳಲ್ಲಿ ಒಂದು. ಯುನೆಸ್ಕೊದ MAB (Man and Biosphere) ಯೋಜನೆಯಲ್ಲಿ ಗುರುತಿಸಲಾದ ದೇಶದ ೧೭ ಪ್ರಮುಖ ಕಾಂಡ್ಲವನಗಳಲ್ಲಿ ಗಂಗೊಳ್ಳಿ-ತಲ್ಲೂರು ಕಾಂಡ್ಲವನವೂ ಒಂದು. ಸುಮಾರು ೩೦,೭೦೦ ಚ.ಮೀ. ವಿಸ್ತಾರದ ಈ ಕಾಂಡ್ಲವನ ಜೀವ ವೈವಿಧ್ಯಕ್ಕೆ ಆಗರ ಮಾತ್ರವಲ್ಲ ಬಹುಪಯೋಗಿ. ಜಿಲ್ಲೆಯ ಅಪಾರ ಜೀವ ವೈವಿಧ್ಯಕ್ಕೆ ಜಿಲ್ಲೆಯ ಭೌಗೋಳಿಕ ಸನ್ನಿವೇಶ, ಸಮೃದ್ಧವಾದ ಮಳೆ ಮತ್ತು ವ್ಯಾಪಕವಾದ ಕಾಡು-ಮರ-ಮಟ್ಟು ಕಾರಣ. ಕಳೆದ ಶತಮಾನದಲ್ಲಿ

ಕಾಡಿನ ಪ್ರಮಾಣ ಶೇಕಡಾ ೧೧ಕ್ಕೆ ಇಳಿದ್ದರೂ, ಮಳೆಯಲ್ಲಿ ವೈಪರೀತ್ಯ ಅಷ್ಟಾಗಿ ಕಂಡು ಬಂದಿಲ್ಲ. ಇಂದಿಗೂ ಸರಾಸರಿ ಮಳೆ ೩,೮೦೦ ಮಿ.ಮೀ ಮಳೆ ಸಾಕಷ್ಟಿದ್ದರೂ ಬೇಸಗೆಯಲ್ಲಿ ನೀರಿನ ಪರದಾಟ ಜಿಲ್ಲೆಯ ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿದೆ.

**ಸಮುದ್ರ ಕೊರೆತ** : ಮರವಂತೆ, ಉದ್ಯಾವರ, ಪಡುಕೆರೆ ಕೋಡಿಬೇಂಗ್ರೆ ಮೊದಲಾದ ಸಮುದ್ರ ತೀರದ ಊರುಗಳು ಪ್ರತಿ ವರ್ಷವೂ ಸಮುದ್ರ ಕೊರೆತಕ್ಕೆ ಗುರಿಯಾಗುತ್ತವೆ. ಉದ್ಯಾವರ ಬಳಿ ತಡೆಗೋಡೆಯನ್ನು ನುಂಗಿ ಹಾಕಿದಷ್ಟು ತೀವ್ರ ಸಮುದ್ರ ಕೊರೆತ. ಇದೊಂದು ನೈಸರ್ಗಿಕ ಪ್ರಕ್ರಿಯೆ. ಇದನ್ನು ತಡೆಗೋಡೆಗಳಿಂದ ನಿಯಂತ್ರಿಸುವುದು, ವ್ಯಾವಹಾರಿಕವಾಗಿಯೂ, ವೈಜ್ಞಾನಿಕವಾಗಿಯೂ ಸಾಧುವಲ್ಲ. ಇನ್ನು ಒಂದೆರಡು ದಶಕಗಳಲ್ಲಿ, ಹಸಿರು ಮನೆ ಪರಿಣಾಮದಿಂದಾಗಿ, ಸಮುದ್ರ ಕೊರೆತ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆ ಇದೆ ಎಂಬುದು ಕೆಲವು ವಿಜ್ಞಾನಿಗಳ ಅಭಿಮತ. ಸಮುದ್ರ ತೀರ ಕೇವಲ ಮರಳ ರಾಶಿಯಲ್ಲೂ ಅದೊಂದು ಜೀವಾವಾಸ ಎಂಬ ಅಂಶ ಗಮನಿಸುವುದು ತೀರ ಅಗತ್ಯ. ತಡೆಗೋಡೆಗಳಿಂದ ಸಮುದ್ರ ಕಿನಾರೆ ತನ್ನತನ ಕಳೆದುಕೊಂಡು ನಿರ್ಜೀವಗೊಳ್ಳಲಿದೆ.

**ನೀರು ಮತ್ತು ನೆರೆ :** ಉಡುಪಿ ಜಿಲ್ಲೆಯಲ್ಲಿ ಹೇಳುವಂತಹ ದೊಡ್ಡ ನದಿಗಳಲ್ಲಿ ಎಲ್ಲವೂ ಸುಮಾರು ೮೦ ಕಿಲೋ ಮೀಟರುಗಳಿಗಿಂತ ಕಡಿಮೆ ಇರುವಂತವೂ. ಸೀತಾ, ಸ್ವರ್ಣ, ಹಾಲಾಡಿ, ಸೌಪರ್ಣಿಕ ಇತ್ಯಾದಿ ನದಿಗಳು ಪ್ರಮುಖವಾದರೂ, ಬಹುತೇಕ ನದಿಗಳಲ್ಲಿ ಬೇಸಗೆಯಲ್ಲಿ ನೀರು ತಳಕಂಡಿರುತ್ತದೆ. ನದಿಗಳ ಈ ಬರಡಾಗುವಿಕೆ ಈಗ ೩–೪ ದಶಕಗಳ ಪ್ರಕ್ರಿಯೆ ಪಶ್ಚಿಮ ಘಟ್ಟದಲ್ಲಿ ವ್ಯಾಪಕ ಕಾಡು ನಾಶ, ನದಿ ಇಕ್ಕೆಡಗಳ ಮರಗಳ ನಿರ್ನಾಮ, ನದಿಗಳ ಅವೈಜ್ಞಾನಿಕ ನಿರ್ವಹಣೆ ಮತ್ತು ಅತಿ ಶೋಷಣೆಯ ಪರಿಣಾಮ ನದಿಗಳ ಇಂದಿನ ಸ್ಥಿತಿ. ಇಂತಹ ನದಿಗಳು ಮಳೆಗಾಲದಲ್ಲಿ ಉಕ್ಕಿ ಹರಿಯುವುದು, ಕೆಲವೊಮ್ಮೆ ನೆರೆ ಭೀತಿ ಹುಟ್ಟಿಸುವುದು ವಿಪರ್ಯಾಸ. ಉತ್ತರ ಭಾರತದ ನದಿಗಳಿಂದ ಆಗುವ ಅನಾಹುತ ನಮ್ಮ ನದಿಗಳ ನೆರೆಗಳಿಂದ ಉಂಟಾಗದಿದ್ದರೂ, ಸಾಕಷ್ಟು ನಷ್ಟ ಉಂಟು ಮಾಡುವುದು ಸಹಜ. ಒಂದು ಕಾಲದಲ್ಲಿ ಉಡುಪಿ ಜಿಲ್ಲೆಯಲ್ಲಿ ನೆರೆಯ ಪ್ರಕೋಪ ತೀರ ವಿರಳವಾದ್ದುದು ತಿಳಿದುಬರುತ್ತದೆ. ಮಳೆ ಪ್ರಮಾಣ ಹೆಚ್ಚಿಲ್ಲದಿದ್ದರೂ, ಈಗೇಕೆ ನೆರೆಯ ಕಾಟ ಪದೇ ಪದೇ? ನದಿಯ ಭೌತಿಕ ಬದಲಾವಣೆ ಇದಕ್ಕೆ ಪ್ರಮುಖ ಕಾರಣ. ವರ್ಷ ಉರುಳಿದಂತೆ ನೀರಿನ ಬೇಡಿಕೆ ಹೆಚ್ಚುವುದು ಸಹಜವೆ. ಆದರೆ ನೀರಿನ ಲಭ್ಯತೆ ಹೆಚ್ಚಾಗುವ ಮಾತಿರಲಿ ಮೊದಲಿಗಿಂತಲೂ ಕಡಿಮೆಯಾಗುತ್ತಿದೆ. ಬಾವಿಯ ಆಳ ಪಾತಾಳಕ್ಕಿಳಿಯುತ್ತಿದೆ. ಕೊಳವೆ ಬಾವಿಗಳಿಗೂ ನಿಷ್ಪ್ರಯೋಜಕವೆನಿಸತೊಡಗಿವೆ. ನದಿಗಳಲ್ಲಿ ನೀರು ಹರಿಯುವುದೇ ಕಷ್ಟ ಉದ್ಯಾವರದ ಬಳಿ ಉಪ್ಪು ನೀರಿನ ತಡೆಗೋಡೆ, ಅಕ್ಕ ಪಕ್ಕದ ಪ್ರದೇಶವನ್ನು ಉಪ್ಪಾಗಿಸಿದೆ. ಈ ಹಿನ್ನೆಲೆಯಲ್ಲಿ ನದಿಗಳ ಜೋಡಣೆ ಬಗ್ಗೆ ಯೋಜನೆ ನಡೆದಿದೆ. ನೀರನ್ನು ಉಳಿಸುವ, ಅಂತರ್ಜಲ ಹೆಚ್ಚಿಸುವ ಪ್ರಯತ್ನ ಮಾಡದೆ, ನದಿ ಜೋಡಣೆಯಂತಹ ಯಾವುದೇ ಪ್ರಯತ್ನ ಸಮಸ್ಯೆಯನ್ನು ಪರಿಹರಿಸುವುದಿಲ್ಲ.

**ಇಂಧನ :** ೧೯೯೦ರ ದಶಕದಲ್ಲಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರತಿಯೊಬ್ಬರ ಸರಾಸರಿ ಇಂಧನ ಬಳಕೆ ಕರ್ನಾಟಕದಲ್ಲಿ ಅತ್ಯಧಿಕ (ಪ್ರತಿ ತಿಂಗಳ ಖರ್ಚು ರೂ. ೯೯.೭೧) ಗರಿಷ್ಠ ಮಟ್ಟದ ಸರಾಸರಿ ಇಂಧನ ಬಳಕೆಗೆ ಪ್ರಮುಖ ಕಾರಣ ಈ ಜಿಲ್ಲೆಗಳ ಹೆಂಚಿನ ಕಾರ್ಖಾನೆಗಳು. ೧೯೯೦ರ ದಶಕದಲ್ಲಿ ಪ್ರತಿ ವರ್ಷ ಈ ಎರಡು ಜಿಲ್ಲೆಗಳ ಹೆಂಚಿನ ಕಾರ್ಖಾನೆಗಳ ಒಟ್ಟು ಕಟ್ಟಿಗೆ ಬೇಡಿಕೆ ೧,೨೦,೦೦೦ ಟನ್ (!) ಪರಿಸ್ಥಿತಿ ಇಂದಿಗೂ ಸುಧಾರಿಸಿದಂತಿಲ್ಲ. ಇಂದಿಗೂ ಬಹುತೇಕ ಜನ ಕಟ್ಟಿಗೆಯನ್ನೇ ಉರುವಲಾಗಿ ಬಳಸುವುದರಿಂದ ಕಾಡಿನ ಮೇಲಿನ ಒತ್ತಡ ಮುಂದುವರೆಯುತ್ತಲೇ ಇದೆ. ಜೊತೆಗೆ ಪ್ಲೈವುಡ್ ಮೊದಲಾದ ಕಾಡು ಆಧರಿಸಿದ ಕೈಗಾರಿಕೆಗಳೂ ಸಾಕಷ್ಟು ಪರಿಣಾಮ ಬೀರಿವೆ.

**ಶಬ್ದ ಮಾಲಿನ್ಯ :** ಉಡುಪಿ ಜಿಲ್ಲೆ ಕರ್ನಾಟಕದಲ್ಲಿ ಅತ್ಯಧಿಕ ಶಬ್ದಮಾಲಿನ್ಯವಿರುವ ಜಿಲ್ಲೆಗಳಲ್ಲಿ ಒಂದು. ಜಿಲ್ಲೆಯ ಬಹುತೇಕ ಖಾಸಗೀ ಬಸ್ಸುಗಳಲ್ಲಿನ ಹಾರ್ನ್‌ಗಳ ಶಬ್ದ ೧೧೫ ಡೆಸಿಬೆಲ್ಲಿಗೂ ಮಿಕ್ಕಿ. ಉಡುಪಿಯಿಂದ ಕುಂದಾಪುರವರೆಗೆ ಪ್ರಯಾಣಿಸಿದ ಬಸ್ಸೊಂದರಲ್ಲಿ ಪ್ರತಿ ೧೫ ಸೆಕೆಂಡಿಗೊಮ್ಮೆ ೧೧೫ ಡೆಸಿಬಲ್ ಶಬ್ಧದ

ಕರ್ಕಶ ಹಾರ್ನ್ ಮಾಡಿದುದನ್ನು ದಾಖಲಿಸಿದ್ದು ಈ ಮಟ್ಟದ ಶಬ್ಧ ಕೇವಲ ೧೦ ವರ್ಷಗಳ ಕೇಳುವ ಸಾಮರ್ಥ್ಯ ಶೇಕಡಾ ೫೦ಕ್ಕೆ ಇಳಿಸುತ್ತದೆ. ಹತ್ತು ಹಲವು ಕಾರಣದಿಂದ ಉಡುಪಿ ಜಿಲ್ಲೆಯಲ್ಲಿ ರಾತ್ರಿ ಕೂಡಾ ಶಬ್ಧ ಮಾಲಿನ್ಯದ ತೀವ್ರತೆ ಹೆಚ್ಚು.

**ಕೀಟನಾಶಕಗಳ ಬಳಕೆ** : ಕೀಟನಾಶಕವಿಲ್ಲದೆ ಏನನ್ನು ಬೆಳೆಸಲಾರೆವು ಎಂಬ ಹಂತವನ್ನು ನಾವಿಂದು ತಲುಪಿದ್ದೇವೆ. ಒಂದು ಹಂತದವರೆಗೆ ವೈಜ್ಞಾನಿಕವಾಗಿ, ಕೆಲವು ನಿರ್ದಿಷ್ಟ ಕೀಟನಾಶಕ ಬಳಸುವ ಬಗ್ಗೆ ಅಭ್ಯಂತರವಿಲ್ಲ. ಆದರೆ, ಅವುಗಳನ್ನು ಬಳಸುವ ರೀತಿ ನಿಜಕ್ಕೂ ಗಾಬರಿ ಹುಟ್ಟಿಸುತ್ತದೆ. ಈ ಬಗ್ಗೆ ಹೆಚ್ಚಿನ ನಿರ್ವಹಣೆ ಮತ್ತು ಮಾಹಿತಿ ಅಗತ್ಯವಿದೆ.

**ಜೀವ ವೈವಿಧ್ಯ :** ಉಡುಪಿ ಜಿಲ್ಲೆಯಲ್ಲಿ ಅನೇಕ ವಿಶಿಷ್ಟ ಜೀವಾವಾಸಗಳಿವೆ. ಇವುಗಳನ್ನು ಜೈವಿಕ ಸೂಕ್ಷ್ಮ ತಾಣಗಳೆಂದು ಗುರುತಿಸಲಾಗಿದ್ದು, ಹೆಚ್ಚಿನವು ತಮ್ಮ ಅಸ್ತಿತ್ವ ಕಳೆದು ಕೊಳ್ಳುವ ಸ್ಥಿತಿಯಲ್ಲಿವೆ. ಕಾರ್ಕಳದ ಆನೇಕೆರೆ, ಮರವಂತೆ ಸಮುದ್ರ ತೀರ, ಮಲ್ಯಾಡಿಯ ಹಳೆತಾಣ, ಶಿರ್ವದ ಪಿಲಾರ್ ಕಾನ್, ಸಂತಮೇರಿ ದ್ವೀಪ (ತೋನ್ಸೆಪಾರ್), ತಲ್ಲೂರಿನ ಕಾಂಡ್ಲವನ ಮತ್ತು ಮೂಕಾಂಬಿಕ ಹಾಗೂ ಸೋಮೇಶ್ವರ ಅಭಯಾರಣ್ಯಗಳು. ಮರವಂತೆಯ ಕಡಲಕಿನಾರೆ ಕಡಲಾಮೆ (ಆಲಿವ್ ರಿಡ್ಲಿ)ಗೆ ತವರೂರು. ಆಗಸ್ಟ್ ತಿಂಗಳಿಂದ ಜನವರಿವರೆಗೆ ಕಡಲಾಮೆಗಳು ನೂರಾರು ಕಿಲೋ ಮೀಟರು ದೂರದಿಂದ ವಲಸೆ ಬಂದು ಕಡಲತೀರ ಮರಳ ರಾಶಿಯಲ್ಲಿ ಮೊಟ್ಟೆಯಿಡುತ್ತವೆ. ಅರಣ್ಯ ಇಲಾಖೆಯವರೆಗೆ ಕಡಲಾಮೆಯ ಸಂತತಿ ಅಭಿವೃದ್ಧಿಗೆ ಕ್ರಮಕೈಗೊಂಡಿದ್ದರು. ಮರವಂತೆಯ ಬೀಚಿನಲ್ಲಿ ಸಾವಿರಾರು ಮರಿಗಳನ್ನು ಸಮುದ್ರಕ್ಕೆ ಸುರಕ್ಷಿತವಾಗಿ ಬಿಟ್ಟು ಸ್ತುತ್ಯ ಕಾರ್ಯ ನಡೆಸಿದ್ದರು. ಆದರೆ ಈಗ ಕೆಲವು ವರ್ಷಗಳಿಂದ ಯೋಜನೆ ಕೈಬಿಟ್ಟಿದ್ದರಿಂದ, ಆಮೆಗಳ ಕತೆ ಕೇಳುವವರಿಲ್ಲ. ಮಲ್ಯಾಡಿಯ ಹಕ್ಕಿಯ ತಾಣ ಇತ್ತೀಚೆಗಷ್ಟೆ ಪ್ರಾಮುಖ್ಯ ಪಡೆದಿದೆ. ಸುಮಾರು ೩೦ ವಿಧದ ಹಕ್ಕಿಗಳಿರುವ ಈ ಪ್ರದೇಶಕ್ಕೆ ಅಪರೂಪದ ವಲಸೆ ಹಕ್ಕಿಗಳೂ ಬರುತ್ತವೆ. ನೂರಾರು ಸಂಖ್ಯೆ ಬಾತುಕೋಳಿ (Teals) ಮತ್ತಿತರ ನೀರು ಹಕ್ಕಿಗಳು ಇಲ್ಲಿನ ವೈಶಿಷ್ಟ್ಯ. ಸಂತಮೇರಿ ದ್ವೀಪ ಕಡಲ ಜೀವಿಗಳಿಗೆ ಹೆಸರಾದರೆ, ಪಿಲ್ಲಾರುಕಾನು ನಿತ್ಯಹರಿದ್ವರ್ಣ ಕಾಡಿನ ಸಮೃದ್ಧಿಗೆ ಸಾಕ್ಷಿ. ತಲ್ಲೂರಿನ ಕಾಂಡ್ಲವನದ ತಾಣಕ್ಕೆ ವಿಂಬ್ರೆಲ್, ಕಲ್ಯೂರ್, ಅವೊಸೆಟ್ ಮೊದಲಾದ ಅಪೂರ್ವ ಪಕ್ಷಿಗಳು ವಲಸೆ ಬರುವುದನ್ನು ತೀರ ಇತ್ತೀಚಿನವರೆಗೆ ಗಮನಿಸಿ ದಾಖಲಿಸಿದೆ. ಆದರೆ ಇಂದು ಸಿಗಡಿ ಕೃಷಿಯಿಂದಾಗಿ ತಲ್ಲೂರಿನ ಕಾಂಡ್ಲವನದ ಸುತ್ತಲಿನ ಪಕ್ಷಿಗಳು ಕಣ್ಮರೆಯಾಗಿವೆ. ಬಹುಶಃ ಇನ್ನೆಂದೂ ಅವುಗಳನ್ನು ಆ ಪ್ರದೇಶದಲ್ಲಿ ಕಾಣಲಾರೆವು. ಉಡುಪಿ ಜಿಲ್ಲೆಯಾದ್ಯಂತ ಅನೇಕ ಜೀವಿ ಸಮೂಹ ಮೌನವಾಗಿ ಮರೆಯಾಗುತ್ತಿವೆ. ಇವುಗಳಲ್ಲಿ ಹೆಚ್ಚಿನವು ಜಲಚರಗಳು. ನೂರಾರು ಚಿಕ್ಕ ಪುಟ್ಟ ನೀರಿನಾಶ್ರಯಗಳು ಇಂದು ಬರಡಾಗುತ್ತಿವೆ. ರಾಷ್ಟ್ರೀಯ ಹೆದ್ದಾರಿಯ ಇಕ್ಕೆಡೆಗಳು ನೀರಿನ ಕೊಳಗಳು ಕಾಂಕ್ರೀಟು ರಚನೆಗಳಿಗೆ ದಾರಿಮಾಡಿವೆ. ಚಿಕ್ಕ ಪುಟ್ಟ ಕೆರೆ ಕೊಳಗಳ ಮಹತ್ವ ತಿಳಿಯದಿರುವುದು ದುರ್ದೈವ. ಅಂತರ್ಜಲ ಹೆಚ್ಚಿರುವ ಕೊಳಗಳು ಅಸಂಖ್ಯ ಜೀವಿಗಳಿಗೆ ಆಶ್ರಯವೂ ಹೌದು. **(ಡಾ ಎನ್ ಎ ಮಧ್ಯಸ್ಥ ಅವರ ಉಡುಪಿ ಜಿಲ್ಲೆ ಪರಿಸರೀಯ ಸ್ಥಿತಿಗತಿ, ಉಡುಪಿ ಉತ್ಸವ ಸಂಭ್ರಮ ೨ ಸವಿನೆನಪಿನ ಸಂಚಿಕೆಯಿಂದ ಈ ಘಟಕದ ಮಾಹಿತಿಯನ್ನು ಸಂಕಲಿಸಿದೆ).**

* * * * *